
# ಅಖಿಲ ಭಾರತ ಪತ್ರಿಕೆ

## ಡಿಸೆಂಬರ್ 2021

# ಕರ್ಮದ ನಿಯತಿ

ಬೆಲೆ : 15/-



ಜಡಸತ್ತೆ ಮೇಲೆ ಅದರ ಪಾದಗಳು ಆಧಾರಗೊಂಡರೂನು
ಧೀಶಕ್ತಿಯಲ್ಲದರ ರೆಕ್ಕೆಗಳು ಅನಂತವನು ಮೀರಿ ತಾನು

**ಅನು: ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 11 ಪುಟ 267)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**ಅಖಿಲ ಭಾರತ ಪತ್ರಿಕೆ**
**ಡಿಸೆಂಬರ್ 2021**

ಸಂಪುಟ: 31 ಸಂಚಿಕೆ: 12


**ಪರಿವಿಡಿ**

# ಕರ್ಮದ ನಿಯತಿ

ಜಡತತ್ವದಲ್ಲಿ ದೈವತತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಕರ್ಮದ ನಿಯತಿ ಎಂದರೇನು?** 5

**ಕರ್ಮದ ನಿಯತಿಯ ಉದ್ದೇಶ** 9
ಅನು: ಶ್ರೀ ಪುಟ್ಟು ಕುಲಕರ್ಣಿ

**ಕರ್ಮ ನಿಯತಿ ಮತ್ತು ಮುಕ್ತತ್ವ** 13
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ 'ವೇದ ರಹಸ್ಯ'** 26
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 38
ಅನು: ಜಾನ್ವಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು** 54
– ಡಾ॥ ಶಂ.ಬಾ. ಜೋಶಿ

**ಶ್ರೀ ಅರವಿಂದರು–150**
**ಸಾಧಕರು: ಪೂರ್ಣಯೋಗದ ಪಥಿಕ "ಮಧುರಚೆನ್ನರು" – 2** 61
– ಡಾ॥ ಎಸ್.ಕೆ. ಕೊಪ್ಪಾ, ಇಂಡಿ

**ಶ್ರೀ ಅರವಿಂದರ ಕವನ 'ಗಂಧ–ಬಂಧವದು ಛಂದ–ಸೌಗಂಧದಾನಂದ ನಂದದಲ್ಲಿ..'** 67
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 69



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಭಾರತೀಯ ಚಿಂತನಾ ವಿಧಾನಗಳಲ್ಲಿ ಕರ್ಮದ ನಿಯತಿ ಎನ್ನುವದು ಅತ್ಯಂತ ಹೃದಯಂಗಮವಾಗಿರುವ ವಿಷಯವಾಗಿದೆ. ಇದು ಜೀವನದ ಅತಿ ಗೂಢಮಯವಾದ ವಿಧಿ–ವಿಧಾನದ ವೈರುದ್ಧತೆಗಳ ಕುರಿತು ಇದು ಹೇಳುತ್ತಿದ್ದರೂ, ಇದರ ಹಿಂದೆ ಇರುವ ನಿಯತಿಯು ಮಾತ್ರ ಅತ್ಯಂತ ಗೂಢವಾಗಿರುವ ಒಗಟಿನ ಮಾಯಾಚೌಕದಂತಿದೆ. ಅದಕ್ಕಾಗಿ ಇದು ಗಂಭೀರವಾದ ಹಾಗೂ ಆಳವಾದ ಅಧ್ಯಯನವನ್ನು, ಅದರ ಮೂಲಕ ವಿವರಣೆಯನ್ನು ಬಯಸುತ್ತದೆ. ಇಲ್ಲಿ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಜ್ಞಾನಾಧಾರಿತವಾದ ಅಭಿವ್ಯಕ್ತಿಗಳಲ್ಲಿ, ಈ ಕರ್ಮ ನಿಯತಿಯ ಕುರಿತು ರೂಪಣೆಗಳಿವೆ. ಪರಿಹಾರಗೊಳದೇ ಉಳಿದ ಇಂತಹ ಒಗಟುಗಳಿಗೆ ಅವರು ಪರಿಹಾರ ಕಂಡುಕೊಳ್ಳಲು ಒಂದು ನಿಯತಿ ಪಥವನ್ನು ರೂಪಿಸಿದ್ದಾರೆ. ಇದರ ಜೊತೆಗೆ ಕರ್ಮವು ವಿಕಾಸದಲ್ಲಿ ವಹಿಸುವ ಪಾತ್ರದ ಕುರಿತೂ ಮಹತ್ವಪೂರ್ಣ ಪಾತ್ರ ವಹಿಸುತ್ತಿರುವದನ್ನು ಸ್ಪಷ್ಟ ಚಿತ್ರಣಗಳಲ್ಲಿ ಕೊಟ್ಟಿದ್ದಾರೆ. ಕರ್ಮ ಎಂದರೆ ಕೇವಲ ನ್ಯಾಯದ–ಯಾಂತ್ರಿಕ ಸ್ವರೂಪದ ನಿಯಮವಲ್ಲ, ಆದರೆ ಇದು ನಮ್ಮ ಆತ್ಮವು ಯಾವುದನ್ನು ಅಭೀಪ್ಸೆಗೊಂಡು ಪ್ರಗತಿ ಸಾಧಿಸಲು ಯತ್ನಿಸುತ್ತದೆಯೋ ಅದಕ್ಕೆ ಸಹಾಯ ಮಾಡುತ್ತಿರುವ ಪ್ರಜ್ಞಾಸ್ವರೂಪಿಯಾಗಿದೆ. (ಎಐಎಮ್)

*

## ಸಂಪಾದಕೀಯ


ನಿರಾಕಾರವಾಗಿರುವ ಚಿರಂತನ ಅಸ್ತಿತ್ವವು ಋತವೂ ಆಗಿದೆ; ಧರ್ಮವೂ ಆಗಿದೆ. ಹೀಗಾಗಿ ಇದನ್ನು ನಿಯತಿಯಾಗಿಯೂ ಕಾಣಲಾಗುತ್ತಿದೆ. ಋತದ ಅಭೀಪ್ಸೆಯೂ ಸಹಿತ ತನ್ನನ್ನೇ ತಾನು ದೃಷ್ಟಿಸಿಕೊಳ್ಳುವದಾಗಿದೆ. ನಿರಾಕಾರವನ್ನು ನಿರಾಕಾರವೇ ದೃಷ್ಟಿಸಿಕೊಳ್ಳುವದು ಹೇಗೆ? ಸಾಕಾರವಾಗಿದ್ದುದು ನಿರಾಕಾರ–ವಾಗುವದು ಪಥವೋ ಅಥವಾ ನಿರಾಕಾರವಾಗಿದ್ದುದು ಸಾಕಾರಗೊಳ್ಳುವದು ವಿಕಾಸವೋ? ಪ್ರಳಯವೂ ನಿರಾಕಾರವನ್ನು ರೂಪಿಸುತ್ತಿದೆ ಎಂದಾದಲ್ಲಿ, ಪ್ರಳಯದ ಪ್ರಕ್ರಿಯೆಯಗೆ ಒಳಪಡುವ ಸಾಕಾರಗಳು ಉದಿಸಿದ್ದಾದರೂ ಎಲ್ಲಿಂದ? ಋತದ ಸ್ವರೂಪವು ಕರ್ಮದ ನಿಯತಿಯನ್ನು ರೂಪಿಸುತ್ತಿದೆಯೇ? ಇಲ್ಲವೆ

ಕರ್ಮವು ಜಡದ ಮೂಲಕ 'ಸ್ವ'ರೂಪವನ್ನು ರೂಪಾಂತರಣ ಪಡೆಯುವ ದೃಶ್ಯವಾಗುತ್ತದೆಯೋ? ಕರ್ಮದ ಹಿನ್ನೆಲೆಯಲ್ಲಿ ಎಲ್ಲವೂ ದೃಷ್ಟಸಂಗತಿಗಳೇ ಆಗಿವೆ.

ಆತ್ಮವು ಪಂಚಭೂತಾತ್ಮಕವಾಗಿರುವ ಕವಚದಲ್ಲಿ ಅವತರಣಗೊಳ್ಳುವದು ಒಂದು ಕರ್ಮವೇ ಆಗಿದೆ. ಇದು ಮತ್ತೆ ಈ ಮೃಣ್ಮಯದ ಕವಚದ ಆವರಣವನ್ನು ಮೀರಿ ಅವಕಾಶವಾಗುವದೂ ಸಹಿತ ಕರ್ಮದ ಪ್ರಕ್ರಿಯೆಯೇ ಆಗಿದೆ. ಹೀಗಾಗಿ ಮಾನವ ಕುಲದ ಚಿಂತನಾ ವಿಕಾಸದ ದಾಖಲಾತಿಗಳಲ್ಲಿ, ಈ ಕರ್ಮದ ಕುರಿತು ನಾನಾ ವಿಧವಾದ ಆಯಾಮಗಳು ರೂಪುಗೊಂಡಿವೆ. ವಿಭಿನ್ನ ನೆಲೆಯ ಚಿಂತನಾ ವ್ಯವಸ್ಥೆಗಳೂ ಸಹಿತ ಈ ಗೂಢ ವಿಷಯದ ಕುರಿತು ಅವಿರತವಾಗಿ ವಿಶ್ಲೇಷಣೆ ನಡೆಸಿವೆ. ಆಯಾಮಗಳನ್ನು ಸೃಷ್ಟಿಸಿವೆ. ಬದುಕಿನ ಈ ರಹಸ್ಯವನ್ನು ಅರಿತುಕೊಳ್ಳುವಲ್ಲಿ ರೂಪಣೆಗೊಂಡ ಪಥವು ಅಷ್ಟೇ ವೈವಿಧ್ಯಮಯತೆಯಿಂದ, ಮತ್ತೂ ಮತ್ತೂ ಜಿಜ್ಞಾಸೆಗೆ ಒಳಪಡುತ್ತ, ಪರಿಪಕ್ವ ಪರಿಪೂರ್ಣತೆಯ ಹಂತವನ್ನು ತಾಳುವ ವಿಧಾನವನ್ನು ಶ್ರೀ ಅರವಿಂದರು ತೋರಿಸಿದ್ದಾರೆ.

ಚಿಂತನ, ವಾಕ್ ಅಥವಾ ಶಬ್ದ, ಅನುಭವ, ಕ್ರಿಯೆಗಳೆಲ್ಲವೂ ಪ್ರಕೃತಿಸಹಜ ಶಕ್ತಿಯಿಂದ ಕ್ರಿಯಾಪ್ರವೃತ್ತವಾಗಿರುವಲ್ಲಿ ಅದು 'ಕರ್ಮ'ವನ್ನು ಸಂರಚಿಸುತ್ತದೆ. ಇವುಗಳೆಲ್ಲವೂ ಈ ಸ್ವಭಾವವನ್ನು ಒಂದು ನಿರ್ದಿಷ್ಟಗೊಳಿಸಲಾಗಿರುವ ರೀತಿಯಲ್ಲಿ – ಒಂದು ದಿಕ್ಕಿನೆಡೆ ಅಥವಾ ಮತ್ತೊಂದು ದಿಸೆಯೆಡೆಗೆ ಪ್ರಗತಿಗೊಳ್ಳಲು ಸಹಾಯಕಾರಿಯಾಗಿರುತ್ತವೆ, ಜೊತೆಗೆ ಈ ಸ್ವಭಾವ ಮತ್ತು ಇದರ ಕ್ರಿಯೆಗಳು ಮತ್ತು ಪ್ರತಿಕ್ರಿಯೆಗಳು ಆಂತರಂಗಿಕವಾಗಿಯೋ ಅಥವಾ ಬಾಹ್ಯದ ಸ್ಥಿತಿಯಲ್ಲಿಯೋ ಸಂದರ್ಭಗಳನ್ನು/ದೃಷ್ಟಾಂತಗಳನ್ನು ಸೃಷ್ಟಿಸುತ್ತವೆ.

ಈ ವಿಷಯದ ಕುರಿತು ವಿಶ್ಲೇಷಣಾತ್ಮಕವಾದ ವಿವರಗಳ ಮೂಲಕ ಹಾಗೂ ಈ ರೀತಿಯ ಕರ್ಮದ ಸಾಧನೆಯಲ್ಲಿ ಸತ್ಯವನ್ನು ಕಂಡುಕೊಳ್ಳಲು ಯಶಸ್ವಿಯಾಗಿರುವ, ಮಾರ್ಗದರ್ಶಿಯಾಗಿರುವ ವ್ಯಕ್ತಿಗಳ ಪರಿಚಯದ ಮೂಲಕ ಹಾಗೂ ಕರ್ಮದ ಕುರಿತು ನಮ್ಮ ದೇಶದ ಚಿಂತನಾ ವ್ಯವಸ್ಥೆಯಲ್ಲಿ ರೂಪಣೆಗೊಂಡಿರುವ ಅಧ್ಯಯನದ ಮೂಲಕ, ಶ್ರೀ ಅರವಿಂದರ ಮಾರ್ಗದವರೆಗೂ ಘಟಿಸಿರುವ ವಿಕಾಸದ ಪಥದ ಕುರಿತು ಒಳನೋಟ ನೀಡುವ ಅಧ್ಯಯನವೊಂದನ್ನು ಇಲ್ಲಿ ಒದಗಿಸಲಾಗಿದೆ. [ಪಿಪಿಕೆ]



ವಿಶ್ವದಾ ತಂತ್ರಗಳನಂದು ಅವಳು ಮುಖಾಮುಖಿಯಲ್ಲಿ ಕಂಡು
ಚಲಿಪ ಚಕ್ರಗಳ ಪಥದಲಿಂದುದುವು ದೃಢಚಿತ್ತವಾಗಿ ನಿಂದು
ಇದ್ದಕಿದ್ದಂತೆ ಹಿಡಿತ ಪಡೆದಿರುವ ಮಾಯದಾ ಸನ್ನೆ–ಬಲವು
ಗವಸಿನೊಳಗಿದ್ದ ಅನಿರ್ವಾಚ್ಯವದು ಚಲಿಸಿ ನಿಸೀಮ–ಕೃತುವು

ಒಂದು ಪ್ರಾರ್ಥನೆಯು ಒಂದು ನಿಷ್ಣಾತ ಕ್ರಿಯೆಯೊಂದು ಪರಮ–ಚಿತ್ತ
ಜಗತ್–ಭಾವವನು ದಾಟಿ ಸಾಗಲೆನೆ ಮನು–ಬಲಕೆ ಯೋಗವಿತ್ತು
ಆಗ ಅದ್ಭುತವು ಸರಳ ನಿಯಮದಲಿ ತಾನನುಷ್ಠಾನಗೊಂಡು
ವಿರಾಟ್–ಉದ್ದೇಶ ಒಂದಿರಲು ಆಗ, ಗತಿಯದುವು ಬದಲುಗೊಂಡು
ಏಕಮೇವಾದ್ವಿತೀಯ ಚಿಂತನೆಯು ವಿಶ್ವಾತ್ಮವಾಯಿತಿಂದು.

**ಸಾವಿತ್ರಿ; ಪುಟ 20** **– ಶ್ರೀ ಅರವಿಂದರು**

# ಕರ್ಮದ ನಿಯತಿ ಎಂದರೇನು?

**– ಅನುವಾದ: ಪುಟ್ಟು ಕುಲಕರ್ಣಿ**

**ಕರ್ಮ ಎಂದರೆ ಏನು?**

ಚಿಂತನ, ವಾಕ್ ಅಥವಾ ಶಬ್ದ, ಅನುಭವ, ಕ್ರಿಯೆಗಳೆಲ್ಲವೂ ಸಹಜ ಕರ್ಮಶಕ್ತಿಯಿಂದ ಕ್ರಿಯಾಪ್ರವೃತ್ತವಾಗಿರುವಲ್ಲಿ ಅದು 'ಕರ್ಮ'ವನ್ನು ಸಂರಚಿಸುತ್ತದೆ. ಇವುಗಳೆಲ್ಲವೂ ಈ ಸ್ವಭಾವವನ್ನು ಒಂದು ನಿರ್ದಿಷ್ಟಗೊಳಿಸಲಾಗಿರುವ ರೀತಿಯಲ್ಲಿ – ಒಂದು ದಿಕ್ಕಿನೆಡೆ ಅಥವಾ ಮತ್ತೊಂದು ದಿಸೆಯೆಡೆಗೆ ಪ್ರಗತಿಗೊಳ್ಳಲು ಸಹಾಯಕಾರಿಯಾಗಿರುತ್ತವೆ, ಜೊತೆಗೆ ಈ ಸ್ವಭಾವ ಮತ್ತು ಇದರ ಕ್ರಿಯೆಗಳು ಮತ್ತು ಪ್ರತಿಕ್ರಿಯೆಗಳು ಆಂತರಂಗಿಕವಾಗಿಯೋ ಅಥವಾ ಬಾಹ್ಯದ ಸ್ಥಿತಿಯಲ್ಲಿಯೋ ಸಂದರ್ಭಗಳನ್ನು/ದೃಷ್ಟಾಂತಗಳನ್ನು ಸೃಷ್ಟಿಸುತ್ತವೆ; ಈ ಎಲ್ಲ ಅಂಶಗಳೂ ಸ್ವಭಾವವನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರಗತಿಗೊಳಿಸುತ್ತವೆ. ಈ ಸ್ವಭಾವ ಹಾಗೂ ಇದರ ಕ್ರಿಯೆಗಳು ಪ್ರತಿಕ್ರಿಯೆಗಳೂ ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ತಮ್ಮದೇ ಆದ ಪರಿಣಾಮಗಳ ಉಗಮಕ್ಕೂ ಕಾರಣವಾಗುತ್ತವೆ. ಇವು ಅನ್ಯ ಸಂಗತಿಗಳ ಮೇಲೆಯೂ ಕ್ರಿಯೆಯನ್ನು ತೋರಿ ಅಲ್ಲಿ ಸಾಮಾನ್ಯವಾಗಿ ಕ್ರೋಢೀಕರಣಗೊಂಡಿರುವ ಬಲಗಳ ಮೂಲಕ ಸಂಚಲನವನ್ನು ಸೃಷ್ಟಿಸಿ, ಅವು ತತ್–ಕ್ಷಣದಲ್ಲಿಯೇ ಅಥವಾ ತದನಂತರದಲ್ಲಿಯೋ ಅಲ್ಲಿಯೇ ಮರಳಿ ಆಗಮಿಸುತ್ತವೆ. ಅಭಿವ್ಯಕ್ತಿಗೊಳ್ಳದೇ ಇರುವ ಚಿಂತನಗಳೂ ಈ ರೀತಿಯ ಬಲವಾಗಿ ಹೊರಹೊಮ್ಮಿ ತಮ್ಮದೇ ಆದ ಪರಿಣಾಮಗಳನ್ನು ಉತ್ಪಾದಿಸುತ್ತವೆ. ಚಿಂತನವಾಗಲಿ ಅಥವಾ ಮಾತಿನ ಮೂಲಕ ಅಥವಾ ಕ್ರಿಯೆಯ ಮೂಲಕ ಅಭಿವ್ಯಕ್ತಗೊಂಡಾಗಲೇ ಮಾತ್ರ ಪರಿಣಾಮಕಾರಿಯಾಗಿರುತ್ತದೆ ಎಂದು ಭಾವಿಸುವದು ತಪ್ಪಾಗುತ್ತದೆ. ಧ್ವನಿಯಲ್ಲಿ ಪ್ರಕಟಗೊಳ್ಳದ ಚಿಂತನವಾಗಲೀ, ಅಭಿವ್ಯಕ್ತಗೊಳ್ಳದ ಇಚ್ಛೆಯಾಗಲೀ ಇವೂ ಸಹಿತ 'ಕ್ರಿಯಾಶೀಲ ಶಕ್ತಿ'ಗಳೇ ಆಗಿದ್ದು, ತಮ್ಮದೇ ಆದ ಸ್ಪಂದನಗಳನ್ನು ಮತ್ತು ಪರಿಣಾಮಗಳನ್ನು ಅಥವಾ ಪ್ರತಿಕ್ರಿಯೆಯನ್ನು ಉತ್ಪಾದಿಸಬಲ್ಲವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/520**

ಯಾವುದೇ ವ್ಯಕ್ತಿಯು ಸಾಮಾನ್ಯ ಮಾನವ ಪ್ರಜ್ಞಾಹಂತದಿಂದ ಮುಂದೆ ಸಾಗಿ ಹೋಗುವದಿಲ್ಲವೋ ಅಲ್ಲಿಯವರೆಗೂ ಕರ್ಮದ ಪರಿಣಾಮಗಳ ಬಂಧನಗಳಿಗೆ ಸುದೀರ್ಘ ಕಾಲದವರೆಗೆ ಅಲ್ಲಿಯೇ ಉಳಿಯಬೇಕಾಗುತ್ತದೆ. ಈ ಕರ್ಮದ ಎಲ್ಲ ಬಂಧನಗಳನ್ನು ಮೀರಿ ಆ ಊರ್ಧ್ವದಲ್ಲಿರುವ ಆಧ್ಯಾತ್ಮಿಕ ಪ್ರಜ್ಞೆಯ(ಚೇತನದ) ವಲಯಕ್ಕೆ ಅಂದರೆ ಎಲ್ಲಿ ಎಲ್ಲಾ ಬಂಧನಗಳೂ ಮುಕ್ತಿಯನ್ನು ಪಡೆಯುತ್ತವೆಯೋ – ಅಲ್ಲಿಗೆ ಅವನು ತಲುಪಬೇಕಾಗಿದೆ. ದಿವ್ಯತ್ವದ ಕುರಿತು ಪರಿಪೂರ್ಣವಾದ ವಿಶ್ವಾಸವನ್ನು ಹೊಂದಿ ಆ ದಿವ್ಯತ್ವದ ಇಚ್ಛೆಗೆ ಸಮರ್ಪಣೆಯನ್ನು ಮಾಡಿಕೊಂಡಲ್ಲಿ ಆಗ ಆ ಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/520 – ಶ್ರೀ ಅರವಿಂದರು**

ಜೀವನದಲ್ಲಿ ವಸ್ತು–ವಿಷಯಗಳ ಸರ್ವಪ್ರಕಾರವೂ ತಮ್ಮಷ್ಟಕ್ಕೆ ತಾವೇ ಆಹ್ವಾನವೀಯುವಂತಿವೆ. ಯಾರೇ ಆಗಲಿ ಆ ದಿವ್ಯತ್ವದಿಂದಲೇ ಕಳಿಸಲ್ಪಟ್ಟಿವೆ ಎನ್ನುವ ಕುರಿತು ಯಾವುದೇ ವಿಷಯವನ್ನು ಪಡೆದುಕೊಳ್ಳುವಂತಿಲ್ಲ. ಅಲ್ಲಿ ಆಯ್ಕೆಗೆ ಅವಕಾಶವಿದೆ. ಆಯ್ಕೆಯಲ್ಲಿನ ಪ್ರಮಾದವು ಪರಿಣಾಮಗಳನ್ನು ರೂಪಿಸುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/521**

ಕರ್ಮ ಎನ್ನುವದು ಕೇವಲ ಯಾಂತ್ರಿಕ ಉಪಕರಣವಿದ್ದಂತೆ. ಇದು ಯಾವುದೇ ಕಾರಣಕ್ಕೂ ಐಹಿಕ–ಅಸ್ತಿತ್ವಕ್ಕೆ ಯಾವುದೇ ರೀತಿಯಲ್ಲಿಯೂ ಮೂಲಭೂತ ಕಾರಣವಾಗಿರುವದಿಲ್ಲ. ಅದು ಹಾಗೆ ಇರುವಂತೆಯೂ ಇಲ್ಲ. ಯಾವಾಗ ಈ ಆತ್ಮವು ಅಸ್ತಿತ್ವಗೊಳ್ಳಲು(ರೂಪಧಾರಣೆಗೊಳ್ಳಲು) ಪ್ರವೇಶಿಸುತ್ತದೆಯೋ, ಆ ಹಂತದಲ್ಲಿ ಅದು ಯಾವುದೇ ಕರ್ಮವನ್ನು ಹೊಂದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/537 – ಶ್ರೀ ಅರವಿಂದರು**

## ಕರ್ಮ ಎನ್ನುವದು ಕಠಿಣ ವ್ಯವಸ್ಥೆಯಲ್ಲ

ನಮ್ಮ ನಮ್ಮ ಕ್ರಿಯೆಗಳಿಂದಲೇ ನಮ್ಮಷ್ಟಕ್ಕೆ ನಾವೇ ನಮ್ಮ ಅದೃಷ್ಟವಾಗಿದ್ದೇವೆ. ಆದರೆ ನಮ್ಮಿಂದ ಸೃಷ್ಟಿಗೊಂಡ ಈ ಅದೃಷ್ಟವೂ ಸಹಿತ ನಮ್ಮನ್ನೇ ಬಂಧಿಸಿರುತ್ತದೆ. ನಾವು ಏನನ್ನು ಬಿತ್ತುತ್ತೇವೆಯೋ ಅದನ್ನೇ ಫಲಸ್ವರೂಪದಲ್ಲಿ ಪಡೆದುಕೊಳ್ಳುತ್ತೇವೆ. ಈ ರೀತಿಯ ಫಲವು ಈ ಜನ್ಮದಲ್ಲಿಯಾದರೂ ಆಗಬಹುದು ಅಥವಾ ಮತ್ತೊಂದು ಜನ್ಮದಲ್ಲಿ ಘಟಿಸಬಹುದು. ಆದರೂ ನಾವು ಭವಿಷ್ಯದ ಸಲುವಾಗಿ ನಮ್ಮ ಅದೃಷ್ಟವನ್ನು ಸೃಷ್ಟಿಸಿಕೊಳ್ಳುತ್ತಲೇ ಇರುತ್ತೇವೆ. ಅದೂ ಈ ಹಿಂದೆ ನಿರ್ಮಿತಿಗೊಂಡಿರುವ ಅದೃಷ್ಟವು ಇನ್ನೂ ಚಾಲ್ತಿಯಲ್ಲಿ ಇರುವಾಗಲೇ ಸೃಷ್ಟಿಸಿಕೊಳ್ಳುತ್ತೇವೆ. ಇದು ನಮ್ಮ ಇಚ್ಛೆಗೆ ಒಂದು ಅರ್ಥಸ್ವರೂಪವನ್ನು ಕೊಡುತ್ತಿದ್ದು, ಆದರೆ ಇದನ್ನು ಯುರೋಪಿಯನ್ನ ವಿಮರ್ಶಕರು ತಪ್ಪು ಅಭಿಪ್ರಾಯಗಳಲ್ಲಿ ಗ್ರಹಿಸುವಂತೆ, ಅತ್ಯಂತ ಕಠಿಣತಮವಾಗಿ ಮತ್ತು ನಿಷ್ಫಲವಾಗಿರುವ ಅದೃಷ್ಟವಾದದ ನಿಯತಿಯ ಸ್ವರೂಪದಲ್ಲಿ ರೂಪಣೆಗೊಂಡಿರುವದಿಲ್ಲ. ಆದರೆ ನಮ್ಮ ಕ್ರಿಯಯೆ ಆಗಲಿ ಅಥವಾ ಇಚ್ಛೆಯೇ ಆಗಲಿ, ಅವು ಆಗಾಗ್ಗೆ ರದ್ದುಗೊಳಿಸಲ್ಪಡಬಹುದು. ಇವೆಲ್ಲವೂ ಒಂದು ಬಲವಾದ ಪರಿಣಾಮಗಳನ್ನು ಒದಗಿಸುವ ಸ್ವರೂಪದಲ್ಲಿ ಇದ್ದು, ಇದಕ್ಕೆ **"ನೇಯ್ಗೆ ಮಾಡಲ್ಪಟ್ಟ ಕರ್ಮ" (ಉತ್ತಾ ಫಾ ಕರ್ಮ)** – ಎಂದು ಹೆಸರಿದೆ. ಇದು ಮಲಾಯಾ ದೇಶದ ಶಬ್ದವಾಗಿದೆ. ಹಿಂದಿಯಲ್ಲಿ ಇದಕ್ಕೆ 'ಉತ್ತಾಕಾಫಾ – ಅಥವಾ ಉತ್ಸುಕತೆಯ' ನಿಯತಿಯಾಗಿದೆ. ಹೀಗಾಗಿ ಇದನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಸಾಧ್ಯವಿಲ್ಲ. ಇಲ್ಲಿ ಸಾಧಿತಗೊಳ್ಳುವ **ಚಿನ್ಮಯೀ ಚೇತನವು** ಹಾಗೂ ಜೀವನವೂ ಸಹಿತ ರದ್ದುಗೊಳ್ಳಲ್ಪಡುವ ಅಥವಾ ಕರ್ಮವನ್ನು ನಿವಾರಿಸುವದಕ್ಕೆ ಬಲವನ್ನು (ಶಕ್ತಿಯನ್ನು) ಒದಗಿಸುತ್ತದೆ. ಅದಕ್ಕಾಗಿ ನಾವು 'ದೈವೀ ಇಚ್ಛೆ'ಯ ಜೊತೆಗೆ ವೈಶ್ವಿಕ ಅಥವಾ ಸಂಯೋಗಗೊಂಡೇ ಅದರೊಳಗೆ ವಿಲೀನಗೊಳ್ಳಲು ಪ್ರವೇಶಿಸಬೇಕಾಗಿದೆ. ಏಕೆಂದರೆ ಇದು ನಮಗೆ ಪರಿಮಿತಿದ (ದತ್ತಗೊಳಿಸಿದ) ಕೆಲವು ನಿಬಂಧನೆಗಳನ್ನು ಅದು ಯಾವುದನ್ನು ಸೃಷ್ಟಿಸಿತ್ತೋ ಅದಕ್ಕೆ ಹೊಸ ಸೃಷ್ಟಿಯಾಗಿ ಆಕರಿಸುವ ನಿಬಂಧನೆಗಳನ್ನು ರದ್ದುಗೊಳಿಸುತ್ತದೆ. ಸೀಮಿತತನದಲ್ಲಿ ನಿರ್ಧರಿತವಾಗಿದ್ದ ರೇಖೆಗಳು ಕಣ್ಮರೆಯಾಗುತ್ತವೆ. ಅಲ್ಲಿ ಮತ್ತೂ ಅಧಿಕ ಪ್ರಮಾಣದ ಸುನಮ್ಯತೆಯ ಸ್ವಾತಂತ್ರ್ಯ ಹಾಗೂ ವ್ಯಾಪ್ತಿತ್ವ ಇರುತ್ತವೆ.

ಕರ್ಮವಾಗಲೀ ಅಥವಾ ಭವಿಷ್ಯ–ಶಾಸ್ತ್ರವಾಗಲೀ ಯಾವುದೇ ಕಾರಣಕ್ಕೂ ಒಂದು ಕಠಿಣತಮವಾಗಿರುವ ಮತ್ತು ಎಂದಿಗೂ ಮೌನವಾಗಿಯೇ ಇರುವ ಅದೃಷ್ಟದ ಗುರಿಯನ್ನು ನಿಗದಿ ಮಾಡುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/517**

**ಕರ್ಮದ ಅಂತರಾರ್ಥ**[1]

ಅಸ್ತಿತ್ವದಲ್ಲಿ ಇರುವ ಸರ್ವಸ್ವವೂ ಒಂದು ವೈಶ್ವಿಕ ಶಕ್ತಿಯ ಕಾರ್ಯದ ಪ್ರಕ್ರಿಯೆಯೇ ಆಗಿದೆ. ಆ ಮೂಲಕ ವಸ್ತು–ವಿಷಯಗಳು ಸಂರಚನೆಗೊಳ್ಳುತ್ತವೆ. ಇದೇ ಕರ್ಮದ ಅಂತರಾರ್ಥವೂ ಹೌದು. ಅದೇ ರೀತಿಯಲ್ಲಿ ವಿಘಟನೆಯನ್ನು ಸಹಿತ ಇದೇ ಅಂತರಾರ್ಥವಿದೆ. ಆದರೆ ಈ ವಿಘಟನೆಯು ಮತ್ತೆ ಮುಂದಿನ ಸಂರಚನೆಯ ಸಲುವಾಗಿ ಇರುತ್ತದೆ. ಒಟ್ಟಿನಲ್ಲಿ ಇದು ಅವಿರತವಾಗಿ ಮುಂದುವರೆಯುತ್ತಿರುವ ಸರಪಳಿಯ ಕ್ರಿಯೆಯಂತಿದೆ. ಇಲ್ಲಿನ ಪ್ರತಿಯೊಂದು ಕೊಂಡಿಯೂ ಅನಂತ್ಯದೊಂದಿಗೆ ಜೋಡಣೆಗೊಳ್ಳುತ್ತಿರುತ್ತವೆ. ಎಂದೆಂದಿಗೂ ವಿಲಯನಗೊಳ್ಳದ ಸ್ಥಿತಿಯಲ್ಲಿ ಇರುತ್ತವೆ. ಇಲ್ಲಿ ಗತಕಾಲದಿಂದಲೂ ಜೋಡಣೆಗೊಂಡಿರುವ ಅಸಂಖ್ಯಾತ ಕೊಂಡಿಗಳಿವೆ. ಇವೆಲ್ಲವೂ ನಿರ್ದಿಷ್ಟವಾದ ಸಂಬಂಧಗಳಿಂದಲೇ ನಿಯಂತ್ರವಿನ ಕಕ್ಷೆಯಲ್ಲಿ ಇರುತ್ತವೆ. ಇಲ್ಲಿ ನಿಗದಿತವಾದ ಕಾರಣ ಮತ್ತು ಪರಿಣಾಮಗಳ ಸಂಘತ್ವ, ವರ್ತಮಾನದ ಕ್ರಿಯೆ, ಭೂತಕಾಲದ ಕ್ರಿಯೆಯ ಫಲಿತಾಂಶ ಇವುಗಳನ್ನು ಆಧರಿಸಿಕೊಂಡೇ ರೂಪುಗೊಳ್ಳುತ್ತ, ಭವಿಷ್ಯದ ಕ್ರಿಯೆಯೂ ವರ್ತಮಾನದ ಕ್ರಿಯೆಯ ಫಲಿತಾಂಶವಾಗಿರುತ್ತದೆ. ಕಾರಣಗಳೆಲ್ಲವೂ ಈ ಶಕ್ತಿಯ ಕ್ರಿಯೆಯೇ ಆಗಿವೆ, ಮತ್ತು ಸರ್ವ–ಪರಿಣಾಮವೂ ಸಹಿತ ಈ ಶಕ್ತಿಯ ಅವಿರತ–ಕ್ರಿಯೆಯೇ ಆಗಿದೆ. ಇಲ್ಲಿರುವ ನೈತಿಕ ಮಹತ್ವವೆಂದರೆ, ನಮ್ಮೆದುರಿಗೆ ಇರುವ ಎಲ್ಲ ಅಸ್ತಿತ್ವಗಳು ಆ ಶಕ್ತಿಯಿಂದಲೇ ಸೃಜಿಸಲ್ಪಟ್ಟು ಸಾದರಗೊಂಡಿರುವ ಘಟನೆಗಳಾಗಿವೆ. ಇದು ನಮ್ಮೊಳಗೆ ಇದೆ. ನಾವು ಅದರಿಂದಲೇ ಸೃಷ್ಟಿಗೊಂಡಿದ್ದೇವೆ. ಜೊತೆಜೊತೆಗೆ ಈ ಶಕ್ತಿಯ–ಸ್ವಭಾವಕ್ಕೆ ಅನುಗುಣವಾಗಿಯೇ 'ಕಾರಣ'ದ ಸ್ವರೂಪದಲ್ಲಿಯೂ ಅಭಿವ್ಯಕ್ತಗೊಂಡಿರುತ್ತವೆ. ಇದರಿಂದಾಗಿ, ಈ ಶಕ್ತಿಯು ಮತ್ತೆ ಪರಿಣಾಮ–ಸ್ವರೂಪವಾಗಿ ಮರುಪಯಣಿಸುತ್ತದೆ. ಇದೇ ವಿಶ್ವ ನಿಯಮವೂ ಆಗಿದೆ. ನಿಯತಿಯಾಗಿದೆ. ಇದಿಲ್ಲದೇ ವಿಶ್ವದಲ್ಲಿ ಏನೇನೂ ಇರುವದಿಲ್ಲ. ನಮ್ಮ ಜಗತ್ತಿನಲ್ಲಿರುವ ಅಸ್ತಿತ್ವವಾಗಿ (ಜೀವನವಾಗಿ), ಅದರ

ನಿರ್ವಹಣೆಯಿಂದ ತಪ್ಪಿಸಿಕೊಳ್ಳಬಹುದಾದ ಸಂದರ್ಭಗಳಾಗಲಿ ಇರುವದಿಲ್ಲ. ಇದು 'ಕರ್ಮದ ತತ್ತ್ವಶಾಸ್ತ್ರೀಯ ನೈಜ ಸಿದ್ಧಾಂತ'ವಾಗಿದೆ. ಇದೇ ನಮ್ಮ ಭೌತ ವಿಜ್ಞಾನವೂ ಪ್ರಗತಿಗೊಂಡಿರುವ ಪಥವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/331–32**

---

**ಟಿಪ್ಪಣಿ:**

1. ಭಾರತದಲ್ಲಿ 'ಕರ್ಮ'ದ ಬಗೆಗೆ ಪ್ರಾಚೀನ ಕಾಲದಿಂದಲೂ ಅಧ್ಯಯನ ಪರಂಪರೆ ಪ್ರಗತಿಗೊಳುತ್ತಲೇ ಇದೆ. ಇದರ ಸಂಕ್ಷಿಪ್ತ ಸ್ವರೂಪವನ್ನು ಹಾಗೂ ಇದು ವಿಕಾಸಗೊಳ್ಳುತ್ತ ಶ್ರೀ ಅರವಿಂದರ ಮೂಲಕ "ಪೂರ್ಣತೆಯ" ಹಂತವನ್ನು ಪಡೆದುಕೊಳುತ್ತಿರುವ ಸಂಗತಿಗಳ ಹಿನ್ನಲೆಯಲ್ಲಿ, ಇಲ್ಲಿ ಅದು ಕ್ರಮಿಸುತ್ತ ಪಡೆದುಕೊಂಡ ಆಯಾಮಗಳ ಕುರಿತು ನಡೆದ ಅಧ್ಯಯನಗಳ ಅಂಶಗಳನ್ನು ಇಲ್ಲಿ ಟಿಪ್ಪಣಿಗಳ ಮೂಲಕ ಒದಗಿಸಲು ಪ್ರಯತ್ನಿಸಲಾಗಿದೆ.

---

## ಕರ್ಮ ನಿಯತಿಯ ಉದ್ದೇಶ

**– ಅನುವಾದ: ಪುಟ್ಟು ಕುಲಕರ್ಣಿ**

ಭಾರತೀಯ ತತ್ತ್ವಶಾಸ್ತ್ರ ಮತ್ತು ಮತಧರ್ಮದ ಎಲ್ಲಾ ಪ್ರಮುಖ ಸಿದ್ಧಾಂತಗಳಲ್ಲಿಯೂ 'ಕರ್ಮ'ವು ಶ್ರದ್ಧೆಯ ಅಂಶವಾಗಿಯೇ ಪರಿಗಣಿಸಲ್ಪಟ್ಟಿದೆ. ಬೌದ್ಧ ಸಂಪ್ರದಾಯದ ಪ್ರಕಾರವಾಗಿಯೇ, ಬುದ್ಧನ ಕಾಲಕ್ಕಿಂತಲೂ ಹಿಂದೆ ಇದ್ದ ಸದ್ಗೃಹಸ್ತ ಹಿಂದೂ ಆಚಾರ್ಯನೋರ್ವನು ಈ 'ಕರ್ಮ ಮಾರ್ಗವನ್ನು' ಪ್ರತಿಪಾದಿಸಿದನೆಂದೂ ಅಂತೆಯೇ ಬುದ್ಧನು ಕರ್ಮ ಮಾರ್ಗದ ಪ್ರವರ್ತಕನಲ್ಲವೆಂದೂ ಹೇಳುವದುಂಟು (ವಿವರಗಳಿಗೆ **'ಮಜ್ಜಿಮನಿಕಾಯ'** ಪಾಲಿಟೆಕ್ಸ್ಟ್ ಸೊಸೈಟಿ, ಲಂಡನ್, 1 ಪು483).

**ಪ್ರಾಚೀನ (ಬ್ರಾಹ್ಮಣ ಪ್ರಣೀತ 'ಕರ್ಮ' ಸಿದ್ಧಾಂತ):** ಆರ್ಷೇಯವಾದದ ವೇದಗಳಲ್ಲಿ ಕರ್ಮತತ್ತ್ವ ವಿಚಾರವು ಕಾಣುವದಿಲ್ಲ. ಅನಂತರ ಬಂದ ಮೊಟ್ಟಮೊದಲಿನ ಉಪನಿಷತ್ತುಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಈ ವಿಚಾರ ಬರುತ್ತದೆ. ಬ್ರಾಹ್ಮಣಗಳಲ್ಲಿಯೂ ಇದು ಮೊದಲಾಗುವದಾದರೂ ಸಂಸಾರ ರೂಪದ

ಪುನರ್ಜನ್ಮ ತತ್ತ್ವವಾಗಿ ಬರುವದಿಲ್ಲ. (**ಖುದ್ದಕಪಾಠ; ರತನಸುತ್ತ ಶ್ಲೋಕ 12**). ಅಲ್ಲಿ ಕರ್ಮತತ್ತ್ವ ಪುನರ್ಜನ್ಮ ತತ್ತ್ವದದೊಂದಿಗೆ ಸೇರಿಕೊಂಡಿರುವದರಿಂದ, ಯಾರಿಗಾದರೂ ತಮಗೆ ಸಲ್ಲತಕ್ಕದಲ್ಲದ ಸುಖ ಅಥವಾ ದುಃಖ ಬಂದರೆ ಅದಕ್ಕೆ ಕಾರಣ ಹಿಂದಿನ ಜನ್ಮದಲ್ಲಿ ಅವರು ಮಾಡಿದ ಕರ್ಮಫಲ ಎಂದು ವಿವರಿಸಲು ಸಾಧ್ಯವಾಗುತ್ತದೆ. ಕರ್ಮ ಮತ್ತು ಅದರ ಫಲಕ್ಕೆ ಸಂಬಂಧಿಸಿದ ಈ ಕರ್ಮ ಸಿದ್ಧಾಂತವು ಕ್ರಮೇಣ ವೈದಿಕ ಪ್ರಕೃತತ್ತ್ವ, ಅನುಭಾವ ಮತ್ತು ಧರ್ಮಶ್ರದ್ಧೆಗಳಿಂದ ಬೇರೆಯಾಯಿತು. ಹಿಂದೂ ಧರ್ಮದ ಜನಸಾಮಾನ್ಯರ ನಂಬಿಕೆಯ ಪ್ರಕಾರ ಕರ್ಮವು ಅವನವನ ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ–ಪುಣ್ಯ ಕಾರ್ಯಗಳ ಫಲಸ್ವರೂಪಿಯಾಗಿ, ಅವನ ಭವಿಷ್ಯವನ್ನು ನಿರ್ಣಯಿಸುವ ಅನಿವಾರ್ಯ ವಿಧಿರೂಪಿಯೂ ಆಗಿದೆ. ಬಿತ್ತಿರುವದನ್ನು ಬೆಳೆದುಕೊಳ್ಳುತ್ತಾನೆ; ಅನ್ಯರ ಪಾಪ, ಪುಣ್ಯಗಳು ಯಾರಿಗೂ ಪ್ರಾಪ್ತವಾಗುವದಿಲ್ಲ. ಆದರೆ ಈ 'ಕರ್ಮ' ಭಾವನೆಯು ಯಜ್ಞ, ತಪಸ್ಸು ಮತ್ತು ಪಶ್ಚಾತ್ತಾಪಗಳ ಬಗೆಗೆ ಇದ್ದ ಸನಾತನ ನಂಬಿಕೆಗೆ ಪ್ರಬಲವಾದ ಧಕ್ಕೆಯನ್ನು ತಂದಿತು ಎಂದು ಹಾಪಕಿನ್ಸ್ ಬರೆಯುತ್ತಾರೆ (ಜರ್ನಲ್ ಆಫ್ ರಾಯಲ್ ಏಶಿಯಾಟಿಕ್ ಸೊಸೈಟಿ 1906 (ಪುಟ 593). ಕರ್ಮದ ಈ ಪ್ರಚಲಿತ ಭಾವನೆ ಬೌದ್ಧರ 'ಮತಕಭಟ್ಟ ಜಾತಕ' ಎನ್ನುವ ಜನ್ಮಾಂತರದ ಕಥೆಯಲ್ಲಿಯೂ ಕಂಡು ಬರುತ್ತದೆ. ಬೃಹದಾರಣ್ಯಕೋಪನಿಷತ್ತಿನ ಯಾಜ್ಞವಲ್ಕ್ಯರ ಉಪದೇಶದಲ್ಲಿಯೂ ಸ್ಪಷ್ಟವಾಗಿ ರೂಪುಗೊಳ್ಳುವ ಕರ್ಮ ಸಿದ್ಧಾಂತವನ್ನು ಸಂಗ್ರಹಿಸಬಹುದಾಗಿದೆ. ಹೀಗೆ ಯಾಜ್ಞವಲ್ಕ್ಯರ ಉಪದೇಶ ಭಾಗದಲ್ಲಿ ವ್ಯಕ್ತವಾಗುವ ಬ್ರಾಹ್ಮಣ ಪ್ರಣೀತ ಕರ್ಮ ವಿಚಾರವೇ ಮುಂದೆ ಬೌದ್ಧ ಧರ್ಮದಲ್ಲಿ ಸ್ವಲ್ಪ ಮಾರ್ಪಾಟುಗಳೊಂದಿಗೆ ಸೇರಿಕೊಂಡಿದೆ (ಅತ್ಥಮಾಲಿನಿ, ಪುಟ 61). ಜಾರತ್ಕಾರವ ಆರ್ತಭಾಗ ಎನ್ನುವ ಮತ್ತೊಬ್ಬ ಉಪನಿಷತ್ ಋಷಿಯು ಯಾಜ್ಞವಲ್ಕ್ಯರೊಡನೆ ಕರ್ಮದ ನಿಗೂಢ ಪರಿಣಾಮಗಳ ಕುರಿತು ಜಿಜ್ಞಾಸೆ ನಡೆಸಿದ್ದನು. ಮನುಷ್ಯನ ಮರಣಾನಂತರದಲ್ಲಿ ಅವನ ಪುನರ್ಜನ್ಮ ಸ್ವರೂಪವನ್ನು ನಿರ್ಧರಿಸುವ ಕರ್ಮ ಸಿದ್ಧಾಂತವು ಬೃಹದಾರಣ್ಯಕೋಪನಿಷತ್ತಿನಲ್ಲಿ ಇದೆ. ಯಾಜ್ಞವಲ್ಕ್ಯರೂ ಕರ್ಮದ ಸಿದ್ಧಾಂತವನ್ನು, "ಮನುಷ್ಯನು ಆಶಾಜೀವಿ. ಅವನ ಆಶೆ ಇದ್ದಂತೆ ಸಂಕಟವೂ ಇರುತ್ತದೆ. ಸಂಕಲ್ಪದಂತೆ ಕಾರ್ಯೋನ್ಮುಖನಾಗುತ್ತಾನೆ. ಹೇಗೆ ಕಾರ್ಯಸಾಧನೆ ಮಾಡುವನೋ ಅದೇ ರೀತಿಯಲ್ಲಿ ಸಿದ್ಧಿಯನ್ನೂ ಪಡೆಯುವನು, ಅಂದರೆ ಯಾವುದನ್ನು ಕುರಿತು ಅವನು ಕಾರ್ಯೋನ್ಮುಖ–

ನಾಗುತ್ತಾನೆಯೋ ಅದನ್ನು ಪಡೆಯುತ್ತಾನೆ. ತನ್ನ ಕೃತಿಗಳ ಪೂರ್ಣ ಲಾಭವನ್ನು ಭೋಗಿಸಿದ ನಂತರದಲ್ಲಿ ಆ ಲೋಕದಿಂದ ಮತ್ತೆ ಈ ಕರ್ಮ ಪ್ರಪಂಚಕ್ಕೆ ಬರುತ್ತಾನೆ.” ಇಲ್ಲಿ ಯಾಜ್ಞವಲ್ಕ್ಯರು ಮತ್ತು ಆರ್ತಭಾಗನು ಕರ್ಮವನ್ನು ಪ್ರಶಂಸಿರುವದು ಗೋಚರಿಸುತ್ತದೆ. (ಪುಣ್ಯೋವೈ ಪುಣ್ಯೇನ ಕರ್ಮಣಾ ಭವತಿ ಪಾರ್ಪ ಪಾಪೇನೇತಿ) ಎಂದು ಅಭಿಪ್ರಾಯವಿದೆ. ಈ ಜನ್ಮಾಂತರದ ಕಲ್ಪನೆಯು ಛಾಂದೋಗ್ಯೋಪನಿಷತ್ತಿನಲ್ಲಿ ಸೊಗಸಾಗಿ ನಿರೂಪಿಸಲ್ಪಟ್ಟಿದೆ. (5–10) ಜೀವಾಥ್ಮನು ಕರ್ಮಕ್ಕನುಗುಣವಾಗಿ ಮರಣಾನಂತರದಲ್ಲಿ ಅನುಭವಿಸಬೇಕಾದ ವಿವಿಧ ಅವಸ್ಥೆಗಳನ್ನು ಇಲ್ಲಿ ವಿವರವಾಗಿ ನೀಡಲಾಗಿದೆ. ಯೋಗ ಸೂತ್ರದಲ್ಲಿಯೂ ಸಹಿತ (2.12–13) ವಿಶೇಷವಾಗಿ ಭಾಷ್ಯದಲ್ಲಿಯೂ ಪ್ರತಿಪಾದಿಸಲ್ಪಟ್ಟಿದೆ.

**ಬೌದ್ಧ ಧರ್ಮದಲ್ಲಿ:** ಇಲ್ಲಿ ಕರ್ಮ ಸಿದ್ಧಾಂತದ ಬಗೆಗೆ ಎರಡು ಅತಿರೇಕದ ಉಲ್ಲೇಖಗಳಿವೆ. (1) ಜೀವನು ಬದುಕಿನಲ್ಲಿ ಅನುಭವಿಸುವದೆಲ್ಲ ಅವನ ಪೂರ್ವಾರ್ಜಿತ ಕರ್ಮಫಲ (2) ಜೀವನು ಬದುಕಿನಲ್ಲಿ ಅನುಭವಿಸುವದೆಲ್ಲವೂ ಆಕಸ್ಮಿಕ. ಆದರೆ ಬೌದ್ಧ ಧರ್ಮವು ಇವೆರಡೂ ಅತಿರೇಕಗಳನ್ನು ತ್ಯಜಿಸಲು ಬಯಸುತ್ತದೆ. ‘ಚೂಲಕರ್ಮವಿಭಂಗಸುತ್ತ’ ಎನ್ನುವ ಗ್ರಂಥವು ಕರ್ಮ ಸಿದ್ಧಾಂತದ ಬಗೆಗೆ ಸುಸ್ಪಷ್ಟವಾದ ವಿವರಣೆ ಒದಗಿಸುವ ಗ್ರಂಥಗಳಲ್ಲಿ ಮುಖ್ಯವಾಗಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟಿರುವ ವಿಚಾರ ಸಾರವೇ ಇಲ್ಲಿಯೂ ಕಾಣುತ್ತದೆ. ಆದರೆ ಬೌದ್ಧರು ಶುದ್ಧಾಂಗವಾಗಿ ಮನಶ್ಶಾಸ್ತ್ರೀಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಜಿಜ್ಞಾಸೆಗೆ ಒಳಪಡಿಸಿದ್ದಾರೆ. ಒಟ್ಟಿನಲ್ಲಿ ಬೌದ್ಧರು ಕ್ರಿಯೆಗಿದ್ದ ಪ್ರಾಮುಖ್ಯವನ್ನು ಮನಃಸ್ಥಿತಿಗೆ ವರ್ಗಾಯಿಸಿದರು. ಬೌದ್ಧ ಧರ್ಮದ ಪ್ರಕಾರ ಕರ್ಮವು ನಾಲ್ಕು ರೀತಿಯಲ್ಲಿದೆ. (1) ಇದೇ ಜನ್ಮದಲ್ಲಿ ಫಲಕೊಡುವ ಕರ್ಮ (2) ಮುಂದಿನ ಜನ್ಮದಲ್ಲಿ ಫಲಕೊಡುವ ಕರ್ಮ (3) ಕಾಲಕಾಲಕ್ಕೆ ಫಲಕೊಡುವ ಕರ್ಮ (4) ಭೂತ ಕರ್ಮ. ಈ ನಾಲ್ಕು ವಿಭಾಗಗಳಿಗೆ ಮತ್ತೆ ಬೇರೆ ಬೇರೆ ಹೆಸರಿನ ಸ್ವರೂಪ ಸಿದ್ಧಾಂತಗಳಿವೆ.

ಆತ್ಮಜ್ಞಾನವನ್ನು ಪಡೆದವರು ‘ಕರ್ಮಾಂತರ’ ಮತ್ತು ‘ವಿಪಾಕಾಂತರ’ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಬೌದ್ಧ ಧರ್ಮದ ಪ್ರಕಾರ ಸ್ವರ್ಗ, ನರಕ ಮತ್ತು ಭೂಮಿಯ ಮೇಲಿರುವ ನಿವಾಸಿಗಳೆಲ್ಲರೂ ಅವಿಚಲಿತವಾದ ಕರ್ಮ ನಿಯಮಕ್ಕೆ ಬದ್ಧರಾಗಿದ್ದಾರೆ. ಬೌದ್ಧ ಧರ್ಮದ ‘ಕಥಾಪತ್ತು’ ಭಾಷ್ಯದ ಪ್ರಕಾರ ‘ಚಿತ್ತ ಮತ್ತು ಕರ್ಮಗಳಿಗೆ ಪರಸ್ಪರ ಸಂಬಂಧವಿದೆ’.

**ಜೈನ ಧರ್ಮ**ದ ಪ್ರಕಾರ ಕರ್ಮಗಳಲ್ಲಿ ಎಂಟು ವಿಧಗಳಿವೆ. ಇವುಗಳನ್ನು ಜ್ಞಾನಾವರಣೀಯ– ದರ್ಶನಾವರಣೀಯ– ವೇದನೀಯ– ಮೋಹನೀಯ– ಆಯುಃಕರ್ಮ– ನಾಮಕರ್ಮ– ಗೋತ್ರಕರ್ಮ– ಅಂತರಾಯ ಕರ್ಮ ಎನ್ನುವ ವಿವರಗಳಿವೆ. ಜೈನ ತತ್ತ್ವಗಳ ಪ್ರಕಾರ ಆತ್ಮವನ್ನು ಘಾತಿಗೊಳಿಸುವ ಅಂದರೆ ಲೌಕಿಕ ಬಂಧನವನ್ನು ನಿರ್ಮಾಣ ಮಾಡುವ ಘಾತಿಯ ಕರ್ಮಗಳೂ ನಾಲ್ಕು ಎಂದು – ಜ್ಞಾನವನ್ನು ಮರೆ ಮಾಡುವ ಕರ್ಮ, ಶ್ರದ್ಧೆಯನ್ನು ಮರೆಸುವ ಕರ್ಮ, ಆತ್ಮೋದ್ಧಾರಕ್ಕೆ ಆತಂಕವಾಗಿ ಬರುವ ಕರ್ಮ ಮತ್ತು ಆತ್ಮವನ್ನು ವಿಭ್ರಾಂತಿಗೊಳಿಸುವ ಕರ್ಮ – ಎಂದು ವಿವರಿಸುತ್ತಾರೆ.

ಇವೆಲ್ಲ ವಿಷಯಗಳಿಗೆ ಸುದೀರ್ಘವಾದ ವಿವರಣೆಗಳನ್ನು ರಾಮಕೃಷ್ಣ ಪರಮಹಂಸರ ಜನ್ಮಶತಾಬ್ದಿಯ ನಿಮಿತ್ತ ಪ್ರಕಾಶನಗೊಳಿಸಿದ ‘ಕಲ್ಚರಲ್ ಹೆರಿಟೇಜ ಆಫ್ ಇಂಡಿಯಾ’ ಸಂಪುಟಗಳಲ್ಲಿ ಕಾಣಬಹುದು. ಕರ್ನಾಟಕದ ಮೈಸೂರು ವಿಶ್ವವಿದ್ಯಾಲಯವು ಈ ಸಂಪುಟಗಳಲ್ಲಿ ಕೆಲವು ಸಂಪುಟಗಳನ್ನು 1970 ರಲ್ಲಿ ಹಂತಹಂತವಾಗಿ ಕನ್ನಡದಲ್ಲಿ ‘ಯುಗಯಾತ್ರೀ ಭಾರತೀಯ ಸಂಸ್ಕೃತಿ’ ಸಂಪುಟಗಳಲ್ಲಿ ಪ್ರಕಾಶನಗೊಳಿಸಿದೆ. ಪ್ರಸ್ತುತ ಈ ಟಿಪ್ಪಣಿಯು ಪ್ರಥಮ ಸಂಪುಟದಲ್ಲಿನ “ಬಿಮಲಚರಣ ಲಾ” ಅವರ ಲೇಖನದ ವಿಷಯಗಳನ್ನು ಆಧರಿಸಿದೆ.

ಮೇಲ್ಕಂಡ ಎಲ್ಲ ತತ್ತ್ವಗಳನ್ನೂ ಶ್ರೀ ಅರವಿಂದರು ಮತ್ತೂ ವಿಸ್ತರಿಸಿ ಇದು “ಚೇತನದ ಸಂಬಂಧ”ದಲ್ಲಿದೆ ಎಂದು ತಮ್ಮ ಅಭಿವ್ಯಕ್ತಿಗಳಲ್ಲಿ ನಿರೂಪಿಸಿದ್ದಾರೆ.

# ಕರ್ಮ ನಿಯತಿ ಮತ್ತು ಮುಕ್ತತ್ವ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಗತಕಾಲವನ್ನು ಮರೆಯುವ ಮಾರ್ಗ

ಜನರು ಗತಕಾಲವನ್ನು ಮರೆಯಲು ಆಗಾಗ ಪ್ರಯತ್ನ ಪಡುತ್ತ ಇರುತ್ತಾರೆ, ಆದರೆ ಅದು ಕಾರ್ಯಗತವಾಗುವುದಿಲ್ಲ. ನಿಮ್ಮ ಜೀವನದಲ್ಲಿ, ತರಬೇಕೆಂದುಕೊಂಡ ಎಲ್ಲ ಪಾಠಗಳನ್ನೂ ಅದು ಒಮ್ಮೆ ಮಾತ್ರ ತಂದಿದೆ (ಅದು ಸೋಸಲ್ಪಟ್ಟಿದ್ದರಿಂದ, ಆಳವಾದ ಸತ್ಯದಲ್ಲಿ ನೀವು ವಿಷಯಗಳನ್ನು ನೋಡಿ), ಅದರ ಪ್ರಯೋಜನ ಮುಗಿಯಿತೆಂದರೆ, ಅದು ಮಾಯವಾಗುತ್ತದೆ.

ವಾಸ್ತವವಾಗಿ ನಾವು ಉಪಯೋಗಿಸದೇ ಇರುವ, ನಮ್ಮ ಹಿಂದೆ ಎಳೆದು ತರುವ ಎಲ್ಲ ವಿಷಯಗಳು ಕರ್ಮವೆಂಬುದನ್ನು ನಾನು ನನ್ನ ಹೃದಯದಲ್ಲಿ ಮನಗಂಡಿದ್ದೇನೆ... ಪ್ರತಿ ಘಟನೆ ಅಥವಾ ಪ್ರತಿ ಸನ್ನಿವೇಶ ತರುವಂಥ ಪಾಠವನ್ನು ನಾವು ಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಕಲಿತಿದ್ದರೆ, ಅದು ಮುಗಿದಂತೆಯೆ, ಅದರ ಪ್ರಯೋಜನ ಇಲ್ಲವಾಗುತ್ತದೆ ಮತ್ತು ಅದು ಲೀನವಾಗುತ್ತದೆ.

ಅದನ್ನು ಅನುಸರಿಸುವುದು ಮತ್ತು ಗಮನಿಸುವುದು ಕೂಡ ಒಂದು ಕುತೂಹಲಕಾರಿಯಾದ ಅನುಭವವಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 5, 1960**

## ಅತಿಮಾನಸ ಪ್ರಭಾವ ಮತ್ತು ಕರ್ಮ

ಕರ್ಮದ ಫಲಿತಾಂಶಗಳನ್ನು ತೆಗೆದು ಹಾಕುವ ಪ್ರಭಾವ ಯಾವುದಕ್ಕೂ ಇಲ್ಲವೆಂದು ಮತ್ತು ಅದರ ಪರಿಣಾಮಗಳನ್ನು ಸರಣಿ ಕ್ರಿಯೆಗಳ ಮುಖಾಂತರ ಅದನ್ನು ಬರಿದು ಮಾಡುವುದರಿಂದ ಮಾತ್ರ ಮಾರ್ಪಡಿಸಬಹುದು... ಬರಿದು ಮಾಡಬಹುದು... ತೆಗೆದು ಹಾಕಬಹುದು ಎಂದು ಯೋಚಿಸಲಾಗುತ್ತಿತ್ತು. ಆದರೆ, ಅತಿಮಾನಸ ಪ್ರಭಾವದಿಂದ, ಅದರ ಪ್ರಕ್ರಿಯೆಯ ಹಂತಗಳನ್ನು ಅನುಸರಿಸದೆ ಅದನ್ನು ಸಾಧಿಸಬಹುದೆಂದು ನನಗೆ ಗೊತ್ತಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 20, 1958**

## ಕೃಪೆಯು ಕರ್ಮದ ಪರಿಣಾಮಗಳನ್ನು ಅಳಿಸಿಹಾಕಬಹುದು

ನಾವು ಗತಕಾಲದ ಪ್ರಮಾದಗಳನ್ನು ಪುನರಾವರ್ತಿಸದಿದ್ದಾಗ, ದೈವೀ ಪ್ರಭಾವವು, ದೈವೀ ಅನುಗ್ರಹದ ಪ್ರಭಾವವು ಜೀವಿಯಲ್ಲಿಯ – ಅವರ – ಕರ್ಮಗಳನ್ನು – ಅದರ ಪರಿಣಾಮಗಳನ್ನು – ಅಳಿಸಿ ಹಾಕುತ್ತದೆ. ಆದರೆ, ಎಲ್ಲಿಯವರೆಗೆ ತಪ್ಪುಗಳು ಪುನರಾವರ್ತಿಸಲ್ಪಡುವವೊ, ಯಾವುದನ್ನೂ ಅಳಿಸಿಹಾಕಲಾಗದು, ಯಾಕೆಂದರೆ ನಾವು ಅವುಗಳನ್ನು ಪ್ರತಿ ನಿಮಿಷ ಪುನರ್‌ಸೃಷ್ಟಿಸುತ್ತೇವೆ. ಒಬ್ಬ ವ್ಯಕ್ತಿಯು ಒಂದು ಗಂಭೀರವಾದ ತಪ್ಪು ಮಾಡಿದ್ದಾನೆ ಎಂದುಕೊಳ್ಳಿ, ಒಂದು ಗಂಭೀರ ಪ್ರಮಾದ (ಅದು ಗಂಭೀರವಾಗಿರಬಹುದು ಅಥವಾ ಇಲ್ಲದಿರಬಹುದು, ಆದರೆ ನಾವುಗಳು ಮುಖ್ಯವಾಗಿ ಗಂಭೀರವಾದ ಪ್ರಮಾದಗಳ ಬಗ್ಗೆ ಸಂಬಂಧ ಹೊಂದಿದ್ದೇವೆ), ಇಂತಹ ಪ್ರಮಾದಗಳು ಜೀವನದಲ್ಲಿ ತಮ್ಮ ಪರಿಣಾಮ ಬೀರುತ್ತವೆ. ಇದೊಂದು ಇಲ್ಲವಾಗಿಸಬೇಕಾದ ಕರ್ಮವಾಗಿದೆ. ಒಂದು ವೇಳೆ ದೈವೀ ಅನುಗ್ರಹವನ್ನು ಅಹ್ವಾನಿಸಿದರೆ, ಆ ಕರ್ಮವನ್ನು ತೆಗೆದು ಹಾಕುವ ಪ್ರಭಾವವನ್ನು ಹೊಂದದೆ, ಪರಿಣಾಮಗಳನ್ನು ಕಡಿಮೆಗೊಳಿಸುತ್ತದೆ – ನಾವು ಮಾಡಿದ ತಪ್ಪುಗಳನ್ನು ಮತ್ತೆ ಮಾಡದಿದ್ದಾಗ ಮಾತ್ರ ದೈವೀ ಅನುಗ್ರಹವು ಇದನ್ನು ಮಾಡುತ್ತದೆ. ವರ್ತಮಾನದಲ್ಲಿ ನಾವು ನಿರಂತರವಾಗಿ ತಪ್ಪುಗಳನ್ನು ಮಾಡದೆ ಇರುವ ಷರತ್ತಿನ ಮೇಲೆ ಗತವನ್ನು ಪೂರ್ಣವಾಗಿ ಶುದ್ಧಗೊಳಿಸಬಹುದು ಮತ್ತು ತೆಗೆದು ಹಾಕಬಹುದು.

ಅನಿರ್ದಿಷ್ಟವಾಗಿ ಅದೇ ಮೂರ್ಖತನದ ಪ್ರಮಾದಗಳನ್ನು ಮಾಡುತ್ತ ಹೋಗುವುದು ಮತ್ತು ಅನುಗ್ರಹವು ಅದರ ಎಲ್ಲ ಪರಿಣಾಮಗಳನ್ನು ನಿರಂತರವಾಗಿ ಅಳಿಸಿ ಹಾಕುವುದು ಎಂದು ಜನರು ನಂಬುವುದು ನನಗೆ ಬೇಕಿಲ್ಲ, ಇದನ್ನೂ ನಾನು ಒಂದು ವಾಕ್ಯದಲ್ಲಿ ಹೇಳಿದ್ದೇನೆ. ಅದು ಅಂದುಕೊಂಡಂತೆ ಅಲ್ಲ. ಗತಕಾಲದ ತಪ್ಪುಗಳನ್ನು ಎಲ್ಲಿಯವರೆಗೆ ಶುದ್ಧಮಾಡಬಹುದೆಂದರೆ, ಅವುಗಳ ಪರಿಣಾಮ ಭವಿಷ್ಯತ್ತಿನ ಮೇಲೆ ಯಾವುದೇ ರೀತಿ ಆಗಬಾರದು. ಆದರೆ, ಒಂದು ನಿಯಮ – ನೀವು ನಿಮ್ಮಲ್ಲಿಯ ತಪ್ಪು ಸ್ಪಂದನಗಳನ್ನು ನಿಲ್ಲಿಸುವುದು ಮತ್ತು ಆ ಸ್ಪಂದನಗಳನ್ನು ಅನಿರ್ದಿಷ್ಟವಾಗಿ ಪುನರ್‌ಉತ್ಪಾದಿಸದೆ ಇರುವುದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜೂನ 2, 1961**

ಓಹ್, ಎಲ್ಲವುಗಳಲ್ಲಿ ಅತ್ಯಂತ ಭೀಕರ ಸಂಗತಿ ಏನೆಂದರೆ, ನಮ್ಮ ಹತ್ತಿರ ಬಲವಿಲ್ಲದಿರುವುದು, ಧೈರ್ಯವಿಲ್ಲದಿರುವುದು, ಹಠದ ಗುಣವಿಲ್ಲದಿರುವುದು! 'ನಾನು ಸಾಯಬೇಕು, ನಾನು ಓಡಿ ಹೋಗಬೇಕು, ನಾನು ಸಾಯಬೇಕು' ಎಂದು ನನಗೆ ಹೇಳಲು ಅವರು ಎಷ್ಟು ಸಲ ಬರುತ್ತಾರೆ. – ಅವರಿಗೆ ನಾನು ಹೇಳುತ್ತೇನೆ, ಆಗಲಿ, ನಿಮ್ಮಿಷ್ಟಕ್ಕೆ ನೀವು ಸಾಯಿರಿ! ನಿಮ್ಮ 'ಅಹಂ' ಅನ್ನು ಬದುಕಲು ಬಿಡಿ ಎಂದು ಯಾರೂ ಕೇಳುತ್ತಿಲ್ಲ! ನೀವು ಸಾಯಬೇಕೆಂದುಕೊಂಡಿದ್ದರಿಂದ, ನಿಮ್ಮಿಷ್ಟಕ್ಕೆ ನೀವು ಸಾಯಿರಿ! ನಿಮ್ಮ ಅಹಮಿಕೆಯನ್ನು ಸಾಯಲು ಬಿಡುವ ಧೈರ್ಯವನ್ನು, ನಿಜವಾದ ಧೈರ್ಯವನ್ನು ಹೊಂದಿರಿ.

ಅದು ಕರ್ಮವಾದ್ದರಿಂದ ನಾವು ನಮ್ಮಿಷ್ಟಕ್ಕೆ ಏನನ್ನಾದರೂ ಮಾಡಬೇಕು. ಕರ್ಮವು 'ಅಹಂ'ನ ರಚನೆಯಾಗಿದೆ; ಅಹಂ ಏನನ್ನಾದರೂ ಮಾಡಲೇಬೇಕು, ಅದಕ್ಕಾಗಿ ಪ್ರತಿಯೊಂದನ್ನೂ ಮಾಡಲಾಗದು. ವಿಷಯ ಏನೆಂದರೆ: 'ಅಹಂ'ನ ಕ್ರಿಯೆಯ ಪರಿಣಾಮವು 'ಕರ್ಮ'ವಾಗಿದೆ. ಅಹಮಿಕೆಯನ್ನು ತೊರೆದಾಗ ಕರ್ಮವು ಮಾಯವಾಗುವುದು. ಅದಕ್ಕಾಗಿ ನಾವು ಸಹಾಯ ಮಾಡಬೇಕು, ನೆರವಾಗಬೇಕು, ಬಲವನ್ನು ಕೊಡಬೇಕು, ಧೈರ್ಯವನ್ನು ದಯಪಾಲಿಸಬೇಕು. ಆಗ 'ಅಹಂ' ಅದನ್ನು ಉಪಯೋಗಿಸಿಕೊಳ್ಳಲೇಬೇಕು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್22, 1958**

ಉನ್ನತ ಪ್ರಜ್ಞೆಯು ಮಾತ್ರ ನಿಮ್ಮ ಕರ್ಮದ ಮೇಲೆ ಪರಿಣಾಮ ಬೀರಬಹುದು ಮತ್ತು ಈ ಪ್ರಜ್ಞೆಯು ಸ್ವತಂತ್ರವಾಗಿದೆ, ಇದು ಎಲ್ಲ ಮಾನವ–ಪ್ರಜ್ಞೆ ಮೇಲಿನದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/231** **– ಶ್ರೀಮಾತೆ**

## ಅನುಗ್ರಹ ಮತ್ತು ಕರ್ಮ

ಭಾರತದಲ್ಲಿ, ಕೆಲವೊಂದು ಸಲ, ನಮ್ಮ ಜೀವನದಲ್ಲಿ ಭಾರ ಎನಿಸುವ ಒಂದು ರೀತಿಯ ಮಾರಕತೆಯನ್ನು 'ಕರ್ಮ'ವೆಂದು ಕರೆಯುತ್ತಾರೆ, ಮತ್ತು ಕರ್ಮವು ಗತ ಜನ್ಮಗಳ ಪರಿಣಾಮವಾಗಿದೆ; ಆದಾಗ್ಯೂ, ಅದು ಬರಿದು ಮಾಡಬಹುದಾದ, ನಮ್ಮ ಪ್ರಜ್ಞೆಯ ಮೇಲೆ ಭಾರವಾಗಿರಬಹುದಾದ ಸಂಗತಿಯಾಗಿದೆ.

ಸಂಗತಿಗಳು ಈ ರೀತಿಯಾಗಿ ಘಟಿಸುತ್ತವೆ: ಚೈತ್ಯವು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಸಾಗುತ್ತದೆ. ಭೂಮಿಯ ಮೇಲಿನ ಪ್ರತಿಯೊಂದು ಜನ್ಮವೂ ಮುಂದಿನ ಪ್ರಗತಿಗೆ, ಬೆಳವಣಿಗೆಗೆ ಒಂದು ಅವಕಾಶವಾಗಿದೆ ಮತ್ತು ಸಾಧನವಾಗಿದೆ. ಆದರೆ, ಒಂದು ನಿಶ್ಚಿತ ಅನುಭವದ ಮುಖಾಂತರ ಸಾಗುವ, ಒಂದು ನಿಶ್ಚಿತ ವಿಷಯವನ್ನು ಕಲಿಯುವ, ಒಂದು ನಿರ್ದಿಷ್ಟ ಅನುಭವದ ಮುಖಾಂತರ ಒಂದು ನಿಶ್ಚಿತ ಸಾಮರ್ಥ್ಯವನ್ನು ವೃದ್ಧಿಪಡಿಸಿಕೊಳ್ಳುವ ಉದ್ದೇಶದೊಂದಿಗೆ ಚೈತ್ಯವು ಜನ್ಮ ತಾಳಬಹುದು. ಆಗ, ಆ ಜೀವನದಲ್ಲಿ, ಆ ಅನುಭವವನ್ನು ಅನುಭವಿಸುವ ಜನ್ಮದಲ್ಲಿ, ಒಂದು ಕಾರಣಕ್ಕಾಗಿ ಅಥವಾ ಅನೇಕ ಕಾರಣಗಳಿಗಾಗಿ – ಅನೇಕವಿರಬಹುದು – ಆತ್ಮವು ಯಾವ ಸ್ಥಾನದಲ್ಲಿ ಇಳಿಯಬೇಕಾಗಿತ್ತೊ ಆ ನಿಖರವಾದ ಸ್ಥಾನದಲ್ಲಿ ಇಳಿಯಲಾರದು: ಒಂದು ರೀತಿಯ ಸ್ಥಾನಪಲ್ಲಟ ಸಂಭವಿಸಬಹುದು, ವಿರುದ್ಧ ಸನ್ನಿವೇಶಗಳ ಒಂದು ರಾಶಿ – ಅದು ಸಂಭವಿಸಬಹುದು – ಆ ಸಂದರ್ಭದಲ್ಲಿ ಪುನರ್ಜನ್ಮವು ಪೂರ್ಣವಾಗಿ ವಿಫಲವಾಗುತ್ತದೆ ಮತ್ತು ಆತ್ಮವು ಒಂದು ಉತ್ತಮ ಅವಕಾಶಕ್ಕಾಗಿ ಕಾಯಲು ಹೋಗಿ ಬಿಡುತ್ತದೆ. ಆದರೆ, ಬೇರೆ ಸಂದರ್ಭಗಳಲ್ಲಿ, ಆತ್ಮವು ತಾನು ಏನನ್ನು ಮಾಡಬೇಕೆಂದು ಕೊಂಡಿರುತ್ತದೆಯೊ ಅದನ್ನು ಮಾಡುವ ಸಾಧ್ಯತೆಯನ್ನು ಕಂಡುಕೊಳ್ಳದಿದ್ದಾಗ ಅದು ತನ್ನನ್ನು ತಾನು ಅಹಿತಕರ ಸನ್ನಿವೇಶಗಳಲ್ಲಿ ಎಳೆಯಲ್ಪಡುತ್ತದೆ – ಧ್ಯೇಯದ ದೃಷ್ಟಿಯಿಂದ ಅಹಿತಕರವಷ್ಟೆ ಮಾತ್ರವಲ್ಲ, ತನ್ನ ಸ್ವ–ಬೆಳವಣಿಗೆಗೆ ಬೇಕಾದ ದೃಷ್ಟಿಯಿಂದಲೂ ಸಹ. ಬೇರೆಯದೇ ಕಠಿಣ ಷರತ್ತುಗಳ ಅಡಿಯಲ್ಲಿ ಇದು ತನ್ನ ಅನುಭವವನ್ನು ಪುನಃ ಪ್ರಾರಂಭಿಸಲು ಅನಿವಾರ್ಯವಾಗುತ್ತದೆ.

ಈ ಎರಡನೆಯ ಪ್ರಯತ್ನವೂ ವಿಫಲವಾದರೆ, ಚೈತ್ಯನು ಏನನ್ನು ಮಾಡಬೇಕೆಂದುಕೊಂಡಿದ್ದನೊ, ಅದು ಆಗಲು, ಪರಿಸ್ಥಿತಿಗಳು ಅದನ್ನು ಮತ್ತೊಮ್ಮೆ ಅಸಾಧ್ಯವಾಗಿಸಬಹುದು, ಉದಾಹರಣೆಗಾಗಿ – ಅದು ದೌರ್ಬಲ್ಯವಾದ ಇಚ್ಛೆಯೊಂದಿಗೆ ಒಂದು ದೇಹದಲ್ಲಿದ್ದರೆ ಅಥವಾ ಯೋಚನೆಯಲ್ಲಿ ವಿಕಾರವಾಗಿದ್ದರೆ ಅಥವಾ ಅಹಮಿಕೆಯು ಬಹಳೇ ಬಲವಾಗಿದ್ದರೆ, ಏನು ಬೇಕಾದರೂ ಘಟಿಸಬಹುದು – ಪ್ರಯತ್ನವು ಆತ್ಮಹತ್ಯೆಯಲ್ಲೂ ಕೊನೆಯಾಗಬಹುದು, ಆದರೆ ಅದು ಭಯಾನಕವಾದ ಘಟನೆ. ನಾನು ಅದನ್ನು ಸಾಕಷ್ಟು ಸಲ ನೋಡಿದ್ದೇನೆ: ಆತ್ಮನು ತಾನು ಏನನ್ನು

ಮಾಡಬೇಕೆಂದುಕೊಂಡಿದ್ದನೊ ಅದನ್ನು ಜಯಿಸಲು ಮತ್ತು ಅದನ್ನು ಮಾಡಲು ಸಮರ್ಥವಾಗುವ ಮೊದಲು ಜನುಮ–ಜನುಮಗಳಲ್ಲಿ ತನ್ನಷ್ಟಕ್ಕೆ ತಾನು ಪುನರಾವರ್ತನೆಯಾಗುವ ಭಯಾನಕವಾದ ಕರ್ಮವನ್ನು ಅದು ಸೃಷ್ಟಿಸುತ್ತದೆ. ಪ್ರತಿ ಸಲವೂ ನಿಬಂಧನೆಗಳು ಹೆಚ್ಚು–ಹೆಚ್ಚು ಕಠಿಣವಾಗುತ್ತ ಹೋದ ಹಾಗೆ, ಹೆಚ್ಚು–ಹೆಚ್ಚು ಪ್ರಯತ್ನ ಬೇಕಾಗುತ್ತದೆ. ನಾವು ಅದರಿಂದ ಹೊರಬರಲಾಗುವುದಿಲ್ಲ ಎಂದು ಕೆಲವೊಮ್ಮೆ ಹೇಳಲಾಗಿತ್ತು, ಆದಾಗ್ಯೂ, ಗತಕಾಲದ ಅಜಾಗೃತ ಸ್ಮರಣೆಯು ತೊಂದರೆಯನ್ನು ತಪ್ಪಿಸಲು ತಡೆಯಲಾಗದ ಬಯಕೆಯನ್ನು ಸೃಷ್ಟಿಸುತ್ತದೆ ಮತ್ತು ನಾವು ಅದೇ ಮೂರ್ಖತನವನ್ನು ಅಥವಾ ಇನ್ನೂ ಹೆಚ್ಚಿನ ಮೂರ್ಖತನವನ್ನು ಮತ್ತೊಮ್ಮೆ ಮಾಡುತ್ತೇವೆ. ಆಗಲೇ ಇದ್ದ ತೊಂದರೆಗೆ ಮತ್ತಷ್ಟು ತೊಂದರೆಯನ್ನು ಕೂಡಿಸುತ್ತೇವೆ. ಯಾರೂ ಸಹಾಯ ಮಾಡದ, ಮಾರ್ಗದರ್ಶನ ಮಾಡದ, ಸೂಚನೆಗಳನ್ನು ನೀಡದ ಕ್ಷಣಗಳು ಅಥವಾ ಸನ್ನಿವೇಶಗಳು ಸಹ ಇದ್ದವು. ನೀವೆಲ್ಲರೂ ಏನು ಮಾಡಬೇಕೆಂದು ತಿಳಿಯಲಾರದ ಏಕಾಂಗಿಗಳು. ಆಗ ಪರಿಸ್ಥಿತಿಯು ಭಯಾನಕವಾಗುತ್ತದೆ, ಸನ್ನಿವೇಶಗಳು ಅಸಹನೀಯವಾಗುತ್ತವೆ.

ಆತ್ಮವು ಒಮ್ಮೆಯಾದರೂ ವಿಜ್ಞಾಪನೆಯನ್ನು ಮಾಡಿದ್ದರೆ, ಒಮ್ಮೆಯಾದರೂ ಅದು ದೈವೀ ಕೃಪೆಯೊಡನೆ ಸಂಪರ್ಕ ಮಾಡಿದ್ದರೆ, ಆಗ ನಂತರದ ಜನ್ಮದಲ್ಲಿ ಒಂದೇ ಏಟಿಗೆ ಎಲ್ಲವನ್ನೂ ವ್ಯಾಪಿಸುವಂಥ ಪರಿಸ್ಥಿತಿಗಳನ್ನು ಕೂಡಲೆ ನಾವು ಕಂಡುಕೊಳ್ಳುತ್ತೇವೆ. ಕೆಲವೊಮ್ಮೆ ನೈಜ ಪ್ರೇಮ ಸಾಕಾಗಿದ್ದರೂ, ಆ ಕ್ಷಣದಲ್ಲಿ ನಾವು ಹೆಚ್ಚಿನ ಧೈರ್ಯವನ್ನು, ಹೆಚ್ಚಿನ ಸಹನೆಯನ್ನು ಹೊಂದಿರಬೇಕಾಗುತ್ತದೆ. ಸ್ವಲ್ಪ–ಸ್ವಲ್ಪವೇ, ಸ್ವಲ್ಪ ವಿಶ್ವಾಸವಿದ್ದರೆ ಎಲ್ಲವನ್ನೂ ತೆಕ್ಕೆಗೆ ತೆಗೆದುಕೊಳ್ಳಬಹುದು. ಆದರೆ, ಬಹಳಷ್ಟು ಪ್ರಕರಣಗಳಲ್ಲಿ ನಾವು ಭಾವಶೂನ್ಯ ಧೈರ್ಯವನ್ನು ಹೊಂದಿರಬೇಕಾಗುತ್ತದೆ, ಸಹಿಸಿಕೊಳ್ಳುವ, ತಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕಾಗುತ್ತದೆ: ವಿರೋಧ – ವಿಶೇಷವಾಗಿ ಹಿಂದಿನ ಆತ್ಮಹತ್ಯೆಯ ಪ್ರಕರಣದಲ್ಲಿ, ಈ ಮೂರ್ಖತನವನ್ನು ಮತ್ತೆ ಪ್ರಾರಂಭಿಸುವ ಸೆಳೆತಕ್ಕೆ ವಿರೋಧ ಬೇಕಾಗುತ್ತದೆ – ಯಾಕೆಂದರೆ, ಅದೊಂದು ಭಯಾನಕತೆಯನ್ನು ರೂಪಿಸುತ್ತದೆ. ತೊಂದರೆಯನ್ನು ನೇರವಾಗಿ ಎದುರಿಸುವ ಅಭ್ಯಾಸವಿರದಿದ್ದರೆ, ಪಲಾಯನ ಮಾಡಬೇಕಾಗುತ್ತದೆ. ಯಾತನೆಯು ಬಂದಾಗ, ತೊಂದರೆಯನ್ನು ಎದುರಿಸುವ

ಬದಲು, ಬಲಶಾಲಿಯಾಗುವ ಬದಲು ಓಡಬೇಕಾಗುತ್ತದೆ. ಇದರ ಅರ್ಥ – ಆಂತರ್ಯದಲ್ಲಿ ಅಚಲವಾಗಿರುವುದು, ಮಣಿಯದೆ ಇರುವುದು: ಸಾಧ್ಯವಾದಷ್ಟು ತಲೆ ಎತ್ತಿ ನಿಲ್ಲು, ಹೊಯ್ದಾಟಗಳನ್ನು ಅನುಸರಿಸಬೇಡ, ಕಂಪನಗಳು ಹೇಳಿದಂತೆ ಕೇಳಬೇಡ.

ಕೃಪೆಯಲ್ಲಿ ನಂಬಿಕೆ, ಕೃಪೆಯ ಗ್ರಹಿಕೆ, ಇಲ್ಲದಿದ್ದರೆ ಕೂಗಿನ ತೀವ್ರತೆ ಅಥವಾ ನಿಶ್ಚಲತೆ, ಪ್ರತಿಕ್ರಿಯೆಯ ಗಂಟನ್ನು ಬಿಡಿಸುವ, ಚೂರು ಮಾಡುವ, ಕೃಪೆಯ ಅದ್ಭುತವಾದ ಪ್ರೇಮಕ್ಕೆ ಪ್ರತಿಕ್ರಿಯೆ ಬೇಕಾಗಿದೆ: ಅದು ಮಾತ್ರ ಬೇಕಾಗಿದೆ.

ಬಲವಾದ ಅಭೀಪ್ಸೆ ಇಲ್ಲದೆ ಅದು ಕಷ್ಟಕರವಾಗಿದೆ, ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅದರ ಸಂಗ್ರಹವಾದ ಪ್ರಭಾವದ ಕಾರಣದಿಂದ ಎಲ್ಲ ಜನ್ಮಗಳ ಮುಖಾಂತರ ಮಾರಕವಾದ ಸೆಳೆತವನ್ನು ವಿರೋಧಿಸುವ ಸಾಮರ್ಥ್ಯವನ್ನು ಹೊಂದುವುದು ಕಷ್ಟವಾಗುತ್ತದೆ. ಪ್ರತಿ ಸೋಲು ಅದಕ್ಕೆ ಒಂದು ಹೊಸ ಚೈತನ್ಯವನ್ನು ಕೊಡುತ್ತದೆ. ಒಂದು ಸಣ್ಣ ಜಯವು ಅದನ್ನು ಕರಗಿಸಿ ಬಿಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/371–73 – ಶ್ರೀಮಾತೆ**




ಸತ್ಯವನ್ನು ಹೇಳಲು, ಸಾವಿರ ವರ್ಷಗಳ ನಂತರ ಮಾತ್ರ ತನ್ನನ್ನು ತಾನು ಶ್ರುತಪಡಿಸುವ ಒಂದು ಅವಕಾಶವು, ಅವಶ್ಯವಾದ ಪ್ರಭಾವದೊಂದಿಗೆ, ಒಂದು

ಜಾಗೃತ ಸಹಾಯವು ಸದ್ಯಕ್ಕೆ ಈ ಭೂಮಿಯ ಮೇಲಿದೆ. ಕರ್ಮದ ಫಲಗಳನ್ನು ಅಳಿಸಿ ಹಾಕುವ ಪ್ರಭಾವ ಯಾವುದಕ್ಕೂ ಇಲ್ಲವೆಂದು ಒಮ್ಮೆ ನಂಬಲಾಗಿತ್ತು. ಶುದ್ಧಿಮಾಡುವ ಸರಣಿ ಕ್ರಿಯೆಗಳ ಮುಖಾಂತರ ಅದನ್ನು ಬರಿದು ಮಾಡುವುದರಿಂದ ಮಾತ್ರ ಅದರ ಪರಿಣಾಮಗಳನ್ನು ಪರಿವರ್ತಿಸಬಹುದು, ಬರಿದುಮಾಡಬಹುದು, ಅಳಿಸಿಹಾಕಬಹುದು. ಆದರೆ, ಅತಿಮಾನಸ ಪ್ರಭಾವದಿಂದ, ವಿಮೋಚನೆಯ ಪ್ರಕ್ರಿಯೆಯ ಹಂತಗಳಿಂದ ಹಾದು ಹೋಗದೆಯೂ ಇದನ್ನು ಮಾಡಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/373–374 – ಶ್ರೀಮಾತೆ**

**ಪರಮಾನುಗ್ರಹ**

ಪ್ರತಿ ಮೂಲವಸ್ತುವು, ವ್ಯಕ್ತಿಗತ ಮೂಲವಸ್ತು ಎಂದಿಟ್ಟುಕೊಳ್ಳಿ (ನಿಖರವಾಗಿ ಆ ರೀತಿ ಇಲ್ಲದಿದ್ದಾಗ್ಯೂ), ವ್ಯಕ್ತಿಗತದ ಮೇಲೆ ಅಥವಾ ಸಮೂಹತೆಯ ಮೇಲೆ ಅನುಗ್ರಹವು ಕಾರ್ಯವೆಸಗುವ ಅನುಸಾರವಾಗಿ ಅದು ತನ್ನ ಸ್ಥಾನದಲ್ಲಿರುತ್ತದೆ.

ಸಮೂಹತೆಯ ಮೇಲೆ ಕೃಪೆಯು ಕಾರ್ಯವೆಸಗಿದಾಗ, ಪ್ರತಿ ವಸ್ತುವು, ಪ್ರತಿ ಮೂಲಾಂಶವು, ಪ್ರತಿ ತತ್ವವು ವಿಶ್ವದ ಚಲನೆಯಲ್ಲಿ ಕರ್ಮ–ತರ್ಕದ ಪರಿಣಾಮವಾಗಿ ಅದರ ಸ್ಥಾನದಲ್ಲಿ ಇರಿಸಲ್ಪಡುತ್ತದೆ. ಇದು, ನಾವು ನೋಡಿದ ಹಾಗೆ ಅವ್ಯಸ್ಥೆಯ ಮತ್ತು ಗೊಂದಲದ ಭಾವನೆಯನ್ನು ನಮಗೆ ಕೊಡುತ್ತದೆ.

ವ್ಯಕ್ತಿಯ ಮೇಲೆ ಅನುಗ್ರಹವು ಕಾರ್ಯವೆಸಗಿದಾಗ, ಅದು ಪ್ರತಿಯೊಬ್ಬರಿಗೂ, ಅವರೇನಾಗಿದ್ದಾರೆ ಮತ್ತು ಅವರು ಏನನ್ನು ಅರಿತುಕೊಂಡಿದ್ದಾರೆ ಅನ್ನುವುದರ ಮೇಲೆ ಅವರಿಗೆ ಪರಮ ಸ್ಥಾನವನ್ನು ನೀಡುತ್ತದೆ. ಆಗ, ಅಲ್ಲಿ ಕೆಲ ಅಸಾಧಾರಣ ಪ್ರಕರಣಗಳಲ್ಲಿ ಪರಮಾನುಗ್ರಹವು ಇರುತ್ತದೆ. ನೀವೇನಾಗಿದ್ದೀರಿ ಎನ್ನುವುದರ ಮೇಲೆ ನಿಮಗೆ ಸ್ಥಾನ ಕೊಡದೆ ನಿವೇನಾಗಬೇಕೆಂದಿರುವಿರಿ ಎನ್ನುವುದರ ಮೇಲೆ ಸ್ಥಾನವು ನಿಮಗೆ ಸಿಗುವುದು. ಅಂದರೆ, ವಿಶ್ವವ್ಯಾಪಿ ಬ್ರಹ್ಮಾಂಡ ಸ್ಥಾನವು ವ್ಯಕ್ತಿಯ ಪ್ರಗತಿಯು ಮುಂದಿದೆ ಎಂದು ಅರ್ಥ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜೂನ 22, 1958**

## ದೈವೀ ಕೃಪೆಯು ಕರ್ಮವನ್ನು ಪೂರ್ಣವಾಗಿ ನಿರಾಕರಿಸುತ್ತದೆ

> *"ನಾವು ಕರ್ಮದ ಸರಪಳಿಗೆ ಕಟ್ಟಲ್ಪಟ್ಟಿದ್ದೇವೆ" ಎಂದು ನೀವು ಹೇಳಿದ್ದೀರಿ, ಆದರೆ ಕೆಲವೊಮ್ಮೆ ದೈವೀ ಕೃಪೆಯು ಕಾರ್ಯಗತವಾದಾಗ, ಅದು ವಿರೋಧಿಸುತ್ತದೆ...*

ಪೂರ್ಣತ: ದೈವೀ ಕೃಪೆಯು ಪೂರ್ಣವಾಗಿ ಕರ್ಮವನ್ನು ನಿರಾಕರಿಸುತ್ತದೆ; ಅದು ಸೂರ್ಯನ ಶಾಖಕ್ಕೆ ಕರಗಿ ಹೋಗುವ ಬೆಣ್ಣೆಯಂತೆ ಅದನ್ನು ಕರಗಿಸಿ ಬಿಡುತ್ತದೆ.

ಈಗ ನಾನು ಹೇಳುತ್ತಿದ್ದದ್ದೂ ಅದನ್ನೇ. ನೀನು ಈಗ ನನಗೆ ಹೇಳಿದ್ದು, ಹೇಳುವ ಮತ್ತೊಂದು ಮಾರ್ಗ. ನಾನು ನನ್ನನ್ನು ನಿನ್ನ ಸ್ಥಾನದಲ್ಲಿ ಇರಿಸಿಕೊಂಡು ಕೇಳುತ್ತಿದ್ದೇನೆ: ನಿನ್ನ ಅಭೀಪ್ಸೆಯು ಸಾಕಷ್ಟು ಪ್ರಾಮಾಣಿಕವಾಗಿದ್ದರೆ, ಎಲ್ಲವನ್ನೂ ಬದಲಾಯಿಸುವಂಥ ಯಾವುದೋ ಒಂದನ್ನು ನಿನ್ನಲ್ಲಿ ಕೆಳಗಡೆ ತರಬಹುದು – ನಿಜವಾಗಿಯೂ ಅದು ಎಲ್ಲವನ್ನೂ ಬದಲಾಯಿಸುತ್ತದೆ. ಅತ್ಯಂತ ಚಿಕ್ಕದಾದ, ಬಹಳೇ ಸೀಮಿತವಾದ ಒಂದು ಉದಾಹರಣೆಯನ್ನು ಕೊಡಬಹುದು, ಆದರೆ ಆ ಉದಾಹರಣೆಯು, ನೀನು ವಿಷಯಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ: ಒಂದು ಕಲ್ಲು ತೀರಾ ಯಾಂತ್ರಿಕವಾಗಿ ಬೀಳುತ್ತದೆ; ಒಂದು ಹೆಂಚು ಬೀಳುತ್ತದೆ ಎನ್ನಿ; ಅದು ಸಡಿಲಗೊಂಡರೆ, ಅದು ಬೀಳುತ್ತದೆ, ಅಲ್ಲವೆ? ಆದರೆ ಅಲ್ಲಿ ಹಾಯ್ದುಹೋಗುವ ಒಬ್ಬರಿಂದ ಪ್ರಾಣಮಯ ಅಥವಾ ಮನೋಮಯ ಇತ್ಯರ್ಥತೆಯು ಅಲ್ಲಿ ಬಂದರೆ ಮತ್ತು ಅದು ಬೀಳಲು ಬಯಸದಿದ್ದರೆ, ಅವನು ತನ್ನ ಕೈಯನ್ನು ಚಾಚುತ್ತಾನೆ, ಆಗ ಆ ಹೆಂಚು ಅವನ ಕೈಮೇಲೆ ಬೀಳುತ್ತದೆ, ಅದರೆ ನೆಲದ ಮೇಲೆ ಬೀಳುವುದಿಲ್ಲ. ಅಂದರೆ, ಅವನು ಆ ಕಲ್ಲಿನ ಅಥವಾ ಹೆಂಚಿನ ವಿಧಿಯನ್ನು ಬದಲಾಯಿಸಿದ ಎಂದು. ಕಲ್ಲು ಯಾರದೋ ತಲೆಯ ಮೇಲೆ ಬೀಳುವ ಬದಲು ಕೈಮೇಲೆ ಬಿದ್ದರೆ, ಅದು ಯಾರನ್ನೂ ಸಾಯಿಸುವುದಿಲ್ಲ, ಇದು ಇನ್ನೊಂದು ಇತ್ಯರ್ಥತೆ. ಇದು ಮತ್ತೊಂದು ಸ್ಥರದಿಂದ ಪ್ರಜ್ಞಾ ಇಚ್ಛೆಯಿಂದ ಒಂದು ಅಜಾಗೃತ ಪ್ರಕ್ರಿಯೆಯನ್ನು ಪ್ರವೇಶಿಸುವ ಮಧ್ಯ ಪ್ರವೇಶವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/90–91**

## ಕರ್ಮದ ಪರಿಣಾಮಗಳು

*ಅಂದರೆ, ಕರ್ಮದ ಪರಿಣಾಮಗಳು ತೀವ್ರವಲ್ಲವೆ?*

ಇಲ್ಲ, ಯಾವತ್ತೀಗೂ ಇಲ್ಲ. ಎಲ್ಲ ಧರ್ಮಗಳಲ್ಲಿ ಇದನ್ನು ಹೇಳಿದ ಜನರಿದ್ದಾರೆ, ಸ್ಪಷ್ಟವಾದ ನಿಯಮಗಳನ್ನು ಕೊಟ್ಟಿದ್ದಾರೆ, ಆದರೆ ಅದು ಅವರನ್ನು ಸಹಜಗುಣಕ್ಕೆ ಬದಲಿಸಿಕೊಳ್ಳುವುದಕ್ಕಾಗಿ ಮತ್ತು ನಿಯಂತ್ರಿಸಿಕೊಳ್ಳುವುದಕ್ಕಾಗಿ ಎಂದು ನನ್ನ ನಂಬಿಕೆ. ಸಹಜಗುಣದ ಸ್ಥಾನ ಮತ್ತು ಜನರ ನಿಯಂತ್ರಣ ಬೇಕೆನ್ನುವ ಈ ರೀತಿಯ ಪ್ರಕೃತಿ ಯಾವಾಗಲೂ ಇರುತ್ತದೆ. "ನೀವು ಮಾಡುವ ಎಲ್ಲದಕ್ಕೂ ಒಂದು ಸ್ಪಷ್ಟವಾದ ಪರಿಣಾಮವಿದೆ..." ಎಂದು ಹೇಳಲ್ಪಟ್ಟಿದೆ. ಪೂರ್ಣ ಜಾಗೃತ ಅಹಮಿಕೆಯಲ್ಲಿ ಜನರು ಇರುವುದನ್ನು ತಡೆಯಲು, ಅವರು ಏನನ್ನು ಮಾಡುತ್ತಾರೊ – ಆ ಪರಿಣಾಮಗಳ ಅವಪ್ರಜ್ಞೆಯಲ್ಲಿ ಇರುವುದನ್ನು ತಡೆಯಲು, ಇದು ವಿಕಸನದ ಘಳಿಗೆಯಲ್ಲಿ ಅವಶ್ಯಕವಾದ ಪರಿಕಲ್ಪನೆಯಾಗಿದೆ. ಈ ರೀತಿಯ ಜನರಿಗೆ ಕೊರತೆ ಇಲ್ಲ, ಅವರು ಬಹುಸಂಖ್ಯೆಯಲ್ಲಿ ಇದ್ದಾರೆಂದು ನನ್ನ ನಂಬಿಕೆ; ಅವರು ತಮ್ಮ ಉದ್ವೇಗಗಳನ್ನು ಅನುಸರಿಸುತ್ತಾರೆ ಮತ್ತು ತಾವು ಏನನ್ನು ಮಾಡಿದ್ದಾರೊ, ಅದರ ಪರಿಣಾಮಗಳು ತಮಗಾಗಲಿ ಮತ್ತು ಇನ್ನೊಬ್ಬರಿಗಾಗಲಿ ಅಗುವುದರ ಬಗ್ಗೆ ಅವರು ತಮ್ಮನ್ನು ತಾವು ಸಹ ಕೇಳಿಕೊಳ್ಳುವುದಿಲ್ಲ. ಒಂದು ಕಠೋರವಾದ ನೋಟದಿಂದ ನಿಮಗೆ ನೇರವಾಗಿ ಯಾರಾದರೂ ಅದನ್ನು ಹೇಳಿದರೆ, ಅದು ಉತ್ತಮ: "ಜೋಪಾನವಾಗಿರಿ, ಅದರ ಪರಿಣಾಮಗಳು ದೀರ್ಘಕಾಲದವರೆಗೆ ಇರುತ್ತವೆ!" ಇನ್ನೂ ಕೆಲವರು ಬಂದು ಹೀಗೆ ಹೇಳುತ್ತಾರೆ: "ನೀನು ಇನ್ನೊಂದು ಜನ್ಮದಲ್ಲಿ ಅದಕ್ಕೆ ಬೆಲೆ ತೆರಬೇಕಾಗುತ್ತದೆ." ಹೇಗಾದರಾಗಲಿ, ಅದು ಅದ್ಭುತ ಕಥೆಗಳಲ್ಲಿ ಒಂದಾಗಿದೆ... ಆದರೆ ಅದು ಮಹತ್ತದ್ದಲ್ಲ: ಇದೂ ಸಹ ಜನರ ಒಳಿತಿಗಾಗಿ ಇರಬಹುದು. ಹೀಗೆ ಹೇಳುವ ಬೇರೆ ಧರ್ಮಗಳೂ ಇವೆ. "ಓಹ್! ನೀನು ಆ ಪಾಪವನ್ನು ಮಾಡಿದರೆ, ಚಿರಕಾಲದವರೆಗೆ ನೀನು ನರಕಕ್ಕೆ ಹೋಗುವಿ." ನೀವು ಊಹಿಸಿಕೊಳ್ಳಬಹುದು!.... ಆದ್ದರಿಂದ, ಜನರಲ್ಲಿ ಎಷ್ಟು ಭಯವಿದೆ ಎಂದರೆ ಅದು ಅವರನ್ನು ಕೊಂಚ ನಿಲ್ಲಿಸಿಬಿಡುತ್ತದೆ, ಒಂದು ಉದ್ವೇಗವನ್ನು ಅನುಸರಿಸುವ ಮೊದಲು ಚಿಂತನೆ ಮಾಡಲು ಅವರಿಗೆ ಬರೀ ಕ್ಷಣವನ್ನು ಮಾತ್ರ ಕೊಡುತ್ತದೆ – ಆದರೆ ಯಾವಾಗಲೂ ಅಲ್ಲ; ಕೆಲವೊಮ್ಮೆ ಚಿಂತನೆಯು ನಂತರ ಬರುತ್ತದೆ, ಕೊಂಚ ಸಮಯದ ನಂತರ.

ಅದು ಸ್ಪಷ್ಟವಾಗಿರುವುದಿಲ್ಲ. ಇವುಗಳು, ಹೆಚ್ಚು ಕಡಿಮೆ ಪ್ರಾಮಾಣಿಕವಾದ ವಸ್ತುಗಳನ್ನು ಆ ರೀತಿಯಾಗಿ ಚಿಕ್ಕ ಚೂರುಗಳಲ್ಲಿ ಕತ್ತರಿಸಿದ, ಚೊಕ್ಕಟವಾಗಿ ಕತ್ತರಿಸಿದ ಮನೋಮಯ ರಚನೆಗಳಾಗಿವೆ. ಅವುಗಳು ನಿಮಗೆ ಹೇಳುತ್ತವೆ: "ಇದನ್ನು ಮಾಡಿ ಅಥವಾ ಅದನ್ನು ಮಾಡಿ. ಅದು ಇದಾಗಿರದಿದ್ದರೆ, ಅದು ಅದಾಗಿಬೇಕು." ಓಹ್! ಇದೆಂತಹ ಹೇಸಿಕೆಯ ಜೀವನ. ಜನರು ಹುಚ್ಚಾಗಿಬಿಡುತ್ತಾರೆ, ಅವರು ಭಯಭೀತರಾಗುತ್ತಾರೆ! "ಅದು ಅದರಂತೆ ಇದೆಯೋ ಅಥವಾ ಇದರಂತೆಯೋ?" ಅವರು, ಅದನ್ನು ಇದರಂತೆಯೂ ಬೇಡುವುದಿಲ್ಲ, ಅದರಂತೆಯೂ ಬೇಡುವುದಿಲ್ಲ, ಅವರೇನು ಮಾಡಬೇಕು? –ಅವರು ಎತ್ತರದ ಮಹಡಿಗೆ ಏರಬೇಕು. ಬಾಗಿಲನ್ನು ತೆರೆಯಲು ಅವರಿಗೆ ಕೀಲಿ ಕೈ ಕೊಡಬೇಕು. ಪಾವಟಿಗೆಗೆ ಒಂದು ಬಾಗಿಲಿದೆ, ಒಂದು ಕೀಲಿ ಕೈ ಬೇಕಾಗಿದೆ. ನಾನು ಹೇಳಿದಂತೆ, ಆ ಕೀಲಿ ಕೈ ಸಾಕಷ್ಟು ಪ್ರಾಮಾಣಿಕವಾದ ಅಭೀಪ್ಸೆಯಾಗಿದೆ ಅಥವಾ ಸಾಕಷ್ಟು ತೀವ್ರವಾದ ಪ್ರಾರ್ಥನೆಯಾಗಿದೆ. ನಾನು "ಅಥವಾ" ಎಂದು ಹೇಳಿದೆ, ಆದರೆ ಅದು "ಅಥವಾ" ಅಲ್ಲವೆಂದು ನನ್ನ ಅನಿಸಿಕೆ. ಒಂದನ್ನು ಉತ್ತಮವೆಂದು ಇಷ್ಟಪಡುವ ಜನರಿದ್ದಾರೆ ಮತ್ತು ಇನ್ನೊಂದನ್ನು ಉತ್ತಮವೆಂದು ಇಷ್ಟಪಡುವ ಜನರೂ ಇದ್ದಾರೆ. ಆದರೆ ಎರಡರಲ್ಲೂ ಒಂದು ಮಾಂತ್ರಿಕ ಶಕ್ತಿ ಇದೆ, ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದು ನಿಮಗೆ ಗೊತ್ತಿರಬೇಕು. ಎರಡರಲ್ಲೂ ಸುಂದರವಾದ ಏನೋ ಒಂದು ಇದೆ, ಅದರ ಬಗ್ಗೆ ಇನ್ನೊಂದು ದಿನ ಮಾತನಾಡುವೆ. ಅಭೀಪ್ಸೆಯಲ್ಲಿ ಏನಿದೆ ಮತ್ತು ಪ್ರಾರ್ಥನೆಯಲ್ಲಿ ಏನಿದೆ ಮತ್ತು ಅವೆರಡೂ ಯಾಕೆ ಸುಂದರ ಎನ್ನುವುದನ್ನು ನಾನು ನಿಮಗೆ ಹೇಳುತ್ತೇನೆ.... ಕೆಲವರು ಪ್ರಾರ್ಥನೆಯನ್ನು ಇಷ್ಟಪಡುವುದಿಲ್ಲ; ಅವರು ಆಳವಾಗಿ ಅವರ ಹೃದಯವನ್ನು ಪ್ರವೇಶಿಸಿದರೆ, ಅವರು ಅದನ್ನು ಹೆಮ್ಮೆ ಎಂದುಕೊಳ್ಳುತ್ತಾರೆ, ಅದಕ್ಕಿಂತ ಕೆಟ್ಟದ್ದು ಎಂದರೆ ದುರಭಿಮಾನ. ಅಭೀಪ್ಸೆ ಇಲ್ಲದ ಕೆಲವು ಜನರಿದ್ದಾರೆ, ಅವರು ಪ್ರಯತ್ನಪಡುತ್ತಾರೆ, ಆದರೆ ಅಭೀಪ್ಸೆ ಪಡಲಾಗದು; ಅದು ಯಾಕೆಂದರೆ ಅವರಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ, ಅವರಲ್ಲಿ ದೈನ್ಯತೆಯ ಕೊರತೆ ಇದೆ.

ಎರಡೂ ಅವಶ್ಯವಾಗಿ ಬೇಕು. ನಮ್ಮ ಕರ್ಮವನ್ನು ಬದಲಿಸಲು ಶ್ರೇಷ್ಠ ದೈನ್ಯತೆ ಮತ್ತು ಶ್ರೇಷ್ಠ ಇಚ್ಛಾಶಕ್ತಿ ಇರಲೇಬೇಕು.

ನಿಮಗೆ ಬೇಕಾಗಿದ್ದು ಇದು. ವಿದಾಯ, ಒಳ್ಳೆಯದಾಗಲಿ ಮಕ್ಕಳೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/91–92**



ಕರ್ಮದ ಚಕ್ರದಿಂದ ಹೊರಬರುವುದು ಮತ್ತು ದೈವೀ ಚಲನೆಯನ್ನು ಸೇರುವುದು ಯೋಗದ ನಿಖರ ಗುರಿಯಾಗಿದೆ. ಸ್ವಭಾವದ ಯಾಂತ್ರಿಕ ಸುತ್ತಿನಲ್ಲಿ ಒಬ್ಬ ಗುಲಾಮನಾದ, ಅಸಹಾಯಕ ಮತ್ತು ನಿಕೃಷ್ಟ ಉಪಕರಣವಾದ ನೀನು ಯೋಗದಿಂದ ಅದನ್ನು (ಯಾಂತರಿಕ ಸುತ್ತು) ತೊರೆಯುವಿ ಮತ್ತು ಉನ್ನತ ವಿಧಿಯ ಕಾರ್ಯ ನಿರ್ವಹಣೆಯಲ್ಲಿ ಒಬ್ಬ ಜಾಗೃತ ಪಾಲ್ಗೊಳ್ಳುವವನಾಗಿ ಮತ್ತು ಒಬ್ಬ ಕ್ರಿಯಾಶೀಲ ಪ್ರತಿನಿಧಿಯಾಗಿ ಮತ್ತೊಂದು ಉನ್ನತ ಸ್ತರಕ್ಕೆ ಏರುವಿ. ಪ್ರಜ್ಞೆಯ ಈ ಚಲನೆಯು ಎರಡು ರೇಖೆಗಳನ್ನು ಅನುಸರಿಸುತ್ತದೆ. ಮೊದನೆಯದಾಗಿ ಅಲ್ಲಿ ಆರೋಹಣವಿರುತ್ತದೆ; ನಿಮ್ನಷ್ಟಕ್ಕೆ ನೀವು ಪ್ರಾಪಂಚಿಕ ಪ್ರಜ್ಞೆಯ ಸ್ತರದಿಂದ ಹೊರಬಂದು ಉನ್ನತ ಶ್ರೇಣಿಗಳಿಗೇರುವಿರಿ. ಆದರೆ ಈ ನಿಮ್ನದಿಂದ ಉನ್ನತದೆಡೆಗಿನ ಆರೋಹಣವು ಉನ್ನತವನ್ನು ನಿಮ್ನದಲ್ಲಿ ಅವರೋಹಣವನ್ನು ಅಪೇಕ್ಷಿಸುತ್ತದೆ. ನೀವು ಭೂಮಿಯ ಮೇಲೆ ಹೋದಾಗ, ಮೇಲಿನಿಂದ ಏನೋ

ಒಂದನ್ನು ಕೆಳಗೆ ತರುತ್ತೀರಿ, – ಪರಿವರ್ತಿಸುವಂಥ ಅಥವಾ ಅದರಂತೆ ಇರುವ ಸ್ವಭಾವವನ್ನು ಮಾರ್ಪಡಿಸಲು ಒಲವು ತೋರುವ ಸ್ವಲ್ಪ ಬೆಳಕನ್ನು ತರುತ್ತೀರಿ. ನಂತರ, ಪ್ರತಿಯೊಂದರಿಂದ ವಿಶಿಷ್ಟವಾದ, ಕಳಚಲ್ಪಟ್ಟ ಮತ್ತು ಹೋಲಿಸಲಾಗದ ಈ ವಿಷಯಗಳು – ನಿನ್ನಲ್ಲಿಯ ಎತ್ತರದ ಮತ್ತು ಕೆಳಗಿನ, ನಿನ್ನ ಇರುವಿಕೆಯ ಹಾಗೂ ಪ್ರಜ್ಞೆಯ ಆಂತರಿಕ ಹಾಗೂ ಬಾಹ್ಯ ಮಟ್ಟಗಳು ಸೇರುತ್ತವೆ ಮತ್ತು ನಿಧಾನವಾಗಿ ಒಟ್ಟಾಗಿ ಜೋಡಿಸಲ್ಪಡುತ್ತವೆ ಮತ್ತು ಕ್ರಮೇಣವಾಗಿ ಅವುಗಳು ಸತ್ಯದಲ್ಲಿ, ಸಮರಸದಲ್ಲಿ ಒಂದಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/30–31 – ಶ್ರೀಮಾತೆ**

**ಅಹಂಗೆ ಅಳಿಯಿರಿ**

ನಿಮ್ಮಲ್ಲಿ ಬಲವಿಲ್ಲದಿರುವುದು, ಧೈರ್ಯವಿಲ್ಲದಿರುವುದು, ಹಠದ ಸ್ವಭಾವ ಇಲ್ಲದಿರುವುದು ಅತ್ಯಂತ ಭಯಾನಕ ಸಂಗತಿಯಾಗಿದೆ. ಅವರು ಮೇಲಿಂದ ಮೇಲೆ ನನ್ನಲ್ಲಿಗೆ ಬರುತ್ತಾರೆ ಮತ್ತು ನನಗೆ ಹೇಳುತ್ತಾರೆ: "ನಾನು ಸಾಯಬೇಕು, ನಾನು ಓಡಿಹೋಗಬೇಕು, ನಾನು ಸಾಯಬೇಕು." "ಸರಿ, ಸಾಯಿರಿ! ನಿಮ್ಮ ಅಹಂ ನಿಮ್ಮನ್ನು ಬದುಕಲು ಬಿಡಿ ಎಂದು ಕೇಳುತ್ತಿಲ್ಲ! ನೀವು ಸಾಯಬೇಕೆಂದು ಕೊಂಡಿದ್ದೀರಿ, ನಿಮ್ಮಷ್ಟಕ್ಕೆ ನೀವು ಸಾಯಿರಿ! ಆ ಧೈರ್ಯವನ್ನು ಹೊಂದಿರಿ, ನಿಮ್ಮ 'ಅಹಂ'ಗೆ ಅಳಿಯುವ ನಿಜವಾದ ಧೈರ್ಯವನ್ನು ಹೊಂದಿರಿ" ಎಂಬ ಉತ್ತರವನ್ನು ಅವರು ಪಡೆಯುತ್ತಾರೆ.

ಅದೊಂದು ಕರ್ಮವಾದ್ದರಿಂದ ನಿಮ್ಮಷ್ಟಕ್ಕೆ ನೀವೆ ಏನಾದರು ಮಾಡಬೇಕು. ಕರ್ಮವು 'ಅಹಂ'ನ ರಚನೆಯಾಗಿದೆ; ಅದಕ್ಕೆ 'ಅಹಂ' ಏನಾದರೂ ಮಾಡಲೇಬೇಕು, ಎಲ್ಲವನ್ನೂ ಮಾಡಲಾಗುವುದಿಲ್ಲ. ಕರ್ಮವು ಅಹಮಿಕೆಯ ಕ್ರಿಯೆಗಳ ಪರಿಣಾಮವಾಗಿದೆ; 'ಅಹಂ'ನ್ನು ತ್ಯಜಿಸಿದಾಗ ಮಾತ್ರ ಕರ್ಮವು ಕರಗಿ ಹೋಗುತ್ತದೆ ಎನ್ನುವುದು ಸತ್ಯ ಸಂಗತಿ. 'ಅಹಂ'ಗೆ ನೀವು ಸಹಾಯ ಮಾಡಬಹುದು, ನೆರವಾಗಬಹುದು, ಅದಕ್ಕೆ ಬಲವನ್ನು ಕೊಡಬಹುದು ಮತ್ತು ಅದಕ್ಕೆ ಧೈರ್ಯ ತುಂಬಬಹುದು, ಆದರೆ ಅದು ಅವುಗಳನ್ನು ಉಪಯೋಗಿಸಬೇಕು.

ನಾವು ನಿಜವಾಗಿಯೂ ಏನಾಗಿದ್ದೇವೆ ಮತ್ತು ಸದ್ಯಕ್ಕೆ ನಾವೇನಾಗಿದ್ದೇವೆ ಎನ್ನುವುದರ ಮಧ್ಯೆ ಒಂದು ದೊಡ್ಡ ಕಂದಕವಿದೆ, ಅದು ಕೆಲವೊಮ್ಮೆ ನಿಮ್ಮ ತಲೆ ಸುತ್ತುವಂತೆ ಮಾಡುತ್ತದೆ. ಆ ತಲೆ ಸುತ್ತುವಿಕೆಗೆ ನೀವು ಮಣಿಯಬಾರದು. ಸ್ಥಿರವಾಗಿರಿ. ಆ ವಿಷಯವು ಹೋಗುವವರೆಗೆ ಕಲ್ಲಿನಂತೆ ಸ್ಥಿರವಾಗಿರಿ.

ಸಾಮಾನ್ಯವಾಗಿ, ಕರ್ಮವನ್ನು ಕೃಪೆಯಿಂದ ಜಯಿಸುವ ಮತ್ತು ಅದನ್ನು ಸೇವಿಸುವ ಸಮಯ ಬಂದಾಗ, ಮೂರ್ತ ಅಥವಾ ಜ್ಞಾನ ಅಥವಾ ಅನುಭವಗಳ ಕರ್ಮದ ಕಾರಣವಾದ ವಾಸ್ತವಾಂಶವು ಸಹ ಅಲ್ಲಿರುತ್ತದೆ. ಆಗ, ಆ ಕ್ಷಣದಲ್ಲಿ ನೀವು ಸ್ವಚ್ಛತೆಯನ್ನು ಪ್ರಾರಂಭಿಸಬಹುದು.

ಆದರೆ, ಅತ್ಯಂತ ನೋವಿನ ಕ್ಷಣದಲ್ಲಿ ಸೂಚನೆಗಳು ಬಲಿಷ್ಠವಾಗಿದ್ದಲ್ಲಿ ನೀವು ಆಘಾತವನ್ನು ಸಹಿಸಿಕೊಳ್ಳಲೇಬೇಕು. ಇಲ್ಲದಿದ್ದರೆ, ನೀವು ಯಾವಾಗಲೂ ಪುನಃ ಆರಂಭಿಸಬೇಕಾಗುತ್ತದೆ, ಯಾವಾಗಲೂ ಮತ್ತೊಮ್ಮೆ ಆರಂಭಿಸಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/373 – ಶ್ರೀಮಾತೆ**

## ಶ್ರೀ ಅರವಿಂದರ

# 'ವೇದ ರಹಸ್ಯ'

**– ಅನುವಾದ: ಪುಟ್ಟು ಕುಲಕರ್ಣಿ**

**5**

ಅಧ್ಯಾಯ 2

## ವೈದಿಕ ತತ್ತ್ವ–ಸಿದ್ಧಾಂತದ ಪುನರಾವಲೋಕನ

## [ದಿ ರಿಟ್ರೊಸ್ಪೆಕ್ಟ ಆಫ್ ವೇದಿಕ್ ಥಿಯರಿ]

ಹಾಗಾದರೆ, ವೇದ ಎನ್ನುವದು, ನಮ್ಮ ಬೌದ್ಧಿಕ ತತ್ತ್ವಶಾಸ್ತ್ರಗಳಿಗಿಂತಲೂ **ಪೂರ್ವದ–ಯುಗದ**ಲ್ಲಿಯೇ ಸೃಷ್ಟಿಗೊಂಡಿದೆ ಎಂದಾಯಿತು. ಅದು ಸೃಷ್ಟಿಗೊಂಡ ಆ ಮೂಲದ – ಯುಗಾರಂಭದ – ಅವಧಿಯೊಳಗೆ ಚಿಂತನಾಸ್ವರೂಪದ ಪ್ರಗತಿಯ ಹಂತದಲ್ಲಿ ನಿರೂಪಿತಗೊಳ್ಳುತ್ತಿದ್ದ **ವಾಕ್–ಸ್ವರೂಪದ ಅಭಿವ್ಯಕ್ತಿ**ಯ[1] ವಿನ್ಯಾಸಗಳು, ನಾವು ಇತ್ತೀಚಿಗೆ ಅಳವಡಿಸಿಕೊಂಡಿರುವ **ತರ್ಕಬದ್ಧ ಕಾರ್ಯ–ಕಾರಣಗಳ**[2] ಆವರಣಗಳಿಗಿಂತ ಸಂಪೂರ್ಣವಾಗಿ ಬೇರೆಯೇ ಆಗಿದ್ದವು. ಆ ರೀತಿಯ ಚಿಂತನಾ ಅಭಿವ್ಯಕ್ತಿಗಳು ಇಂದಿನ ಆಧುನಿಕ ರೀತಿ–ರಿವಾಜುಗಳಲ್ಲಿ ಅಥವಾ ಅಭ್ಯಾಸದ ಕ್ರಮದಲ್ಲಿ ಎಂದಿಗೂ ಪ್ರವೇಶದ ಅವಕಾಶವನ್ನು ಪಡೆದುಕೊಳ್ಳುವದಿಲ್ಲ. ಆ ರೀತಿಯಲ್ಲಿ ಅಭಿವ್ಯಕ್ತಗೊಂಡ ಈ ಜ್ಞಾನಪೂರ್ಣ ಅಭಿವ್ಯಕ್ತಿಗಳು ಸಂಪೂರ್ಣವಾಗಿ ಅಂತರಂಗದ ಅನುಭವದೊಂದಿಗೇ ಮತ್ತು ಪ್ರಜ್ಞಾಪೂರ್ಣತೆಯ ಮನೋಭೂಮಿಕೆಯಲ್ಲಿಯೇ ಉದಿತಗೊಂಡು ಅಭಿವ್ಯಕ್ತಗೊಳ್ಳುತ್ತಿದ್ದವು. ಇದು ಜ್ಞಾನದ ಎಲ್ಲ ಆಯಾಮಗಳಿಗೂ ಅನ್ವಯವಾಗಿತ್ತು. ಅದಕ್ಕಿಂತ ಮಿಗಿಲಾಗಿ ಮಾನವನ ದೈನಂದಿನ ಬದುಕಿನ ಚಟುವಟಿಕೆಗಳು ಮತ್ತು ಮಾನವ ಕುಲವು ಅಪೇಕ್ಷಿಸುತ್ತಿರುವ ಸರ್ವೇ–ಸಾಮಾನ್ಯ–ಪರಿಕಲ್ಪನೆಗಳಿಗಿಂತ ವಿಭಿನ್ನವಾಗಿಯೇ ಇರುವ ಪರಿಸೀಮೆಯಲ್ಲಿ ಇದ್ದವು. ಇವುಗಳ ಗುರಿಯೂ ಪ್ರದೀಪನಗೊಳ್ಳುವ–ದಾಗಿದೆಯೇ ವಿನಾ ತರ್ಕ ಸಮ್ಮತಿಯ ಅಥವಾ ಯುಕ್ತಾಯುಕ್ತತೆಯ ದೃಢ ವಿಶ್ವಾಸವನ್ನು ಅವಲಂಬಿಸಿರುವದಿಲ್ಲ. ಅವರ ಚಿಂತನಾ ಶ್ರೇಣಿಯು ಪ್ರಚೋದಿತಗೊಂಡಿರುವ ಧೀಃಶಕ್ತಿಯ ದೃಷ್ಟಾರನದಾಗಿತ್ತು ವಿನಾ ನಿಖರತೆಯಲ್ಲಿಯೇ ನಿರ್ಣಯಿಸುವ ತಾರ್ಕಿಕನದಾಗಿರಲಿಲ್ಲ. ಭಾರತೀಯ ಚಿಂತನಾ ಪದ್ಧತಿಯು ಈ

ರೀತಿಯ ಅಭಿವ್ಯಕ್ತಿಗಳನ್ನು ಅತ್ಯಂತ ವಿಶ್ವಾಸಪೂರ್ವಕವಾಗಿಯೇ, **ವೇದದ ಉಗಮ**ವೆಂದೇ[2(1)] ಆತ್ಮಪೂರ್ವಕವಾಗಿ ಸಂರಕ್ಷಿಸಿಕೊಂಡು ಬಂದಿದೆ. ಇಲ್ಲಿ ಋಷಿಯನ್ನು ಕೇವಲ ವೈಯಕ್ತಿಕವಾಗಿ ಋಕ್ ರಚಿಸಿದವನೆಂದು ಎಂದೂ ಕಾಣುವದಿಲ್ಲ. ಬದಲಾಗಿ ಅವನನ್ನು ಶಾಶ್ವತ ಸತ್ಯವನ್ನು ಅಥವಾ ಋತವನ್ನು ಮತ್ತು ಅಲೌಕಿಕ–ಜ್ಞಾನವನ್ನು ದೃಷ್ಟಿಸಿದವನು/ಸಾಕ್ಷಾತ್ಕರಿಸಿಕೊಂಡವನು ಎಂದು **'ದೃಷ್ಟಾರ'**ನೆಂದೇ ಆರಾಧಿಸಲಾಗುತ್ತಿದೆ. ಹೀಗಾಗಿ ವೇದದ ಭಾಷೆ ಎಂದರೆ **"ಶ್ರುತಿ"**ಯೇ ಆಗಿದೆ. ಈ ಛಂಧಃಸ್ವರೂಪವನ್ನು ಅಥವಾ ಸತ್ಯವನ್ನು ಯಾವುದೇ ಬೌದ್ಧಿಕ ಮನಸ್ಸು ಸೃಜಿಸಲು ಸಾಧ್ಯವಿಲ್ಲ ಆದರೆ ಆಲಿಸಬಹುದು ಮಾತ್ರ. ಈ ದೈವೀ ಧ್ವನಿಯು **(ವಾಕ್ ಅಥವಾ ವಾಣಿಯು)**[3] ಆ ಅನಂತದಲ್ಲಿ ನಿರಂತರವಾಗಿರುವ ಸ್ಪಂದನದ ಅಭಿವ್ಯಕ್ತಿಯಾಗಿದ್ದು, ಇದು ಮಾನವನ **ಅಂತರಂಗದ ವ್ಯವಸ್ಥೆಯೂ**[4] **ಇದಕ್ಕೆ** ಸಂವಾದಿಯಾಗುತ್ತದೆ. ಈ ರೀತಿಯ ಸ್ಪಂದನದಶೀಲ ಸಂವಾದದ ಸಲುವಾಗಿಯೇ ಮಾನವನು ತನ್ನನ್ನು ತಾನೇ ಆ ಅಲೌಕಿಕವಾಗಿರುವ ಜ್ಞಾನವನ್ನು ಪಡೆದುಕೊಳ್ಳುವ ಸಲುವಾಗಿ ಸಾಮರ್ಥ್ಯಪೂರ್ಣವಾಗಿರುವಂತೆ ರೂಪಣೆಗೊಳಿಸಿಕೊಂಡಿರುತ್ತಾನೆ. ಹೀಗಾಗಿ ಆ ಶಬ್ದಗಳು ತಮ್ಮಷ್ಟಕ್ಕೆ ತಾವೇ **'ದೃಷ್ಟಿ' ಮತ್ತು "ಶ್ರುತಿ"ಯಾಗಿ, 'ದರ್ಶನ' ಮತ್ತು 'ಶ್ರಾವ್ಯ'ವಾಗಿವೆ**[5] – ಇವೇ ವೇದದ ಅಭಿವ್ಯಕ್ತಿಗಳೂ ಆಗಿವೆ. ಇವೆಲ್ಲವು ಮತ್ತೆ ಈ **ಆತ್ಮಾನುಬಂಧದ ವ್ಯವಸ್ಥೆಯಲ್ಲಿ (ಕಾಗ್ನೆಟ್)**[6] ಈ ಶಬ್ದಗಳು ಇಲ್ಲಿ ಮಹತ್ವಪೂರ್ಣವಾಗಿ, ಅದರಲ್ಲೂ ಋಕ್‌ಗಳಲ್ಲಿ ಕಾಣುತ್ತಿರುವ ನಿಗೂಢವಾಗಿರುವ ಪಾರಿಭಾಷಿಕ–ಪದಕೋಶಗಳಾಗಿ, ರಹಸ್ಯಮಯ ಜ್ಞಾನವನ್ನು ಹೊಂದಿರುವ ಮತ್ತು ಪ್ರೇರಣಾ–ಸಂರಚನೆಗಳನ್ನು ಹೊಂದಿವೆ.

ಈ ರೀತಿಯಲ್ಲಿ ಶ್ರುತಿಪ್ರಕಾಶನದ ಮೂಲಕ ವಿಕಾಸಗೊಳ್ಳುತ್ತಿದ್ದ ವೇದದ ಚಿಂತನಾ ಕ್ರಮದಲ್ಲಿಯೂ ಸಹಿತ ಯಾವುದೇ ರೀತಿಯ ಪವಾಡಸದೃಶವಾಗಿರುವ ಅಥವಾ ಅಲೌಕಿಕತೆಯ ಕುರಿತು ಯಾವುದೇ ಸಲಹೆಗಳು ಇಲ್ಲ. ಈ ರೀತಿಯಲ್ಲಿರುವ ಸಂಕಾಯಗಳನ್ನು ಅನುಷ್ಠಾನಿಸಿಕೊಂಡ ಋಷಿಯು, ಇವುಗಳನ್ನು ಸ್ವಯಂ–ವಿಕಾಸದ–ಸಂಸ್ಕೃತಿಯನ್ನು ಪ್ರಗತಿಶೀಲವಾಗಿಯೇ ಪಡೆದುಕೊಳ್ಳಲು ರೂಪಿಸಿಕೊಂಡಿದ್ದನು. ಎಲ್ಲೆಡೆಗೂ ಚಲನಶೀಲವಾದದ್ದು ಜ್ಞಾನವಾಗಿತ್ತು; ಗಮ್ಯವನ್ನು ತಲುಪುವದೂ ಅದೇ ಜ್ಞಾನ; ಅಥವಾ ಅಂತಿಮವಾಗಿ ಗಮ್ಯವನ್ನು ಅರಸುವದಾಗಲೀ ಅಥವಾ ವಿಜಯಿಯಾಗುವದಾಗಲಿ ಎಲ್ಲವೂ "ಜ್ಞಾನವೇ"

ಆಗಿತ್ತು. ವೇದದ ಪ್ರತಿ ಹಂತದ ಪಥದಲ್ಲಿಯೂ ಇದೇ ವ್ಯವಸ್ಥೆಯ ಪಯಣವನ್ನು ಹೊಂದಿರುವದನ್ನು ನಾವು ಕಾಣಬಹುದಾಗಿದೆ; **ಋತದ ಪಥದಲ್ಲಿ ಆತ್ಮದ ಪಯಣ**[7] ಇದಾಗಿದೆ. ಈ ಪಥದಲ್ಲಿ ಸಾಗುವಾಗ, ಅದು ಮುಂದೆ ಮುಂದೆ ಪಯಣಿಸುತ್ತಿದ್ದಂತೆ, ಅದು ಕ್ರಮೇಣ **ಆರೋಹಣ**ವನ್ನೂ ಕೈಕೊಂಡಿತು; ಜ್ಞಾನದ ಹಾಗೂ ಪ್ರಕಾಶದ ನವನವೀನ ಆಯಾಮದ ದೃಶ್ಯಗಳನ್ನೇ ದೃಷ್ಟಿಸುತ್ತಾ ನಡೆಯಿತು, ಜೊತೆಗೆ ಅದರೊಡನೆ ತನ್ನನ್ನು ತೆರೆದುಕೊಳ್ಳಲು ಅಭೀಪ್ಸೆಯಲ್ಲಿಯೇ ಪಯಣವನ್ನು ಮುಂದುವರೆಸಿತು. ಈ ಸಾಹಸಮಯ ಅಲೌಕಿಕ ಪಯಣದಲ್ಲಿ ತನ್ನ ವೀರೋಚಿತ ಪ್ರಯತ್ನಗಳಲ್ಲಿ ಅದ್ಭುತವಾದ ಯಶಸ್ಸನ್ನೂ ಪಡೆದುಕೊಂಡು **ಆಧ್ಯಾತ್ಮಿಕ ಸಂಪತ್ತ**ನ್ನೂ ವಿಸ್ತಾರಗೊಳಿಸಿಕೊಂಡಿತು.

ಐತಿಹಾಸಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಋಗ್ವೇದವನ್ನು ಗಮನಿಸಿದಲ್ಲಿ, ಮನುಕುಲದ ಸಮಗ್ರ ಪ್ರಗತಿಯ ವಿಕಾಸದ ಪ್ರಕ್ರಿಯೆಯಲ್ಲಿ ದಾಖಲಾಗಿರುವ ಅಪ್ರತಿಮವಾದ ಸಾಧನೆಯ ದಾಖಲೆ ಇದಾಗಿದೆ. ಅದರಲ್ಲೂ ನಿಗದಿತವಾಗಿರುವ ಅವಧಿಯಲ್ಲಿ, ಈ ರೀತಿಯಲ್ಲಿ ಸಂಯೋಜಿಸಲ್ಪಟ್ಟು ಪ್ರಕಾಶನಗೊಂಡಿದೆ; ಇದು **ಗೂಢವೂ (ಅಲೌಕಿಕವೂ**–Esoteric) ಆಗಿದೆ, ಜೊತೆಜೊತೆಗೆ ಇದು ವಿಲಕ್ಷಣಮಯತೆಯಲ್ಲಿರುವ **ಸರ್ವಸುಲಭದ ಸಮತೆ**ಯಲ್ಲಿಯೂ(Exoteric) ಮಹತ್ವವನ್ನೂ ಹೊಂದಿದೆ. ಇದೊಂದು ಕರ್ತವ್ಯ(ಕರ್ಮ)ಗಳನ್ನು ಒಳಗೊಂಡ ಗ್ರಂಥವಾಗಿದೆ. ಇಲ್ಲಿರುವ ಕರ್ಮವೆಂದರೆ ಅಂತರಂಗ ಹಾಗೂ ಬಹಿರಂಗದ ತ್ಯಾಗದ ವಿಷಯವಾಗಿದೆ. ಇದೊಂದು ಯುದ್ಧದ ವಿಷಯ ಹಾಗೂ ವಿಜಯದ ಅವಕಾಶವನ್ನು ಸಂಶೋಧಿಸಿ, ರೂಪಿತಗೊಂಡಿರುವ ಶಕ್ತಿಯ–ಋಕ್‌ಗಳನ್ನು ಹೊಂದಿದ್ದು, ಅದೇ ರೀತಿಯಲ್ಲಿ ಚಿಂತನದ ಸ್ತರಗಳಲ್ಲಿ ಯಶಸ್ವಿಯಾಗಿ ಆರೋಹಣದ ಸಲುವಾಗಿ ಇರುವ ಸ್ತರಗಳಲ್ಲಿ ಯಾನ ಮಾಡುತ್ತಾ, ಸಾಮಾನ್ಯವಾಗಿ ಇನ್ನೂ ಸ್ವಾಭಾವಿಕವಾಗಿ ಪಶು–ಸದೃಶವಾಗಿಯೇ ಇರುವ ಮಾನವನಿಗೆ ತಲುಪಲು ದುರ್ಗಮವಾಗಿರುವ ಹಂತದಲ್ಲಿ, ಅದನ್ನು ಪಡೆದುಕೊಳ್ಳಲು ನಡೆದ ಪ್ರಯತ್ನಗಳಾಗಿವೆ; ಮಾನವನು ತನ್ನ ಮೃಣ್ಮಯದ ಸ್ವರೂಪದಲ್ಲಿದ್ದರೂ, ಆ ದೈವೀ–ಪ್ರಕಾಶವನ್ನು, ಪರಮ ಶಕ್ತಿಯನ್ನು ಮತ್ತು ಕೃಪೆಯನ್ನು ಲಭ್ಯಗೊಳಿಸಿಕೊಳ್ಳುವಲ್ಲಿ, ಆರಾಧನಾ ಭಾವದಿಂದ ಸ್ತುತಿಸಿದ ಸ್ತುತಿಗಳಾಗಿವೆ.

(ಸಶೇಷ)

**ಟಿಪ್ಪಣಿಗಳು:**

**ಪೂರ್ವದ–ಯುಗ;** ಧ್ವನ್ಯಾಭಿವ್ಯಕ್ತಿಯಲ್ಲಿಯೇ ಇರುವ ಪ್ರಕೃತಿಯ ಜೀವ–ಸಂಕುಲದ ವ್ಯವಸ್ಥೆಯು ಹೊಂದಿರುವ ಅಭಿವ್ಯಕ್ತಿಯ ಕುರಿತು ಇನ್ನೂ ಜಿಜ್ಞಾಸೆಗಳು ಮೂಡಿರದ ಅವಧಿಯಲ್ಲಿ, ಪ್ರಕೃತಿಯ ಭೌಗೋಳಿಕ ಅಂಶಗಳಲ್ಲಿ ರೂಪಣೆಗೊಳ್ಳುವ ಧ್ವನಿಮಾ ವ್ಯವಸ್ಥೆಯಲ್ಲಿ, ಮತ್ತು ಆಯಾ ಸಂದರ್ಭದಲ್ಲಿ ಅದು ತಾನೇ ತಾನಾಗಿ ರೂಪುಗೊಂಡು, ಅಭಿವ್ಯಕ್ತಗೊಳ್ಳುತ್ತಿದ್ದ ಅವಧಿ. ಇಡೀ ಜೀವ–ಸಂಕುಲವೇ ತನ್ನದೇ ಆದ ಸಂವಹನಾ ವ್ಯವಸ್ಥೆಯನ್ನು ಹೊಂದಿದೆ. ಅದನ್ನು ಆಲಿಸುವ ಶ್ರವಣ ಶಕ್ತಿ ಮಾನವನ ಬಾಹ್ಯ–ಅಂಗಗಳಿಗಿಲ್ಲ. ಇನ್ನು ಅಂತರಂಗದ ವ್ಯವಸ್ಥೆಯಲ್ಲಿ ಈ ಅಲೌಕಿಕ ನಾದದ ಸ್ಪಂದನವನ್ನು ಕಂಡುಕೊಂಡ ಮಾನವನ ಚಿಂತನಾ ವಿಕಾಸದ ಆದಿಮ ಹಂತದಲ್ಲಿ, ಇದು ದೈಹಿಕ ಸನ್ನೆಗಳಿಗಿಂತ ಪ್ರಗತಿ ಹೊಂದಿ, ಶಾಬ್ದಿಕ ಅದರಲ್ಲೂ ಧ್ವನಿಪೂರ್ಣವಾಗಿರುವ ಅಭಿವ್ಯಕ್ತಿಯಲ್ಲಿ ಸಾಕಾರಗೊಳ್ಳುತ್ತಿತ್ತು. ಪ್ರಕೃತಿಯೊಡನೆ ಅವಿನಾಭಾವ ಸಂಬಂಧವನ್ನು ಹೊಂದಿ, ತಾನು ಪ್ರಕೃತಿಯಿಂದ ಭಿನ್ನನಲ್ಲ ಎನ್ನುವ ಕಲ್ಪನೆಯೂ ಉದಿತಗೊಳ್ಳದ ಅವಧಿಯಲ್ಲಿ, ಈ ರೀತಿಯ ಸಂವಹನದಲ್ಲಿ ಮನುಕುಲದ ಜೀವನದ ವಿಧಾನವಿತ್ತು. ಅದರ ಸ್ವರೂಪವನ್ನು ತಿಳಿದುಕೊಳ್ಳಲು ನಮಗೀಗ ಲಭ್ಯವಿರುವದು ಕೇವಲ ಋಕ್‌ಗಳಲ್ಲಿ ಇರುವ ಧ್ವನ್ಯಾತ್ಮಕ ಸ್ವರೂಪದ ಮೂಲಧಾತುಗಳು ಮಾತ್ರ. ಇಂತಹ ಪರಿಶುದ್ಧವಾದ, ನಿಸರ್ಗ ಸಹಜವಾದ ಹಾಗೂ ವಿಶ್ವಾತ್ಮಕವಾದ ಸಂರಚನೆಯು ಇಂದಿಗೂ ಲಭ್ಯವಿದೆ. ಆದರೆ ಅದರೊಡನೆ ಸ್ಪಂದನಗೊಳ್ಳಲು ನಾವು ನಮ್ಮನ್ನು ಸಿದ್ಧಗೊಳಿಸಿಕೊಳ್ಳಬೇಕಿದೆ.

**1. ವಾಕ್–ಸ್ವರೂಪದ ಅಭಿವ್ಯಕ್ತಿ:** ಉಪನಿಷತ್ತಿನಲ್ಲಿ ಬರುವ "ದ" ಎನ್ನುವ ಶಬ್ದದ/ಧ್ವನಿಯ ಕುರಿತು ದೇವತೆಗಳಲಿ 'ದಮ'ವಾಗಿ, ದೈತ್ಯರಿಗೆ 'ದಯೆ'ಯಾಗಿ ಮಾನವರಿಗೆ 'ದಾನ'ವಾಗಿ ಅನುಷ್ಠಾನಗೊಂಡಿರುವ ವಿವರಣೆಗಳಲ್ಲಿ, ಈ ಶಾಬ್ದಿಕ ಸ್ವರೂಪದ ಅಭಿವ್ಯಕ್ತಿಗಳು ಹೇಗೆ ಧ್ವನ್ಯಾತ್ಮಕವಾಗಿ ವೈಶ್ವಿಕ ಸತ್ಯವನ್ನು ದರ್ಶಿಸುತ್ತಿದ್ದವು ಎಂದು ಗೊತ್ತಾಗುತ್ತದೆ.

**2. ತರ್ಕಬದ್ಧ ಕಾರ್ಯ–ಕಾರಣಗಳ ಆವರಣ:** ಪ್ರಕೃತಿಗೂ ತನಗೂ ಒಂದು ಅಂತರವನ್ನು ನಿರ್ಮಿಸಿಕೊಂಡು, ಲಭ್ಯವಾಗಿದ್ದ ಧ್ವನಿಪೂರ್ಣತೆಯನ್ನು ಶಾಬ್ದಿಕ ಸಂರಚನಾ ಕ್ರಮಾಂಕದಲ್ಲಿ, ಒಂದು ವ್ಯವಸ್ಥೆಗೊಳಪಡಿಸಿಕೊಂಡು, ಅದನ್ನೇ

ಸಾರ್ವತ್ರಿಕವಾಗಿ – ಒತ್ತಾಯದಿಂದಲಾದರೂ ಸರಿಯೇ – ಹೇರಬೇಕೆಂಬ ಒತ್ತಾಸೆ ರೂಪಣೆಗೊಂಡಾಗ, ವೈಶ್ವಿಕವಾಗಿ ಎಲ್ಲರಿಗೂ ಸಮತೆಯಲ್ಲಿಯೇ ಲಭ್ಯವಾಗುತ್ತಿದ್ದ ಜ್ಞಾನದ–ಸ್ಪಂದನವನ್ನು, ತಮ್ಮ ತಮ್ಮ ನಿಯಂತ್ರಣದಲ್ಲಿ ಇರಿಸಿಕೊಳ್ಳುವ ಯತ್ನಗಳಲ್ಲಿ, ಭಾಷಾಶಾಸ್ತ್ರವು ಅಪಾರ ಪ್ರಮಾಣದ ಆಯಾಮಗಳನ್ನು ಪಡೆದುಕೊಂಡು, ಬಾಹ್ಯದ ಸಂರಚನೆಯಲ್ಲಿ ಸಮೃದ್ಧಿಯನ್ನು ಕಂಡದ್ದೇನೋ ನಿಜ. ಆದರೆ ಆ ಭಾಷಾ ವ್ಯವಸ್ಥೆಯಲ್ಲಿ ರೂಪಣೆಗೊಳ್ಳುತ್ತಿದ್ದ ಆತ್ಮದ ವಿಕಾಸದ ಪಥವು ಮಾತ್ರ, ಅಹಂಕಾರಪೂರಿತ ಗವಸಿನಲ್ಲಿ ಹುದುಗುತ್ತಾ ಉಳಿಯಿತು. ಕಾರ್ಯ–ಕಾರಣಗಳು ನಿಯತಿಯ ಸಹಜ ನಿಯಮಗಳು ಎನ್ನುವದನ್ನು ಮರೆತು, ಅದನ್ನು ತರ್ಕ ಸಮ್ಮತಿಯಲ್ಲಿಯೇ ಸ್ವೀಕರಿಸುವ ವಿಧಾನವು ಒಂದು ಆವರಣವನ್ನೇ ನಿರ್ಮಿಸಿತು. ಆ ಆವರಣಕ್ಕೆ ತಾತ್ಕಾಲಿಕವಾಗಿ ಲಭ್ಯವಾಗುತ್ತಿದ್ದ ಆಕರ್ಷಣೆ, ಇದನ್ನು ಮತ್ತೂ ಮತ್ತೂ ಕೇಂದ್ರೀಕರಿಸುತ್ತ ನಡೆಯಿತು. ಆತ್ಮದ ಸೂಕ್ಷ್ಮಾತಿಸೂಕ್ಷ್ಮ ಸ್ಪಂದನಕ್ಕಿಂತ, ಹೃದಯವನ್ನೂ ಅಲುಗಾಡಿಸುವ ಹಂತಕ್ಕೆ ನಿರೂಪಿತಗೊಳ್ಳುವ ಶಬ್ದಜಾಲ/ಧ್ವನಿಯ ಸ್ವರೂಪದಲ್ಲಿ 'ಚಿಂತನಾ ಕ್ರಮಾಂಕವು' ಅವರೋಹಣದ ಪಥದಲ್ಲಿ ರಭಸದಿಂದ ಮುನ್ನುಗ್ಗಿತು.

**2(1). ವೇದದ ಉಗಮ:** ಶ್ರುತಿಗೊಂಡದ್ದು ಸ್ಮೃತಿಯಾಗಿ ಉಳಿದುಕೊಳ್ಳುವ ಕ್ರಿಯೆ ಚಿಂತನಾ ವಿಕಾಸದ ಪಥದಲ್ಲಿ ಒಂದು ಕ್ರಾಂತಿಕಾರಕವಾದ ಹಂತವಾಗಿದೆ. ಶ್ರುತಿಗೊಂಡದ್ದು ಚಿರಂತನ; ಅದು ವೈಶ್ವಿಕ ಸತ್ಯ; ಅದು ನಿರಂತರವಿರುತ್ತದೆ; ಸದಾ ಸ್ಪಂದನಶೀಲವಾಗಿಯೇ ಇರುತ್ತದೆ; ಯಾರು ಅದರೊಡನೆ ಸ್ಪಂದನವನ್ನು ಹೊಂದಲು ಅಪೇಕ್ಷಿಸುತ್ತಾರೋ ಅವರಿಗೆ "ದೃಷ್ಟವೂ" ಆಗುತ್ತದೆ. ಹೀಗಾಗಿ ಶ್ರುತಿಯು ವೇದದ ಧ್ವನ್ಯಾತ್ಮಕ ಉಗಮವನ್ನು ಸಂಕೇತಿಸುತ್ತಿದ್ದರೂ, ಸ್ಮೃತಿಯು ಮಾತ್ರ – ಮಾನವನ ಮನೋಚೇತನದಲ್ಲಿ ಸ್ಥಾಯಿಯಾಗಿ – ವೇದದ ಉಗಮಕ್ಕೆ ಅಥವಾ ವೇದದ ಮೂಲಕ ಮಾನವ ಪ್ರಜ್ಞೆಯ–ಚಿಂತನದ ವಿಕಾಸದ ಪಥವಾಗಿ ನಿರ್ಮಿತಿಗೊಂಡಿದೆ ಎಂದು ಊಹಿಸಬಹುದು.

ವೇದಗಳಿಗೆ, – ವ್ಯಾಸರ ನಂತರದಲ್ಲಿ – 1) ಉಪನಿಷತ್ ಕಾಲದ ವಾಙ್ಮಯದಲ್ಲಿ, 2) 8ನೇ ಶತಮಾನದಲ್ಲಿ ಶ್ರೀ ಶಂಕರಾಚಾರ್ಯರು, 3) 14–15 ನೇ ಶತಮಾನದಲ್ಲಿ ಸಾಯಣಾಚಾರ್ಯ ಮತ್ತು 4) 20ನೇ ಶತಮಾನದಲ್ಲಿ ಶ್ರೀ ಅರವಿಂದರು (ಇಂಗ್ಲೀಷಿನಲ್ಲಿ) ಮಾತ್ರ ಭಾಷ್ಯಗಳಿವೆ. ವೇದದ ಶಬ್ದಾರ್ಥಗಳು,

ಭಾವಾರ್ಥಗಳು ಹಲವಿವೆ. ಆದರೆ ಭಾಷ್ಯದ ಹಂತದಲ್ಲಿ ಇಂದಿಗೂ ಈ ನಾಲ್ಕು ಕೊಡುಗೆಗಳನ್ನು ಮಾತ್ರ ಪ್ರಮಾಣವೆಂದು ಒಪ್ಪಲಾಗುತ್ತಿದೆ. ಅದರಲ್ಲೂ ಶ್ರೀ ಅರವಿಂದರ ಭಾಷೆಯ ಗಾಂಭೀರ್ಯ ಹಾಗೂ ವಿಷಯ ಪ್ರತಿಪಾದನೆಯ ವಿಸ್ತಾರದಿಂದಾಗಿ, ಇನ್ನೂ ಅಧ್ಯಯನಕಾರರಿಗೆ ಸವಾಲಾಗಿಯೇ ಕುಳಿತಿದೆ. ಭಾರತೀಯನೊಬ್ಬನಿಗೆ ವೇದದ, ವಾಙ್ಮಯದ, ಪುರಾಣ ಹಾಗೂ ನಂಬುಗೆಗಳ ಪ್ರತಿಮೆಗಳಲ್ಲಿ ದೇಶಾದ್ಯಂತ ವಿವಿಧತೆಯಿದ್ದರೂ, ಒಟ್ಟಂದದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ ಇದೇ ವಿಷಯಗಳನ್ನು ಆಂಗ್ಲ ಭಾಷೆಯಲ್ಲಿ ಚರ್ಚೆ ನಡೆಸುವಾಗ, ಭಾಷಾ ರಚನೆಗೂ, ಪ್ರತಿಮೆಗಳ ವಿಷಯಕ್ಕೂ ತುಂಬ ಗೋಜಲು ನಿರ್ಮಾಣವಾಗಿತ್ತದೆ.. ಭಾರತೀಯ ಭಾಷೆಗಳಲ್ಲಿಯೇ ಇದರನುವಾದವೂ ಒಂದು ಸವಾಲಿನ ಕ್ರಿಯೆ. ಆದರೂ, ಅಲ್ಲಲ್ಲಿ ಈ ತೆರನಾದ ಚಟುವಟಿಕೆಗಳು ಪ್ರಾರಂಭಗೊಂಡಿವೆ.

**3. ವಾಕ್ ಅಥವಾ ವಾಣಿ:** ವಾಣಿ/ವಾಕ್–ನಾದ–ನಿನಾದ–ಸುನಾದ–ಧ್ವನಿ–ಶಬ್ದವೆಲ್ಲವೂ ಇದರ ಹಂತಗಳೇ ಆಗಿವೆ. ಇದು ಮಾನವನ ದೇಹದ ಸಂರಚನಾ ವ್ಯವಸ್ಥೆಯಲ್ಲಿ ವೈಖರೀ–ಮಧ್ಯಮಾ–ಪಶ್ಯಂತೀ–ಪರಾ–ಶೂನ್ಯ–ಸೂಕ್ಷ್ಮ–ಸಂವಿತ್ ಎನ್ನುವ ಏಳು ಹಂತದಲ್ಲಿ ಅನುಸ್ಪಂದನಗೊಳ್ಳುತ್ತದೆ. ವೈಶ್ವಿಕ ನಾದದ ತರಂಗದಲ್ಲಿಯೇ ಸಂವಾದಿಯಾಗುವದನ್ನು ರೂಢಿಸಿದ ಚಿಂತನಾ ವಿಕಾಸದ ಪಥಗಳು, ಇವುಗಳ ವಿವರಗಳನ್ನು ದಾಖಲಿಸಿವೆ.

**4. ದೃಷ್ಟಿ–ದರ್ಶನ**

**5. 'ದೃಷ್ಟಿ' ಮತ್ತು 'ಶ್ರುತಿ'ಯಾಗಿ, 'ದರ್ಶನ' ಮತ್ತು 'ಶ್ರಾವ್ಯ'ವಾಗಿವೆ:** ಶಬ್ದ ಕೇವಲ ಶ್ರಾವ್ಯವೆಂದು ಮಾತ್ರ ನಮ್ಮ ಮನಸ್ಸು ಒಪ್ಪಿದೆ. ಆದರೆ ಅದಕ್ಕೂ "ರೂಪ"ವಿದೆ; "ಗಂಧ"ವಿದೆ; ಸ್ಪರ್ಶಿಸಲು ಸಾಧ್ಯವಿರುವ "ಆಕಾರ"ವಿದೆ. ಘ್ರಾಣಿಸಲು ಸಾಧ್ಯವಿರುವ "ಪರಿಮಳ"ವಿದೆ. ಇದನ್ನು ಕೇವಲ ಕಲ್ಪನೆ ಎಂದು ಪರಿಗಣಿಸಿದರೂ ಸಹಿತ ಅದರ ಅಸ್ತಿತ್ವಕ್ಕೆ ಎಂದೂ ಧಕ್ಕೆ ಬರುವದಿಲ್ಲ. ಯಾವ ಈಥರ್ ಮೂಲಕ ಶಬ್ದ ಚಲಿಸುತ್ತಿದೆಯೋ ಅದಕ್ಕೆ ಸಂಸ್ಕೃತದಲ್ಲಿ "ತಾರಾ" ಎನ್ನುವ ಹೆಸರಿದೆ. ತಾರಾ ವಿವರಣೆಗಳು ಸಂಪೂರ್ಣವಾಗಿ ಈಥರ್ ವಿವರಣೆಯನ್ನೇ ಕೊಡುತ್ತಿವೆ.

**6. ಆತ್ಮಾನುಬಂಧದ ವ್ಯವಸ್ಥೆ:** ವೈಶ್ವಿಕ ನಾದದೊಂದಿಗೆ ಸಹಜವಾಗಿಯೇ ಸ್ಪಂದಿಸುತ್ತ, ಮಾನವನ ಲೌಕಿಕ ಜೀವನದ ಸಂದರ್ಭಗಳಲ್ಲಿ 'ಧ್ವನಿಪೂರ್ಣ'ವಾಗಿ

ಸಂವಹಗೊಳ್ಳಲು, ಅವಕಾಶದಲ್ಲಿ ಸ್ಥಿತವಿರುವ ವಾಕ್, ಶಬ್ದದ ಆಕಾರವನ್ನು ತಾಳಿದರೂ, ಮೂಲ ಸ್ವಭಾವವನ್ನೇ ಹೊಂದಿ ಅಭಿವ್ಯಕ್ತಗೊಳ್ಳುವ ವ್ಯವಸ್ಥೆ ಇದು. ಇಂತಹ ಸಂದರ್ಭಗಳನ್ನು ಮಾನವನ ಚಿಂತನಾ ವಿಕಾಸದ ಪಥದಲ್ಲಿ, ಪ್ರವಾದಿ ವಾಣಿಯೆಂದೋ, ದೈವವಾಣಿಯೆಂದೋ, ಅಥವಾ ಅಲೌಕಿಕ ಅಭಿವ್ಯಕ್ತಿಯೆಂದೋ, ಬೆಡಗಿನ ಸ್ವರೂಪದಲ್ಲಿ ಮತ್ತು ಕಾರಣಿಕ ಸ್ವರೂಪದಲ್ಲಿ ಆರಾಧಿಸುತ್ತಲೇ ಬರಲಾಗಿದೆ.

**ಗೂಢವೂ (ಅಲೌಕಿಕವೂ–Esoteric):** ವೇದ ಕಾಲದ ನಿಸರ್ಗ ಸಹಜವಾದ ಅಭಿವ್ಯಕ್ತಿಗಳು, ಆ ಕಾಲದವರಿಗೆ ಗೂಢವಾಗಿರಲಿಲ್ಲ. ಪ್ರಕೃತಿ ಸಹಜವಾಗಿ ನಡೆಯುವ ಘಟನೆಗಳಿಗೆ ಅಷ್ಟೇ ನಿಸರ್ಗ ಸಹಜವಾಗಿಯೇ ಪ್ರತಿಕ್ರಿಯಿಸುತ್ತಿದ ಜೀವ–ಪ್ರಪಂಚಕ್ಕೆ, ಅಲ್ಲಿ ಲಭ್ಯವಾಗುತ್ತಿದ್ದ ಫಲಿತಾಂಶಗಳು ಗೂಢವೇ ಆಗಿದ್ದರೂ, ಅವುಗಳನ್ನು ತಕ್ಷಣವೇ ಪಡೆದುಕೊಳ್ಳುವ ಅವಕಾಶ ಮಾತ್ರ ಖಚಿತವಾಗಿತ್ತು. ಆದರೆ, ಮಾನವನ ಜೀವನದ ಭೌತಿಕ ಪ್ರಪಂಚದ ವಿಕಾಸವು ಅವನನ್ನು ಅವನ ಅಂತರಂಗದಿಂದಲೇ ದೂರ ಮಾಡುತ್ತ ಬಂದಂತೆ ಕಾಣುತ್ತದೆ. ಮನುಕುಲದ ಅಭಿವ್ಯಕ್ತಿಗಳೇ ಆಗಿರುವ, ದುಃಖ–ದುಮ್ಮಾನಗಳಲ್ಲಿ ಪರಿಹಾರಕ್ಕಾಗಿ ಪ್ರಕಟಣೆಗೊಂಡು ಸೂಕ್ತ ಫಲಿತಾಂಶವನ್ನು ಕಂಡುಕೊಂಡ "ಆ ಶಾಬ್ದಿಕ ಸ್ವರೂಪದ ಅಭಿವ್ಯಕ್ತಿಗಳು" ಮುಂದಿನ ಪೀಳಿಗೆಗೆ ಗೂಢಾತಿಗೂಢವಾದದ್ದು ಒಂದು ರೋಚಕ ಸಂಗತಿ. ಇದು ನಾಗರೀಕತೆಯ ಪ್ರಗತಿ ಪಥವೋ ಅಥವಾ ಚಿಂತನಾವ್ಯವಸ್ಥೆಯ ಅವರೋಹಣವೋ ಎನ್ನುವದನ್ನು ಜಿಜ್ಞಾಸೆಯಲ್ಲಿಯೇ ನಿರ್ಣಿಸಬೇಕಾಗಿದೆ. ಈ ಗೂಢತೆಯಲ್ಲಿ ಇರುವ 'ಜ್ಞಾನದ ಮೂಲ ಸ್ವರೂಪ'ವನ್ನು, ಈ ರೀತಿ ಗೂಢವಾಗಿಡುವಲ್ಲಿ, ಬೆಡಗಿನ ಸ್ವರೂಪದ ಶಾಬ್ದಿಕ ಸಂರಚನೆಯಲ್ಲಿ ನಿರೂಪಿಸುವಲ್ಲಿ ಇದ್ದ ವೈಶ್ವಿಕ ತತ್ತ್ವಗಳ ಜೊತೆಗಿನ ಅನುಸಂಧಾನದಲ್ಲಿ ರೂಪಿತಗೊಂಡ ಕಂದಕವೂ ಸಹಿತ ಇದರ ನಿಗೂಢತೆಯನ್ನು ಹೆಚ್ಚಿಸುತ್ತ ಮುಂದುವರೆಯಿತು. ಈಗಲೂ (ಈ ಆಧುನಿಕ ವೈಜ್ಞಾನಿಕ) ಯುಗದಲ್ಲೂ ಸಹಿತ, ಈ ರಹಸ್ಯಗಳ ಬಗೆಗೆ ಇರುವ ಕುತೂಹಲ, ಅದನ್ನು ತಿಳಿದುಕೊಳ್ಳಲೇಬೇಕು ಎನ್ನುವ ತಹತಹಿಕೆ ಮಾತ್ರ ಹೆಚ್ಚುತ್ತಲೇ ಇದೆ. ಪ್ರಾಕೃತಿಕ ಶಕ್ತಿಗಳ ಹಾಗೂ ಅಭಿವ್ಯಕ್ತಿಗಳ ಅನುಸಂಧಾನಕ್ಕೆ ಅದರದೇ ಆದ ಪರಿಭಾಷಾ ವ್ಯವಸ್ಥೆ ಇದೆ ಎನ್ನುವದನ್ನು ಆಧುನಿಕ ಚಿಂತನಾ ಕ್ರಮಾಂಕಗಳೂ ಅಂಗೀಕರಿಸಿವೆ. ದೈನಂದಿನ ಬದುಕಿಗಾಗಿ – ಸರಳವಾಗಿ ರೂಪಿಸಿಕೊಂಡು ತೃಪ್ತಿ ಹೊಂದಿರುವ ಭಾಷಾ–ಸಂರಚನೆ ಇಲ್ಲಿ ವಿಫಲವಾಗುತ್ತಿದೆ ಎನ್ನುವದು ಮನದಟ್ಟಾಗಿದೆ. ಹೀಗಾಗಿ ಇದು ಈಗಲೂ ನಿಗೂಢತೆಯ ಗವಸಿನಲ್ಲಿಯೇ ಉಳಿದಿದೆ.

**ಸರ್ವಸುಲಭದ ಸಮತೆ**ಯಲ್ಲಿಯೂ(Exoteric); ಇಲ್ಲಿನ ಅಭಿವ್ಯಕ್ತಿಗಳು – ಅದರಲ್ಲೂ ಶಾಬ್ದಿಕ ಸ್ವರೂಪದಲ್ಲಿ ದಾಖಲಾಗಿರುವ ಅನುಭವಗಳು– ಸರ್ವಸುಲಭತೆಯ ಗುಣಗಳನ್ನೇ ಹೊಂದಿವೆ. ಸಮತೆಯ ಭಾವದಿಂದಲೂ ರೂಪಿತಗೊಂಡಿವೆ. ಪ್ರಕೃತಿ ತತ್ತ್ವಗಳಂತೆ, ಪಂಚಭೂತಗಳಂತೆ ಸಮತೆಯ ಸಂರಚನೆಯಲ್ಲಿಯೇ ಇವೆ. ಇದು ಎಲ್ಲರಿಗೂ ಅನುಭವ ಜನ್ಯ. ಆದರೆ ಅನುಷ್ಠಾನ ಮಾಡಿಕೊಳ್ಳುವಲ್ಲಿ ಮಾತ್ರ ವಿಚಲನೆ ಅಧಿಕ ಪ್ರಮಾಣದಲ್ಲಿದೆ.

**7. ಋತದ ಪಥದಲ್ಲಿ ಆತ್ಮದ ಪಯಣ:** ನಮ್ಮಲ್ಲಿ ಮನಸ್ಸು ಮತ್ತು ಆತ್ಮ ಬೇರೆ ಎನ್ನುವ ಕಲ್ಪನೆ ಇರಲಿಲ್ಲ. ಮನಸ್ಸು ಬೇರೆ ಆತ್ಮ ಬೇರೆ ಎನ್ನುವದು ಪಾಶ್ಚಾತ್ಯರ ಮನೋ ಪ್ರಾಧಾನ್ಯತೆ ಹಾಗೂ ಭಾರತೀಯ ಆತ್ಮ ಪ್ರಾಧಾನ್ಯತೆಗಳ ಸಂಗಮದ ಸಂಸ್ಕೃತಿಯ ವಿಚಾರ.

ಹೀಗಾಗಿ, ಆಧುನಿಕ ವಿಚಾರ ಧಾರೆಗಳು ಆಧುನಿಕ ಭಾಷಾ ವ್ಯವಸ್ಥೆಯಲ್ಲಿ ವಿಚಲನೆಗೊಂಡು ಪ್ರತಿಷ್ಠಾಪಿತಗೊಂಡಿರುವ ವಿಷಯಗಳ ಹಿನ್ನೆಲೆಯಲ್ಲಿಯೇ , ಈ "ವಿಷಯವನ್ನೂ" ಹೇಳಬೇಕು ಎಂದಾದಲ್ಲಿ, ವೇದದ ಕಾಲಕ್ಕೆ ಮನಸ್ಸು ಎಂದರೆ ಇಂದ್ರ. ನಮ್ಮ ವೇದದ ಇಂದ್ರನ ಸ್ಥಾನದಲ್ಲಿ ಆಧುನಿಕ "ಮನಸ್ಸು" ಆರೋಪಿಸಿಕೊಂಡು ನೋಡಿದರೆ, ಇಂದು ಮನಶ್ಶಾಸ್ತ್ರದಲ್ಲಿ ಕಾಣುವ ಎಲ್ಲ ವಿಶ್ಲೇಷಣೆಗಳನ್ನೂ ಕಾಣುತ್ತೇವೆ. ಕಳೆದ ಶತಮಾನಗಳಿಂದ ನಮ್ಮ ಚಿಂತನಾ ವಿಧಾನಗಳು ಪಾಶ್ಚಾತ್ಯ ಮಾನಕಗಳಲ್ಲಿಯೇ ರೂಪಾಂತರಗೊಂಡು ಸಂವಹವಾಗುತ್ತಿರುವದರಿಂದ ಉದ್ಭವಿಸುವ ಈ ಸಂಗತಿ ವಿಕಸನದಲ್ಲಿ ನವೀನ ಆಯಾಮವೊಂದು ರೂಪುಗೊಳ್ಳುತ್ತಿರುವ ಸಂಕೇತವಾಗಿದೆ.

ಹಾಗಾದರೆ ಈ ಸ್ವರದ ಮೂಲವನ್ನು ನೋಡಿದರೆ, ವೇದದ ಮೂಲವೂ ನಾದ. ನಾದದ ಮೂಲ ಸ್ವರ. ಈ ಸ್ವರಗಳ ವ್ಯತ್ಪತ್ತಿಯ ಕುರಿತು ಋಗ್ವೇದದ 1–67–2ನೇ ಮಂತ್ರ – "ತ್ರೀಃ ಸಪ್ತಯತ್ ಗುಹ್ಯಾನಿತ್ವೇ ಇತ್ವದಾದನ್ನಿಹಿತಾ ಯಜ್ಞಿಯಾಸುಃ/ತೇಭೀ ರಕ್ಷಂತೇ ಸಜೋಷಾ"ದಲ್ಲಿ ಈ ನಾದಕ್ಕೆ ಮೂಲವಾಗಿರುವ ಸ್ವರಗಳ ಬಗೆಗೆ ವಿವರಗಳನ್ನು ಒದಗಿಸುತ್ತದೆ. ನಮ್ಮ ದೇಹದ ವ್ಯವಸ್ಥೆಯಲ್ಲಿ ದೇಹ–ಪ್ರಾಣ–ಮನಸ್ಸು ಎನ್ನುವ ಮೂರು ಸ್ತರಗಳಲ್ಲಿ ಬರುವಾಗ, ಈ ಮೂರೂ ಹಂತದಲ್ಲಿ ತ್ರಿಗುಣಿತವಾಗಿ ಒಟ್ಟು 21 ರೂಪಗಳಲ್ಲಿ ಪ್ರಕಟಗೊಳ್ಳುತ್ತದೆ. ಇದೇ 21 ಅಂಶಗಳನ್ನು ಆಧುನಿಕ ವಿಜ್ಞಾನವೂ ಸಹಿತ "ಅಗ್ನಿಯ ಅಂಶಗಳು" ಎಂದೇ

ಪುರಾವಿಸಿವೆ. ಹೀಗಾಗಿ ಮೂಲ ಏಳು ಸ್ವರಗಳನ್ನು ಸೇರಿಸಿ ಒಟ್ಟು 21 ಬೀಜ ಮಂತ್ರಗಳನ್ನು ಬಳಸುವದನ್ನು ಯಜ್ಞಗಳಲ್ಲಿ ಕಾಣುತ್ತೇವೆ.

ಅನ್ನ, ಪ್ರಾಣ, ಮನಸ್ಸು, ವಿಜ್ಞಾನ, ಆನಂದ, ಚಿತ್ ಮತ್ತು ಸತ್ ರೂಪದಲ್ಲಿ ಈ ಏಳು ಚಿದ್ಭೂಮಿಕೆಗಳು ಇರುತ್ತವೆ. ಇವು ಮಾನವನ ದೇಹದ ವ್ಯವಸ್ಥೆಯಲ್ಲಿ ಸ್ವರದ ಮೂಲಕ ಪ್ರಕಟಗೊಳ್ಳುತ್ತವೆ. ಆ ಪ್ರಕಟಣೆ ನಾದ ಸ್ವರೂಪದಲ್ಲಿ ಇದ್ದರೆ ಅದು ದೃಷ್ಟಾರ ಹಂತ. ಅದರ ಮೂಲಕವೇ ತನ್ನಲ್ಲಿಯೇ ಇರುವ ಚೈತನ್ಯ ರಶ್ಮಿಯನ್ನು ಕಾಣುವಂತಾಗುತ್ತದೆ. ಧ್ವನಿಯ ರೂಪದಲ್ಲಿ (ನಾದದ ರೂಪದಲ್ಲಿ) ಪ್ರಕಟಗೊಳ್ಳುವ ಇದು ವಾಕ್ ಆಗಿರುತ್ತದೆ. ವಾಕ್ ರೂಪದಲ್ಲಿದ್ದ ಧ್ವನಿ ನಾದದ ಮೂಲಕವೇ ಶ್ರುತಿಬದ್ಧಗೊಂಡು ಬಂದಾಗ ಅದು ವೇದವಾಣಿ. ಇಲ್ಲದಿದ್ದರೆ ಬರಿ ಗಳಪು–ಶಬ್ದವಾಗಿರುತ್ತದೆ. ಅ, ಇ, ಉ, ಋ, ಲೃ, ಏ ಮತ್ತು ಓ ಎನ್ನುವ ಏಳು ಸ್ವರಗಳು ವೇದೋಚ್ಚಾರಣೆಯ ಸಂದರ್ಭದಲ್ಲಿ ಹ್ರಸ್ವ, ದೀರ್ಘ ಮತ್ತು ಪ್ಲುತದ ರೂಪದಲ್ಲಿ ಪ್ರಕಟಗೊಳ್ಳುತ್ತ ಧ್ವನಿಪೂರ್ಣವಾಗುತ್ತಿರುತ್ತವೆ. ಇಲ್ಲಿ ಹೊರಡುವ ಸ್ವರ ನಾದವೆಂದೇ ಪರಿಗಣಿಸಲ್ಪಡುತ್ತದೆ.

ಈ ಏಳು ಸ್ವರಗಳು ಅಷ್ಟೇ ಸಂಖ್ಯೆಯ ಅಗ್ನಿಯ ಅಂಶಗಳಲ್ಲಿ ಗುಣಿತಗೊಂಡು (7 x 7=49) ಹಂತದಲ್ಲಿ ರೂಪುಗೊಳ್ಳುತ್ತವೆ. ಈ ಹಂತಗಳ ಹಿನ್ನೆಲೆಯಲ್ಲಿ ಯಜ್ಞ ನಡೆಯುತ್ತದೆ. ಈ 49 ಹಂತಗಳೂ ಜೀವನಾದದ್ಯಂತ ಸಹಕರಿಸುತ್ತ , ಮರಣಾನಂತರವೂ ಸಹಿತ ಮೂಲನೆಲೆಯನ್ನು ಸೇರಲಿಕ್ಕೆ ಅನುವು ಮಾಡಿಕೊಡುತ್ತವೆ. ಆದರೆ ಅಂತಹ ಸಾಕ್ಷಾತ್ಕಾರವನ್ನು ಕಾಣಬೇಕೆಂದರೆ ಮೊದಲು ನಾದದ ಮೂಲವನ್ನು ಅರಿಯಬೇಕಾಗುತ್ತದೆ.

ಇದು ಕೇವಲ ನಮ್ಮ ದೇಶದ ಪರಂಪರೆಯಲ್ಲ. ಎಲ್ಲ ದೇಶಗಳೂ ಇದೇ ಸೂತ್ರವನ್ನೇ ಅನುಸರಿಸಿ ಸಂಶೋಧನೆ ಕೈಕೊಂಡಿವೆ. ನಾದ ವಿಜ್ಞಾನದ ಒಂದು ವಿಭಾಗವೇ ವಿಜ್ಞಾನದಲ್ಲಿ ಪ್ರಾರಂಭವಾಗಿದೆ.

ನಾದವನ್ನು ದೃಷ್ಟಿಸಿದವನು ದೃಷ್ಟಾರ. ಅದರ ಲಭ್ಯ ಮಾಹಿತಿ ಎಂದರೆ ವೇದದ ಋಕ್ಕುಗಳು. ಇವು ಅವಿನಾಶಿ, ಪರಿವರ್ತನಾರಹಿತ, ಸರ್ವ ದೇವತೆಗಳೂ ವಾಸವಾಗಿರುವ ಪರಾಕಾಶದಲ್ಲಿ ಸ್ಥಿತವಾಗಿರುತ್ತವೆ. ಋಗ್ವೇದವು ವಾಕ್(ನಾದ) ಹೊರಡಿಸುವ ನಾಲ್ಕು ಸ್ತರಗಳನ್ನು ಹೇಳುತ್ತದೆ. ಪರಾ, ಪಶ್ಯಂತಿ, ಮಧ್ಯಮಾ ಮತ್ತು

ವೈಖರೀ. ಇದರಲ್ಲಿ ನಾಲ್ಕನೇಯದು ಅಂದರೆ ಶಬ್ದದ ರೂಪದಲ್ಲಿರುವ ನಾದವು ಮಾನವ ವರ್ಗಕ್ಕೆ ಸೇರಿದ್ದು ಉಳಿದ ಮೂರು ಉನ್ನತ ಲೋಕಕ್ಕೆ ಸಂಬಂಧಿಸಿ ಮಾನವನ ಶರೀರದಲ್ಲಿಯೇ ಇರುತ್ತವೆ. ಅಲ್ಲಿಂದ ಉದ್ಭೂತವಾಗಿ ವೈಖರಿಯ ಹಂತದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಅದಕ್ಕಾಗಿಯೇ ಈಗಲೂ ಮಂತ್ರ ಭಾಗವನ್ನು ಕರ್ಮಕಾಂಡವೆಂದೂ, ಉಪನಿಷತ್ ಭಾಗವನ್ನು ಜ್ಞಾನಕಾಂಡವೆಂದೂ ವರ್ಗೀಕರಿಸುತ್ತಾರೆ. ಈ ವಿಭಾಗಗಳು ಇದ್ದರೂ ಸಹಿತ ವೇದ ಪರಂಪರೆಯು ತನ್ನತನವನ್ನು ಉಳಿಸಿಕೊಂಡಿದೆ. ವೇದ–ಉಪನಿಷತ್ತುಗಳನ್ನು ಒಳಗೊಂಡಿದ್ದು ಶ್ರುತಿ. ಈ ಶ್ರುತಿಯು ನಾದದ ಮೂಲಕ ಪ್ರವಹನಗೊಳ್ಳುತ್ತದೆ. ಇದು ವಿಶ್ವಸತ್ಯದೊಡನೆ ಮಿಳಿತಗೊಂಡು, ಮಾನವನ ಶರೀರದಲ್ಲಿ ಅಂತರ್ಮನದಲ್ಲಿ ಸಂವಹನವಾಗುತ್ತಿದ್ದರೆ ಅದೇ "ಸರಸ್ವತೀ".

ಬದುಕಿದ್ದಾಗ ಈ ನಾದದ ಅನುಭವವನ್ನು ಅನುಭಾವಗೊಳಿಸಿ–ಕೊಳ್ಳುವದಾದರೆ, ನಾಭಿಮೂಲದಿಂದ ಜನಿಸುವ ಧ್ವನಿ(ನಾದ) ಪರಾ ಹಂತದಲ್ಲಿ ರೂಪುಗೊಂಡಿರುತ್ತದೆ. ಆದರೆ ನಾದದ ಅಧ್ಯಯನದಲ್ಲಿ ಈ ಪರಾ ಹಂತಕ್ಕಿಂತಲೂ ಮತ್ತೆ ಮೂರು ಸ್ತರದ ಹಂತಗಳನ್ನು ಸುರೇಶ್ವರಾಚಾರ್ಯ (ಶ್ರೀ ಶಂಕರಾಚಾರ್ಯರ ಶಿಷ್ಯ) ಪ್ರತಿಪಾದಿಸದ್ದಾರೆ. ಪರಾ ಹಂತಕ್ಕೆ ಬರುವ ಮುನ್ನ ಈ ನಾದವು ಶೂನ್ಯ, ಸೂಕ್ಷ್ಮ, ಸಂವಿತ್ ಹಂತಗಳಲ್ಲಿ ರೂಪುಗೊಳ್ಳುತ್ತದೆ. ಈ ಹಂತದಿಂದ ಧ್ವನಿಪೂರ್ಣವಾಗಿ ಉಚ್ಚರಿಸಲ್ಪಡುವ ಪ್ರತಿಯೊಂದು ಶಬ್ದವೂ ನಾದವೇ ಆಗಿರುತ್ತದೆ ಮತ್ತು ಮಂತ್ರವಾಗಿರುತ್ತದೆ. ಹಾಗಾದರೆ ಈ ರೀತಿಯ ಸ್ಥಿತಿ ವಿಶ್ವದಲ್ಲಿ ಇದೆ ಎಂದಾಯಿತು. ತೀರ ಇತ್ತೀಚೆಗೆ, ಸೂರ್ಯನ ಕಿರಣಗಳು ಭೂವಲಯವನ್ನು ಪ್ರವೇಶಿಸುವ ಸ್ಥಳದಲ್ಲಿ, ಸದಾ ಸಂಚಲನದಲ್ಲಿರುವ ವಾಯುಗೋಲದ ಕಾರಣದಿಂದಾಗಿ, ಅಲ್ಲಿ ಕಿರಣಗಳಲ್ಲಿನ ವಿದ್ಯುತ್ಕಾಂತಿಯ ವ್ಯವಸ್ಥೆಯು, ವಾಯುವಿನೊಡನೆ ಸಂಪರ್ಕಕ್ಕೆ ಬಂದು ನಾದ ರೂಪವಾಗಿ ಪರಿವರ್ತನಗೊಳ್ಳುತ್ತದೆ. ಇದನ್ನು ಈಗಾಗಲೇ ದಾಖಲಾತಿ ಮಾಡಲಾಗಿದೆ. ಈ ಧ್ವನಿಯ ತರಂಗಗಳು, ಓಂಕಾರ ನಾದದ ತರಂಗಗಳಿಗೆ ಸಮಸ್ಪಂದಿಯಾಗಿವೆ ಎನ್ನುವದನ್ನು ಖಭೌತ ಶಾಸ್ತ್ರದ ಸಂಶೋಧನೆಗಳು ಪುರಾವೆಗೊಳಿಸಿವೆ.

ವೇದೋಚ್ಚಾರಣೆಯಲ್ಲಿ ಯಾವ ಯಾವ ಅಕ್ಷರವನ್ನು ದೇಹದ ಯಾವ ಭಾಗದ ಶಕ್ತಿಯಿಂದ ಉಚ್ಚರಿಸಿದರೆ ಅದು ನಾದವಾಗುತ್ತದೆ ಅಥವಾ

ಮಂತ್ರವಾಗುತ್ತದೆ ಎನ್ನುವದರ ಬಗೆಗೆ ಧ್ವನಿಶಾಸ್ತ್ರದ ಅಧಿಕೃತ ಗ್ರಂಥಗಳಿವೆ. ಅವುಗಳ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೋಡಬಹುದು;

ಆಧಾರ ಚಕ್ರದ ಸ್ಥಾನದಿಂದ – ವ ಶ ಷ ಸ

ಸ್ವಾದಿಷ್ಠಾನ – ಬ ಭ ಮ ಯ ರ ಲ ವ

ಮಣಿಪೂರ ಚಕ್ರ ಸ್ಥಾನದಿಂದ – ಡ ಢ ಣ ತ ಥ ದ ಧ ನ ಪ ಫ

ಅನಾಹತ ಚಕ್ರ ಸ್ಥಾನದಿಂದ – ಕ ಖ ಗ ಘ ಙ ಚ ಛ ಜ ಝ ಞ ಟ ಠ

ವಿಶುದ್ಧಿ ಚಕ್ರ ಸ್ಥಾನದಿಂದ – ಅ ದಿಂದ ಅಃ ದ ವರೆಗೆ ಒಟ್ಟೂ 16 ಸ್ವರಗಳು

ಆಜ್ಞಾ ಚಕ್ರ ಸ್ಥಾನದಿಂದ – ಹಂ ಕ್ಷಂ.

ಈ ಪದ್ಧತಿಯಲ್ಲಿ ವೇದೋಚ್ಚಾರಣೆಯು ಇರುವಲ್ಲಿ ನಾದವು ತಾನೇ ತಾನಾಗಿ ಬ್ರಹ್ಮರಂಧ್ರದಲ್ಲಿ ಸಹಸ್ರದಳ ಪದ್ಮದಲ್ಲಿ ಅಮೃತದ ರೂಪದಲ್ಲಿ ಅವತರಿಸುತ್ತದೆ. ಇದು ಸ್ವಯಂಜ್ಯೋತಿಯಾಗಿದ್ದು ಇದಕ್ಕೆ ಉನ್ಮನೀ ಜ್ಯೋತಿ ಎನ್ನುತ್ತಾರೆ.

ಒಟ್ಟಿನಲ್ಲಿ ನಾಭಿ ಸ್ಥಾನದಲ್ಲಿರುವ ಮಣಿಪೂರ ಚಕ್ರದ ದಶದಳ ಪದ್ಮನಾಳದಲ್ಲಿ ಉದಯವಾಗುವ ಈ ಪ್ರಾಣಾನಿಲವು, ಅಲ್ಲಿ ವಿಶ್ವಸೃಷ್ಟಿಯ ತೂರ್ಯಾವಸ್ಥೆ ತೋರಲು ಅಲ್ಲಿಯೇ ಅ ಕಾರ ಮ ಕಾರ ಮತ್ತು ಉಕಾರಗಳು ಜನಿಸಿ ಸಂಗಮವಾಗಿ ಪ್ರಣವಾಕ್ಷರವಾಗಿ ನಾದರೂಪದಲ್ಲಿ ಹೊಮ್ಮುತ್ತದೆ. ಅದೇ ಪರಬ್ರಹ್ಮ ಸ್ವರೂಪವೂ ಆಗಿರುತ್ತದೆ.

ಪ್ರಣವಕ್ಕೆ "ತಾರ" ಎನ್ನುವ ಪ್ರಸಿದ್ಧ ಹೆಸರಿದೆ. ಇದನ್ನೇ ಸ್ತ್ರೀವಾಚಕವಾಗಿ "ತಾರಾ" ಎಂದು ಕರೆಯಲಾಗುತ್ತದೆ. ಆಕಾರವಿಲ್ಲದಿದ್ದರೂ ಆಕಾಶದಲ್ಲಿ ಚಲಿಸುತ್ತಿರುತ್ತಾಳೆ. ಓಂಕಾರವು ಅದರ ಅನುಕರಣ. ಸ್ವರೂಪವಲ್ಲ. ಅದಕ್ಕೆ ಕಾರಣವೆಂದರೆ ಓಂಕಾರವು ಖಂಡರೂಪಿ. ಪ್ರಣವವಾದರೋ ಅಖಂಡ–ವಾಗಿರುತ್ತದೆ. ಈ ತಾರಾ ಪ್ರಣವನ್ನೇ ನೀಲಾ ಎಂದು ಕರೆಯಲಾಗುತ್ತದೆ.

ಋಷಿಗಳು ತಪಸ್ಸಿನಲ್ಲಿರುವಾಗ (ಯಜ್ಞ ಮಾಡುತ್ತಿರುವಾಗ) ಪ್ರಣವವೆಂಬ ಆರ್ಣವದಿಂದ ಹೊರಟ ತರಂಗಗಳೇ ಮಂತ್ರಗಳು. ಇಲ್ಲಿ ಋಷಿಗಳ "ವಾಕ್" ರೂಪದ ಪ್ರವಾಹವಾಗಿ ಈ ಪ್ರಣವತ್ವವು ಪ್ರವಹಿಸುತ್ತಿರುತ್ತದೆ. ಹೀಗಾಗಿ ಮಂತ್ರಗಳಿಗೆ ಪ್ರಣವವಾಹಿ ಎನ್ನುತ್ತಾರೆ.

ಶರೀರದೊಳಗೆ ನಾದರೂಪದಲ್ಲಿ ಸೃಷ್ಟಿಗೊಳ್ಳುವ ಈ ಪ್ರಣವವನ್ನು (ಧ್ವನಿಯನ್ನು, ನಾದವನ್ನು) ಅನುಜ್ಞಾ ಮುದ್ರೆಯಿಂದ ಅನುಸಂಧಾನ ಮಾಡಿಕೊಳ್ಳಬೇಕು. ಈ ವಿದ್ಯೆಯನ್ನೇ ಉಪನಿಷತ್ತಿನಲ್ಲಿ " ಅಕ್ಷರ ವಿದ್ಯೆ " ಅಥವಾ "ಉದ್ಗೀಥ" ಎಂದು ಗುರುತಿಸಲಾಗಿದೆ.

ಇನ್ನು ನಮ್ಮ ಭೌತಿಕ ಶರೀರದಲ್ಲಿ ಇದನ್ನು ಕಾಣುವ ಪರಿ ಹೇಗೆ ಎನ್ನವುದನ್ನು ನೋಡಿದರೆ, ನಮಗೆ ಮೂಲಪ್ರಾಣವಾಗಿರುವ ಪಂಚಪ್ರಾಣಗಳಲ್ಲಿ, ನಮ್ಮ ಧ್ವನಿಗೆ ರೂಪು ಕೊಡಲು ಉದಾನವು ಸಹಾಯಕವಾಗಿರುತ್ತದೆ. ಇದು ಇರುವದು ಕಂಠ ಪ್ರದೇಶದಲ್ಲಿ. ವೈದ್ಯಶಾಸ್ತ್ರವೂ ಇದನ್ನು ಪುರಾವಿಸುತ್ತದೆ. ಈ ವಿಷಯವಾಗಿ ಆಯುರ್ವೇದದಲ್ಲಿ "ಪ್ರಾಣೇನಾನ್ನಪ್ರವೇಶಃಸ್ಯಾದುದಾನೇನ ಚ ಭಾಷಣಾಮ್" ಎಂದು ವಿವಿರವಾಗಿ ಚರ್ಚಿಸಿದೆ. ಅಮರಕೋಶವೂ ಸಹಿತ "ಹೃದಿಪ್ರಾಣೋ ಗುದೇಪಾನಃ ಸಮಾಣೋ ನಾಭಿಸಂಸ್ತಿತಃ । ಉದಾನಃ ಕಂಠದೇಶಸ್ಥೋ ವ್ಯಾನಃ ಸರ್ವಶರೀರಗಃ ॥" ಎಂದು ನಿಖರವಾಗಿ ಈ ನಾದವು ಧ್ವನಿಯಾಗಿ, ಅಕ್ಷರದ ಆಕಾರ ಪಡೆದು ಪ್ರಕಟಗೊಳ್ಳುವದನ್ನು ಮತ್ತು ಅದು ನಾದಮಯವಾಗಿರುವ ಲಕ್ಷಣಗಳನ್ನು ಹೇಳುತ್ತಿದೆ.

ಆಶ್ಚರ್ಯದ ಮಾತೆಂದರೆ, ಮಹಾಭಾರತದ ಧರ್ಮರಾಜನು ಈ ಉದಾನ ವಾಯುವಿನ ಅಂಶ. ಅಂದರೆ ಈ ಧ್ವನಿಯು ನಾದವಾಗಿರುವಾಗ ಅದು ಯಾವ ಪರಿಣಾಮವನ್ನು ಬೀರುತ್ತದೆ ಎನ್ನುವದನ್ನು ರೂಪಕಗೊಳಿಸಿದ ಅಂಶ. ಹೀಗಾಗಿ ಅವನಿಗೆ ಅಂಬರೀಷ ಎಂದೂ ಕರೆಯಲಾಗುತ್ತಿದೆ. ಅಂಬರೀಷ ಎಂದರೆ ಶಬ್ದಕ್ರಿಯಾಚಾಲಕತ್ವವನ್ನು ಹೊಂದಿದವನು ಎಂದರ್ಥ. ವೇದಾಂತದಲ್ಲಿಯೂ ಸಹಿತ ಈ ಉದಾನವನ್ನು "ಉತ್ಕ್ರಾಂತಿ ಕಾರಣ"ವೆಂದೇ ನಿರ್ಣಿತವಿದೆ. ಈ ಉತ್ಕ್ರಾಂತಿಕಾರಣತ್ವದಿಂದಾಗಿ ಧರ್ಮರಾಜನು ಮೃತ್ಯದೇವನ – ಅಂಶಾವತಾರವೆಂದು ಪರಿಗಣಿತನಾಗಿದ್ದಾನೆ. ಇದನ್ನು ಪುರಾವಿಸುವ ವೇದಾಂಥದ ಸೂಕ್ತವೊಂದು, "ತೇಜೋ ಈವಾವ ಉದಾನಸ್ತಸ್ಮಾದುಪಶಾಂತತೇಜಾಃ, ಪುನರ್ಭವಮಿಂದ್ರಿಯೈರ್ಮನಸಿ ಸಂಪದ್ಯಮಾನ್ಯೈಃ ॥" ವಿವರಗಳನ್ನು ಒದಗಿಸುತ್ತಿದೆ.

ಈ ಎಲ್ಲ ವಿವರಗಳನ್ನೇ ನಾನು ಅರಸುತ್ತಿರುವದು. ಒಂದೇ ಬಾರಿಗೆ ಎಲ್ಲವನ್ನೂ ಕೊಡಲೂ ಸಾಧ್ಯವಾಗುವದಿಲ್ಲ; ಸ್ವೀಕರಿಸಲೂ ಸಾಧ್ಯವಾಗುವದಿಲ್ಲ ಅಲ್ಲವೇ?

## ಶ್ರೀ ಅರವಿಂದರ

## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**5**

## ಅಧ್ಯಾಯ – 4

## ಉಪದೇಶ ಸಾರ

ಗೀತೆಯ ಬೋಧನೆಯನ್ನು ನೀಡುವ ದೈವೀ ಗುರು ಹಾಗೂ ಮಾನವ ಶಿಷ್ಯನ ಪರಿಚಯವನ್ನು ನಾವೀಗ ಮಾಡಿಕೊಂಡಾಗಿದೆ. ಗೀತೆಯ ಉಪದೇಶದ ಸ್ಪಷ್ಟ ಕಲ್ಪನೆಯನ್ನು ನಾವೀಗ ಮಾಡಿಕೊಳ್ಳೋಣ.

ಗೀತೆಯ ವಿಚಾರ ಸಂಪತ್ತು ಬಹಳ ದೊಡ್ಡದು, ಅನೇಕ ಆಯಾಮಗಳಿವೆ. ಅಂಗಗಳಿವೆ. ಆದ್ದರಿಂದ ಮುಖ್ಯವಾಗಿ ನಾವು ಮೊದಲು ಅದರ ಸಾರ ಭೂತ ಸತ್ವ ಹಾಗೂ ಹೃದಯವನ್ನರಿಯಬೇಕು, ಆಧ್ಯಾತ್ಮಿಕ ಜೀವನದ ವಿಭಿನ್ನ ಅಂಗಗಳ ಸಮನ್ವಯ ಗೀತೆಯಲ್ಲಿದೆ. ಅಲ್ಲಿನ ಪ್ರಶ್ನೋತ್ತರಗಳ ಓಘವು ಅಪ್ರತಿಹತವಾಗಿರುವುದರ ಜೊತೆಗೆ ಅನೇಕ ತಿರುವುಗಳನ್ನು ಪಡೆಯುತ್ತ ಹೋಗುತ್ತದೆ. ಹೀಗಿರುವುದರಿಂದ, ಇತರ ಧರ್ಮ ಗ್ರಂಥಗಳಿಗಿಂತ ಈ ಗ್ರಂಥದ ಬೋಧನೆಯನ್ನು, ಪಕ್ಷಪಾತ ಬುದ್ಧಿಯ ಜನರು ತಪ್ಪಾಗಿ ಅರ್ಥೈಸಿಕೊಳ್ಳುವ ಹಾಗೂ ವಿಕೃತಗೊಳಿಸುವ ಸಾಧ್ಯತೆ ಹೆಚ್ಚಾಗಿದೆ. ವಿಶಿಷ್ಟ ಪಂಥದ ಅನುಯಾಯಿಗಳು ಗೀತೆಯ ಬೋಧನೆಗೆ ತಮ್ಮದೇ ಆದ ಅರ್ಥ ನೀಡಿ ವ್ಯಾಖ್ಯಾನಿಸುವ ಸಾಧ್ಯತೆ ಇದೆ. ವ್ಯಕ್ತಿಯ ಇದಿರು ಯಾವುದೋ ಒಂದು ಘಟನೆ ಇರುತ್ತದೆ, ಶಬ್ದ ಇರುತ್ತದೆ, ಕಲ್ಪನೆ ಇರುತ್ತದೆ. ಅವನ ಮನದಲ್ಲಿ ಪೂರ್ವಗ್ರಹ ಪೀಡಿತ ಕಲ್ಪನೆ ಕೂಡ ಇರುತ್ತದೆ. ಗೀತೆಯ ಬೋಧನೆಯನ್ನು ಒಂದೆರೆಡು ತತ್ವಗಳು ಹೆಚ್ಚು ಇಷ್ಟವಾಗುತ್ತವೆ. ಇಂಥ ವ್ಯಕ್ತಿಯು, ತನ್ನ ಮೊದಲಿನ ಕಲ್ಪನೆಗೆ ಅಂಟಿಕೊಂಡು, ತನಗೆ ತಿಳಿದೋ ತಿಳಿಯದೆಯೋ ಗೀತೆಯ ಅರ್ಥವನ್ನು ವಿಕೃತಗೊಳಿಸಿ, ತನ್ನ ಕಲ್ಪನೆಯಲ್ಲಿನ ತತ್ವದ ಜೊತೆ ಹೊಂದಾಣಿಕೆ ಮಾಡಿಬಿಡುವ ಸಾಧ್ಯತೆ ಇದೆ. ಇದು ಎಷ್ಟು ಸಾಮಾನ್ಯವೆಂದರೆ, ಅತ್ಯಂತ ಪ್ರಾಮಾಣಿಕ ತತ್ವ–ಚಿಂತಕನೂ ಸಹ ಈ ತಪ್ಪು ಮಾಡಬಹುದು. ಮಾನವನ ಬುದ್ಧಿಯು, ತನ್ನ ವೈಯಕ್ತಿಕ ದೋಷವನ್ನು ಗುರುತಿಸುವಲ್ಲಿ ಸಾಮಾನ್ಯವಾಗಿ ವಿಫಲವಾಗುತ್ತದೆ. ಹೀಗಾಗಿ ಸ್ವಾಭಾವಿಕವಾಗಿ ಇಂಥ ತಪ್ಪು

ಸಂಭವಿಸುವುದು, ಮಾನವನ ಬುದ್ಧಿಯು ಏಕಾಂಗಿ ನಿರ್ಣಯ ತೆಗೆದುಕೊಳ್ಳುವುದೇ ಹೆಚ್ಚು, ತನಗೆ ಸರಿ ಎನಿಸಿದ, ಇಷ್ಟವಾದ ತತ್ವಕ್ಕೆ ಎಲ್ಲವನ್ನೂ ಹೊಂದಿಸುವ ಕಲೆಯಲ್ಲಿ ಬುದ್ಧಿಯು ಪಳಗಿದೆ. ಆದ್ದರಿಂದ ಯಾರಿಗೇ ಆಗಲಿ, ತಮ್ಮ ಪಂಥಕ್ಕೆ ಗೀತೆಯಲ್ಲಿ ಸರ್ವಾಧಿಕ್ಯವಾದ ಆಧಾರ ಇದೆ ಎಂದೆನಿಸಿಬಿಡುತ್ತದೆ. ಗೀತೆಯ ರಚನೆಯೇ ಹಾಗಿದೆ. ಆದ್ದರಿಂದ ಗೀತೆಯ ಯಾವುದಾದರೊಂದು ನಿರ್ದಿಷ್ಟ ಭಾಗ ಅಥವಾ ರಂಗದ ಮೇಲೆ ವಿಶೇಷ ಒತ್ತು ನೀಡಿ, ಉಳಿದ ಹದಿನೆಂಟು ಅಧ್ಯಾಯಗಳಲ್ಲಿ ಹೇಳಿದ ವಿಷಯಗಳನ್ನು ಪಾರ್ಶ್ವಕ್ಕೆ ಸರಿಸಿಬಿಡುವ ಅಪಾಯವಿದೆ.

ಗೀತೆಯನ್ನು ಹೀಗೆ ತಮ್ಮ ತಮ್ಮ ಮತಗಳಿಗೆ ದುರುಪಯೋಗಗೊಳಿಸಿಕೊಳ್ಳುವ ಸಾಧ್ಯತೆ ಇದೆ. ಗೀತೆಯ ರಚನೆಯು ಹಾಗೆ ಏಕಾಂಗಿ ನಿರ್ಣಯಕ್ಕೆ ಅವಕಾಶ ಕೊಡುವ ರೀತಿಯಲ್ಲಿರುವುದೇ ಇದಕ್ಕೆ ಕಾರಣ. ಆದ್ದರಿಂದ ನಾವು ಬಹಳ ಎಚ್ಚರಿಕೆಯಿಂದ ಗೀತೆಯನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾದ ಅವಶ್ಯಕತೆ ಇದೆ. ಗೀತೆಯು ಕರ್ಮ ಯೋಗವನ್ನು ಹೇಳುವುದಿಲ್ಲ, ಅದು ಕರ್ಮ ಸನ್ಯಾಸವನ್ನು, ಜೀವನ ಸನ್ಯಾಸವನ್ನು ಬೋಧಿಸುವುದೆಂದೂ ಹೇಳುವ ಜನರಿದ್ದಾರೆ. ಗೀತೆಯು ಕರ್ಮವನ್ನು ಬಹು ವಿಶಿಷ್ಟ ರೀತಿಯಿಂದ ಮಾಡಲು ಹೇಳುತ್ತದೆ. ನಿಯತ ಕರ್ಮ ಅಥವಾ ಪ್ರಾಪ್ತ ಕರ್ಮವನ್ನು ನಿಷ್ಪೃಹೆಯಿಂದ, ನಿರ್ಲಿಪ್ತತೆಯಿಂದ, ಅನಾಸಕ್ತಿಯಿಂದ ಮಾಡಲು ಹೇಳುತ್ತದೆ. ಆದ್ದರಿಂದ ಸಂಸಾರ ಮತ್ತು ಕರ್ಮ ಯೋಗದ ಆತ್ಯಂತಿಕ ಗುರಿ ಕರ್ಮ ಸನ್ಯಾಸವೆಂದು ಸಾಧಿಸುವ ಜನ ಇದ್ದಾರೆ, ಗೀತೆಯಲ್ಲಿರುವ ಸನ್ಯಾಸ ವಿಷಯಕ ವಚನಗಳಿಗೆ ಹೆಚ್ಚಿನ ಮಹತ್ವ ನೀಡಿ, ಉಳಿದ ವಿಷಯಕ ವಿವರಣೆಗಳನ್ನು ಕಡೆಗಣಿಸುವ ಅನೇಕ ಭಾಷ್ಯಕಾರರು ನಿಮಗೆ ಸಿಕ್ಕುತ್ತಾರೆ. ಆದರೆ ಗೀತೆಯನ್ನು ಮುಕ್ತ ಹೃದಯದಿಂದ, ಸಾದ್ಯಂತ ವಿಶೇಷ ಗಮನ ಹರಿಸಿ ಅಧ್ಯಯನ ಮಾಡಿದಾಗ ಗೀತೆಯು ಸನ್ಯಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಎಂಬ ವಾದವು ಬಿದ್ದು ಹೋಗುತ್ತದೆ. ಗೀತೆಯಲ್ಲಿ ಆರಂಭದಿಂದ ಕೊನೆಯವರೆಗೂ ಅಲ್ಲಲ್ಲಿ ಅನೇಕ ಕಡೆಗಳಲ್ಲಿ ಕರ್ಮತ್ಯಾಗಕ್ಕಿಂತ, ಸನ್ಯಾಸಕ್ಕಿಂತ ಮುಕ್ತ ಕರ್ಮ ಮಾಡುವುದು ಶ್ರೇಯಸ್ಕರ, ಅವಶ್ಯ ಎಂದು ಹೇಳಿರುವ ಅನೇಕ ವಚನಗಳು ನಿಮಗೆ ಸಿಕ್ಕುತ್ತವೆ. ಫಲಾಪೇಕ್ಷೆಯನ್ನು, ವಾಸನೆಯನ್ನು ದೂರ ಇಟ್ಟು, ಅಂತಃಕರಣದಿಂದ ಅದನ್ನೆಲ್ಲ ಬದಿಗಿಟ್ಟು, ಎಲ್ಲವನ್ನು ಸಮತಾ–ಭಾವದಿಂದ ಕಾಣಲು, ಎಲ್ಲವನ್ನು – ಕರ್ಮ, ಕರ್ಮ ಫಲವನ್ನು – ಭಗವಂತನಿಗೆ ಸಮರ್ಪಿಸಿ ಜೀವನ ನಡೆಸುವುದು ಕರ್ಮ ತ್ಯಾಗಕ್ಕಿಂತ ಶ್ರೇಷ್ಠ ಎಂಬುದನ್ನು ಗೀತೆ ಸ್ಪಷ್ಟವಾಗಿ ಹೇಳುತ್ತದೆ.

## 2

ಕೇವಲ ಸನ್ಯಾಸ ಮಾರ್ಗದವರಷ್ಟೇ ಅಲ್ಲ, ಭಕ್ತಿ ಪಂಥದವರೂ ಸಹ ಗೀತೆಯಲ್ಲಿ ಕೇವಲ ಭಕ್ತಿ ಮಾರ್ಗವನ್ನು ಬೋಧಿಸಲಾಗಿದೆ ಎಂದು ಹೇಳುತ್ತಾರೆ. ಗೀತೆಯಲ್ಲಿ ಅದ್ವೈತ ಪರ ಶ್ಲೋಕಗಳೂ ಇವೆ. ಆದರೆ ಅವುಗಳನ್ನು ಅವರು ಮರೆಮಾಚುತ್ತಾರೆ. ಏಕಮೇವ ದ್ವಿತೀಯ ಬ್ರಹ್ಮನಲ್ಲಿ ಎಲ್ಲವೂ ಶಾಂತಿಪೂರ್ಣವಾಗಿ ವಿಲಯನ ಹೊಂದುವುದನ್ನು ಗೀತೆ ಶ್ರೇಷ್ಠವೆಂದು ಮನ್ನಿಸುವುದನ್ನು ಅವರು ಬೇಕಂತಲೇ ಮುಚ್ಚಿಡುತ್ತಾರೆ. ಅವುಗಳಿಗೆ ಅತಿ ಗೌಣ ಸ್ಥಾನ ನೀಡುತ್ತಾರೆ. ಗೀತೆಯಲ್ಲಿ ಭಕ್ತಿಯ ಮೇಲೆ ಒತ್ತು ಕೊಟ್ಟು ಹೇಳಿರುವುದು ಬಹುಬೇಗ ಮತ್ತು ಸರ್ವೋಪರಿ ಎದ್ದು ಕಾಣುತ್ತದೆ. ಗೀತೆಯು ಈಶ್ವರ (ಪರಮಾತ್ಮ) ಮತ್ತು ಪುರುಷ (ಆತ್ಮ) ಈ ಸ್ವರೂಪದ ಮೇಲೆ ಹೆಚ್ಚು ಒತ್ತು ನೀಡುತ್ತದೆ. ಗೀತೆಯಲ್ಲಿ ಪುರುಷೋತ್ತಮ ವಿಷಯಕ್ಕೆ ವಿಶೇಷ ತತ್ವಜ್ಞಾನ ಇದೆ. ಕ್ಷರ ಹಾಗೂ ಅಕ್ಷರ ಪುರುಷ ಇಬ್ಬರಿಗಿಂತಲೂ ಪುರುಷೋತ್ತಮ ಅಧಿಕವೆಂದು ಅದು ಸ್ಪಷ್ಟವಾಗಿ ಹೇಳುತ್ತದೆ. ಗೀತೆಯು ಭಕ್ತಿ ತತ್ವಕ್ಕೆ ಎಲ್ಲಕ್ಕಿಂತ ಅಧಿಕ ಸ್ಥಾನ ನೀಡುತ್ತಿದೆ ಎಂಬಂತೆ ಭಾಸವಾಗುತ್ತದೆ. ಆದರೂ ಗೀತೆಯು ಸಂಯಮ ಕಳೆದುಕೊಳ್ಳುವುದಿಲ್ಲ, ಈಶ್ವರನೂ, ಸರ್ವ–ಜೀವೇಶ್ವರನೂ ಆದ ಪರಮಾತ್ಮನೇ ಜ್ಞಾನದ ಪರಮೋಚ್ಚ ಸೀಮೆಯಾಗಿದ್ದಾನೆ. ಅವನೇ ಅಧಿ ಯಜ್ಞನು, ನಮ್ಮಿಂದ ಎಲ್ಲ ಕರ್ಮಗಳನ್ನು ಮಾಡಿಸುವ ಯಜ್ಞದ ಭೋಕ್ತೃ ಕೂಡ ಅವನೇ ಆಗಿದ್ದಾನೆ. ಅದೇ ರೀತಿ ಪ್ರೇಮ, ಭಕ್ತಿಗಳ ಸ್ವಾಮಿಯು ಸಹ ಆತನೇ ಆಗಿದ್ದಾನೆ ಎಂದೇ ಅದು ಹೇಳುತ್ತದೆ. ಭಕ್ತಿಭರಿತ ಹೃದಯದ ಫಲವಾದ ಭಕ್ತಿಯ ಭೋಕ್ತಾ ಕೂಡ ಪುರುಷೋತ್ತಮನು ಎಂಬುದೇ ಅದರ ಆಶಯ. ವಸ್ತುತಃ ಅದು ಜ್ಞಾನ, ಭಕ್ತಿ–ಕರ್ಮಗಳಿಗೆ ಪ್ರಸಂಗಾನುಸಾರ ಒತ್ತು ನೀಡುತ್ತ, ಅವೆಲ್ಲವುಗಳ ನಡುವೆ ಸಂಪೂರ್ಣ ಸಮತೋಲನವನ್ನು ಸಾಧಿಸುತ್ತದೆ. ಇವೆಲ್ಲದರ ಪೈಕಿ ಯಾವುದಾದರೊಂದು ಶ್ರೇಷ್ಠ, ಉಳಿದಂತೆ ಎರಡೂ ನಗಣ್ಯ ಎಂಬ ಭಾವವು ಗೀತೆಯಲ್ಲಿ ಎಲ್ಲಿಯೂ ವ್ಯಕ್ತವಾಗಿಲ್ಲ. ಜ್ಞಾನ, ಭಕ್ತಿ ಮತ್ತು ಕರ್ಮಗಳು ಯಾವ ಬಿಂದುವಿನಲ್ಲಿ ಸೇರಿ ಒಂದಾಗುವುವೋ ಆ ಪುರುಷೋತ್ತಮ ಬಿಂದುವೇ ಸರ್ವೋಚ್ಚ ಎಂಬುದು ಗೀತೆಯ ಸ್ಪಷ್ಟ ನಿಲುವಾಗಿದೆ.

ಆದರೆ, ಇತ್ತೀಚೆಗೆ ಆಧುನಿಕರು ಗೀತೆಯನ್ನು ಓದತೊಡಗಿದಾಗಿನಿಂದ ಅದರಲ್ಲಿನ ಜ್ಞಾನ ಮತ್ತು ಭಕ್ತಿಯ ಅಂಶಗಳನ್ನು ಗೌಣವಾಗಿಸಿ, ಗೀತೆಯು

ಕರ್ಮದ ಮೇಲೆ ಒತ್ತು ನೀಡುವುದು, ಅದೇ ಗೀತೆಯ ಪ್ರಮುಖ ಉಪದೇಶ ಎಂದು ಹೇಳುವುದು ಹೆಚ್ಚಾಗಿದೆ. ಗೀತೆಯು ಕರ್ಮ ಯೋಗವನ್ನು ಪ್ರತಿಪಾದಿಸುತ್ತದೆ ಎನ್ನುವುದು ನಿಸ್ಸಂಶಯವಾಗಿಯೂ ಸತ್ಯ, ಅದು ಕರ್ಮ ಯೋಗದ ಕೈಪಿಡಿ ಅನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಆದರೆ, ಅದಷ್ಟೇ ಅಲ್ಲ, (ಸರ್ವಂಕರ್ಮಾಬಲಂ ಜ್ಞಾನೇ ಪರಿಸಮಾಪ್ಯತೇ,) ಎಂದು ಕೂಡ ಅದೇ ಗೀತೆ ಹೇಳುತ್ತದೆ. ನಿಶ್ಚಲ ಶ್ರದ್ಧೆ, ಭಕ್ತಿಯಿಂದ ಮಾಡಿದ ಕರ್ಮವು ಪುರುಷೋತ್ತಮನಿಗೆ ಸಮರ್ಪಿತವಾಗಿ, ಜ್ಞಾನವೇ ಆಗಿ ಪರಿವರ್ತಿತವಾಗುತ್ತದೆ ಎಂದು ಹೇಳುವುದನ್ನು ಮರೆಯಬಾರದು. ಆದರೆ ಆಧುನಿಕ ಮನದ ಪರಿಕಲ್ಪನೆ ಹೀಗಿಲ್ಲ: ಸ್ವಾರ್ಥದ, ಸಾಮಾಜಿಕ, ಮಾನವ ಕಲ್ಯಾಣವೆಂಬ ಆದರ್ಶದಿಂದ ಪ್ರೇರಿತವಾದ ಅಹಂನಿಂದ ಮಾಡುವ ಕರ್ಮಗಳನ್ನು ಗೀತೆ ಹೇಳುವುದಿಲ್ಲ, ಆದರೆ ಆಧುನಿಕ ಭಾಷ್ಯಕಾರರು ಹಾಗೆ ಅರ್ಥ ಮಾಡಿದ್ದೆಂದು ಅವರ ಪ್ರಕಾರ, ಭಾರತೀಯ ಪರಂಪರೆಯ ಸರ್ವ ಸಾಧಾರಣ ಪ್ರವೃತ್ತಿಯಾದ ಸನ್ಯಾಸ, ವೈರಾಗ್ಯ ಇವುಗಳನ್ನು ಗೀತೆ ವಿರೋಧಿಸುತ್ತದೆ. ಅನಾಸಕ್ತ ಸಾಮಾಜಿಕ ಕರ್ತವ್ಯಗಳ ಆದರ್ಶಗಳನ್ನು ಮುಂದಿಡುತ್ತ ಸಮಾಜ ಸೇವೆಯೇ ಈಶ ಸೇವೆ ಎಂದು ಹೇಳಿ, ಅದನ್ನೇ ಕರ್ಮ ಯೋಗವೆಂದು ಪ್ರತಿಪಾದಿಸುವ ಪ್ರವೃತ್ತಿ ಅಧಿಕವಾಗುತ್ತದೆ.

ಇಂಥ ವೃಥಾ ಆರೋಪಗಳನ್ನು ಕುರಿತು, ನಾನು ಹೇಳಬಯಸುವುದೇನೆಂದರೆ, ಗೀತೆ ಹೀಗೆ ಸರ್ವಥಾ ಹೇಳುವುದಿಲ್ಲ. ಗೀತೆಯನ್ನು ಆಳವಾಗಿ ಅಭ್ಯಾಸ ಮಾಡುವುದು ಬೇಡ, ಮೇಲು ಮೇಲಿನ ಲಘು ಅಧ್ಯಯನ ಮಾತ್ರದಿಂದ ಕೂಡ ಈ ಅಭಿಪ್ರಾಯ ತಪ್ಪು ಎಂಬುದು ಸುಲಭವಾಗಿ ತಿಳಿದು ಬರುತ್ತದೆ. ಅವರಿಗೆ ಗೀತೆಯ ಭಾವ ತಿಳಿದಿಲ್ಲವೆಂದೇ ಹೇಳಬೇಕಾಗುತ್ತದೆ. ಪ್ರಾಚೀನ ಗ್ರಂಥದ ಸಿದ್ಧಾಂತಗಳನ್ನು ಆಧುನಿಕ ತೀರ ಸರಳವಾಗಿ ಇಡಲು ಬಯಸುತ್ತದೆ. ಇದರಿಂದ ಮೂಲ ಗ್ರಂಥಗಳಿಗೆ ಅಪಾರ್ಥ ಮಾಡಿದಂತಾಗುತ್ತದೆ, ಅಪಚಾರ ಮಾಡಿದಂತಾಗುತ್ತದೆ. ಪಾಶ್ಚಾತ್ಯರ ಬುದ್ಧಿಗೆ ಅಥವಾ ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತನಾದ ಬುದ್ಧಿಗೆ ಗೀತೆಯಂಥ ಭಾರತೀಯ ತತ್ವ ಶಾಸ್ತ್ರದ ಸಿದ್ಧಾಂತಗಳನ್ನು ಒಪ್ಪುವಂತೆ ಪ್ರತಿಪಾದನೆ ಮಾಡುವ ಪದ್ಧತಿ ಇತ್ತೀಚಿಗೆ ಬೆಳೆದಿದೆ. ಗೀತೆಯು ಮಾನವನಿಗೆ ಸುಲಭ ಕರ್ಮಗಳನ್ನು ಮಾಡಲು ಹೇಳುವುದಿಲ್ಲ. ಅದು ದಿವ್ಯ ಕರ್ಮಗಳ ಪ್ರತಿಪಾದನೆ ಮಾಡುತ್ತದೆ. ಸಾಮಾಜಿಕ ಕರ್ತವ್ಯಗಳನ್ನು

ಮಾಡಲು ಗೀತೆ ಉಪದೇಶಿಸುವುದಿಲ್ಲ, ಬದಲಾಗಿ ಕರ್ತವ್ಯಗಳನ್ನು, ಪದ್ಧತಿಯ ಎಲ್ಲ ಆಚಾರಗಳನ್ನು, ಇನ್ನಿತರ ಆದರ್ಶಗಳನ್ನು ಬದಿಗಿರಿಸಿ, ಸಾಧಕನಾದವನು ತನ್ನ ಪ್ರಕೃತಿಗನುಗುಣವಾಗಿ ಈಶ್ವರನ ಇಚ್ಛೆಯನ್ನು ನಿಸ್ವಾರ್ಥ ರೀತಿಯಲ್ಲಿ ಈಡೇರಿಸಲು ಪ್ರಯತ್ನ ಮಾಡಬೇಕೆಂದು ಅದು ಬೋಧಿಸುತ್ತದೆ. ಗೀತೆಯು ಸಮಾಜ ಸೇವೆಯ ದೀಕ್ಷೆ ನೀಡುವುದಿಲ್ಲ; ಮಾನವ ಮತ್ತು ಪ್ರಕೃತಿಗಳ ಹಿಂದೆ ಇರುವ "ಪರಮೇಶ್ವರ"ನಿಗಾಗಿ, ಯಜ್ಞವೆಂದು ಭಾವಿಸಿ ಈಶ್ವರ ಪ್ರೇರಣೆಯಂತೆ, ಸರ್ವಲೋಕ ಹಿತದೃಷ್ಟಿಯಿಂದ ವೈಯಕ್ತಿಕ ಅಹಂ ಮರೆತು, ನಿರಹಂಕಾರದಿಂದ, ಈಶ್ವರ ಪ್ರೇರಣೆಯಂತೆ, ಈಶ್ವರನಿಗಾಗಿ ಕರ್ಮ ಮಾಡುತ್ತ ಬದುಕಲು ಗೀತೆ ಕಲಿಸುತ್ತದೆ. ಸಂತರು, ಮಹಾಂತರು, ಋಷಿಗಳು ಮಾಡುವ ಕರ್ಮ ಈ ಸ್ವಭಾವದಿಂದಿರುತ್ತದೆ. ಅದೇ ಧರ್ಮ ಕೂಡಾ. ಇದನ್ನೆ ಬೇರೆ ರೀತಿಯಲ್ಲಿ ಹೇಳುವುದಾದರೆ, ಗೀತೆಯು ಆಧ್ಯಾತ್ಮಿಕ ಜೀವನದ ಕೈಪಿಡಿಯೇ ಹೊರೆತು ನೈತಿಕ ಶಾಸ್ತ್ರವಲ್ಲ. ಇತ್ತೀಚಿಗಿನ ಯುರೋಪಿನರ ಮನಸ್ಸು ಶ್ರೇಷ್ಠ ಗ್ರೀಕ್, ರೋಮನ್ ಸಂಸ್ಕೃತಿಯ ಆದರ್ಶಗಳನ್ನು ಮರೆತಿದೆ; ಮಧ್ಯಯುಗದ ಕ್ರೈಸ್ತ ಪಂಥದ ಭಕ್ತಿ ಮಾರ್ಗವನ್ನು ಕೈಬಿಟ್ಟಿದೆ; ಅವುಗಳನ್ನು ರೂಪಾಂತರಿಸಿ ಅಥವಾ ಅವುಗಳ ಸ್ಥಾನದಲ್ಲಿ ವ್ಯವಹಾರಿಕ ಧ್ಯೇಯಗಳಾದ ಸಾಮಾಜಿಕ, ರಾಷ್ಟ್ರೀಯ, ಲೌಕಿಕ ಮಾನವ ಹಿತವಾದವನ್ನು ತಂದಿರಿಸಿದೆ. ಇವೆಲ್ಲ ಕೆಟ್ಟವಲ್ಲ, ಒಳ್ಳೆಯವೇ, ಅವು ಕೂಡಾ ಈಶ್ವರ ಸಂಕಲ್ಪದ ಭಾಗಗಳೇ, ಇಲ್ಲದಿದ್ದಲ್ಲಿ ಮಾನವ ಜನಾಂಗದಲ್ಲಿ ಅವು ಇಷ್ಟು ಜನಪ್ರಿಯವಾಗುತ್ತಿರಲಿಲ್ಲ. ದಿವ್ಯ ಮಾನವ, ಬ್ರಾಹ್ಮೀ ಸ್ಥಿತಿ, ಈಶ್ವರನ ಸ್ವರೂಪದಲ್ಲಿ ನೆಲೆಸಿರುವ ಮಾನವನು ಈ ಗುಣಗಳನ್ನು ಅಳವಡಿಸಿಕೊಳ್ಳಕೂಡದು ಎಂದು ಯಾರೂ ಹೇಳಲಾರರು. ಇವೆಲ್ಲ ಯುಗ ಧರ್ಮದ ಅಂಶಗಳು, ಉತ್ತಮ ಆದರ್ಶಗಳು, ಇವುಗಳನ್ನು ಮಾನವ ಪಾಲಿಸಲೇಬೇಕು, ಅನುಸರಿಸಲೇಬೇಕು. ಏಕೆಂದರೆ ಗೀತೆಯು ಹೇಳುವಂತೆ ಅವನು ಉಳಿದ ಜನಾಂಗಕ್ಕೆ ಮಾದರಿಯಾಗಬೇಕು, ಆದರ್ಶವಾಗಬೇಕು. ಅರ್ಜುನನೂ ಸಹ ಯುಗ ಧರ್ಮಕ್ಕೆ ತಕ್ಕಂತೆ ವ್ಯವಹರಿಸಬೇಕೆಂದು ಗೀತೆ ಸ್ಪಷ್ಟವಾಗಿ ಹೇಳಿದೆ. ಆದರೆ ಈ ವಿಧಿ ವಿಧಾನಗಳು ಕಂದಾಚಾರದಂತೆ ಕೇವಲ ಬಾಹ್ಯ ಕರ್ಮಗಳಾಗಬಾರದು, ಅವುಗಳ ಹಿಂದೆ ಇರುವ ಸತ್ಯದ, ತತ್ವದ ಸಂಪೂರ್ಣ ಅರಿವು ಸಾಧಕನಿಗೆ ಇರಬೇಕು. ಅಲ್ಲದೇ ಆ ಕಾಲದ ಜನರಲ್ಲಿ ತನ್ನ ಸರಿಯಾದ ಆಚಾರ–ವಿಚಾರಗಳ ಮೂಲಕ ಮಾದರಿಯನ್ನು ಸ್ಥಾಪಿಸುವುದು ಅವಶ್ಯಕವಿದೆ. ಏನೇ ಇರಲಿ, ಮುಖ್ಯವಾದ

ವಿಷಯವೇನೆಂದರೆ, ಆಧುನಿಕ ಮನಸ್ಸು ವ್ಯವಹಾರಿಕ ಆಚಾರ–ವಿಚಾರಗಳ ಗಂಭೀರ ಚರ್ಚೆ ಬಂದಾಗ ಎರಡು ಅತಿ ಮುಖ್ಯ ಸಾರಭೂತ ವಸ್ತುಗಳನ್ನು ಅಥವಾ ವಿಷಯಗಳನ್ನು, ಅಂದರೆ ಈಶ್ವರನನ್ನು ಮತ್ತು ಈಶ್ವರಮಯ (ಆಧ್ಯಾತ್ಮಿಕ) ಅವಸ್ಥೆಯನ್ನು ಬಹಿರಂಗಗೊಳಿಸಿ ಬಿಡುತ್ತದೆ: ಆದರೆ ಗೀತೆಯು ಈ ವಿಷಯಗಳಿಗೆ ಅತಿ ಪ್ರಮುಖ ಸ್ಥಾನ ನೀಡಿರುವಾಗ ಈ ರೀತಿ ಅವುಗಳ ವಿಚಾರವನ್ನೇ ಕೈಬಿಡುವುದು ಬಹು ದೊಡ್ಡ ಪ್ರಮಾದವಾಗುತ್ತದೆ. ಆಧುನಿಕ ಮನಸ್ಸು ಕೇವಲ ಮಾನವತೆಯ ಮಟ್ಟದಲ್ಲೇ ಉಳಿದರೆ, ಗೀತೆಯು ಮಾನವನು ಈಶ್ವರನಲ್ಲಿಯೇ ಜೀವಿಸುತ್ತ ವಿಶ್ವಕ್ಕಾಗಿ ಬದುಕಬೇಕು ಎಂದು ಹೇಳುತ್ತದೆ. ಆಧುನಿಕ ಮನಸ್ಸು ಕೇವಲ ಬುದ್ಧಿ–ಹೃದಯ–ಪ್ರಾಣಗಳಲ್ಲಿ ಮಾತ್ರ ಉಳಿದರೆ, ಗೀತೆಯು ಆತ್ಮದಲ್ಲಿ ಚೈತನ್ಯದಲ್ಲಿ ಜೀವಿಸಲು ಬೋಧಿಸುತ್ತದೆ. ಆಧುನಿಕ ಮನಸ್ಸು ಕ್ಷರ ಪುರುಷನ ಮಟ್ಟಕ್ಕೆ ನಿಂತುಬಿಟ್ಟರೆ, ಗೀತೆಯು ಮಾನವನು ಅಕ್ಷರ ಪುರುಷನಲ್ಲಿ, ಆ ನಂತರ ಪುರುಷೋತ್ತಮನಲ್ಲಿ ಜೀವಿಸಬೇಕೆಂದು ಉಪದೇಶಿಸುತ್ತದೆ. ಮನಸ್ಸು ನಿತ್ಯ ಪರಿವರ್ತನೆ ಹೊಂದುವ, ಬದಲಾಗುವ ಕಾಲದ ಓಟದಲ್ಲಿದ್ದರೆ, ನಿತ್ಯ ಆತ್ಮ ವಸ್ತುವಿನ, ಈಶ್ವರ ಸ್ವರೂಪದಲ್ಲಿರಲು ಗೀತೆ ಹೇಳುತ್ತದೆ. ಈ ಶ್ರೇಷ್ಠ ಬೋಧನೆಯ ಕಡೆಗೆ ಇತ್ತೀಚಿಗೆ ಸ್ವಲ್ಪ ಗಮನ ಹರಿಸಲಾಗಿದೆ ಎಂಬುದೇನೋ ನಿಜ, ಅದರ ಹಿಂದಿನ ಉದ್ದೇಶ ಭಿನ್ನವಾಗಿದೆ.

ಈಶ್ವರ ಮತ್ತು ಆಧ್ಯಾತ್ಮಿಕತೆಯ ಹೆಸರಿನಲ್ಲಿ ಮಾನವ ಹಾಗೂ ಸಮಾಜದ ಸೇವೆಗಾಗಿ ಮುಡಿಪಾಗಿರಿಸುವ ಗುಪ್ತ ಉದ್ದೇಶ ಅದಕ್ಕಿದೆ, ಆದರೆ ಗೀತೆಯ ದೃಷ್ಟಿಯಲ್ಲಿ ಈಶ್ವರ ಮತ್ತು ಆಧ್ಯಾತ್ಮಿಕತೆಗಳು ಸರ್ವ ಶ್ರೇಷ್ಠ ಸ್ವತಂತ್ರ ವಸ್ತುಗಳಾಗಿವೆ, ಅವುಗಳ ಸರ್ವತೋ ಶ್ರೇಷ್ಠ ಮೌಲ್ಯವಿದೆ, ಬೇರೆ ಇನ್ನಿತರ ವಸ್ತುಗಳ ಮಹತ್ವವನ್ನು ಹೆಚ್ಚಿಸುವ ಅದರ ಗುಣ ಗೌಣ, ಅದೇ ಮುಖ್ಯ ಗುಣ ಅಲ್ಲ, ಅದು ಈಶ್ವರ ಹಾಗೂ ಆಧ್ಯಾತ್ಮಿಕತೆಯ ಕೆಲಸ ಅಲ್ಲ, ಗೀತೆಯ ಬೋಧನೆಯ ಸಾರವೆಂದರೆ, ವ್ಯವಹಾರದಲ್ಲಿ ಶ್ರೇಷ್ಠ ಸಂಗತಿಗಳ ಮೂಲಕ ಶ್ರೇಷ್ಠ ಸಂಗತಿಗಳಿಗಾಗಿ ಕೆಳ ದರ್ಜೆಯ ಸಂಗತಿಗಳ ಅಸ್ತಿತ್ವವನ್ನು ಬಳಸಿಕೊಳ್ಳುವುದು ಯೋಗ್ಯವಾಗಿದೆ, ಹೀಗೆ ಆದಲ್ಲಿ ಕನಿಷ್ಠ, ಅಮುಖ್ಯ ಸಂಗತಿಗಳ ಮೂಲಕ ಶ್ರೇಷ್ಠ ಸಂಗತಿಗಳನ್ನು ಅವುಗಳ ಉನ್ನತ ಸ್ಥಾನಗಳಿಗೆ ತಲುಪಿಸಲು ಅವುಗಳ ಶಕ್ತಿ ವ್ಯಯವಾಗುವುದು, ಆಗ ನಮಗೆ ನಮ್ಮಂತರಂಗದಲ್ಲಿ ಈ ಉನ್ನತೀಕರಣದ ಪ್ರಕ್ರಿಯೆ ನಡೆದಿರುವುದರ ಅರಿವಾಗುವುದು.

ಆದ್ದರಿಂದ ಗೀತೆಯನ್ನು ಈ ರೀತಿ, ಇವತ್ತಿನ ಮಾನಸಿಕ ದೃಷ್ಟಿಕೋನದ ಮೂಲಕ ಅಳೆಯುವ, ವಿಶ್ಲೇಷಿಸುವ ಕೆಲಸ ಮಾಡಬಾರದು, ಅದು ತಪ್ಪಾಗುತ್ತದೆ. ಅಷ್ಟೇ ನಿರಾಸಕ್ತಿಯಿಂದ ಕರ್ತವ್ಯ ಮಾಡುವುದೇ ಅತ್ಯುನ್ನತ ಸಿದ್ಧಿ ಎಂದು, ಅದು ನಿಜಕ್ಕೂ ಪರ್ಯಾಪ್ತವೆಂದು ಕಲಿಸುವುದು ಅತ್ಯಂತ ದೊಡ್ಡ ತಪ್ಪು. ಯಾವ ಸಂದರ್ಭದಲ್ಲಿ ಗೀತೆ ಉದಯಿಸಿತು, ಯಾವ ಸಂದರ್ಭ ಅಥವಾ ಪ್ರಸಂಗವನ್ನು ಗೀತೆಯು ನಿಭಾಯಿಸುತ್ತದೆ ಅನ್ನುವುದನ್ನು ಸ್ವಲ್ಪ ಲಕ್ಷ್ಯವಹಿಸಿ ನೋಡಿದರೆ, ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಗೀತೆ ಹೇಳುವ ತತ್ವ ಇದಲ್ಲ, ಇದನ್ನು ಗೀತೆ ಬೋಧಿಸುವುದಿಲ್ಲ, ಏಕೆಂದರೆ ಇಡೀ ಗೀತೋಪದೇಶದ ಸಾರವು ಯಾವ ಅಂಶದಲ್ಲೂ ಮಾನವನ ದೃಷ್ಟಿಕೋನವನ್ನು ಅವಲಂಬಿಸುವುದಿಲ್ಲ. ಗೀತೆಯಲ್ಲಿ ಅನೇಕ ವಿಭಿನ್ನ, ಪರಸ್ಪರ ವಿರುದ್ಧವಾದ ಬೌದ್ಧಿಕ, ತಾರ್ಕಿಕ ಹಾಗೂ ನೈತಿಕ ಮೌಲ್ಯಗಳ ಮೇಲೆ ಒತ್ತು ನೀಡಿರುವ ಸಿದ್ಧಾಂತಗಳ ವಿವರಣೆಯು ಇದೆ, ಜೊತೆಗೆ ಅವುಗಳ ಸಂಕೀರ್ಣತೆಯ ವಿಶ್ಲೇಷಣೆಯೂ ಇದೆ. ಹೀಗಾಗಿ ಮಾನವನ ಮನಸ್ಸು ಅವಲಂಬಿಸುವ ತಾರ್ಕಿಕ ಹಾಗೂ ಬೌದ್ಧಿಕ ಸಿದ್ಧಾಂತದ ಅಡಿಗಲ್ಲೇ ಅಲುಗಾಡಿ ಬಿಡುವುದು, ಮನವನ ಜೀವನದಲ್ಲಿ ಸಾಮಾನ್ಯವಾಗಿ ವಿರೋಧ, ಸಂಘರ್ಷ ಬಂದೇ ಬರುತ್ತವೆ, ವ್ಯಕ್ತಿಯ ವೈಯಕ್ತಿಕ ಕೌಟುಂಬಿಕ ಕುರಿತು ಜವಾಬ್ದಾರಿಗಳು, ರಾಷ್ಟ್ರಪರ ಅವನ ಕರ್ತವ್ಯಗಳು, ಅದೇ ರೀತಿ ಸಾಮಾಜಿಕ ಹಾಗೂ ಇನ್ನೂ ಗುರುತರವಾಗಿ ಮಾನವೀಯತೆಯ ಕರ್ತವ್ಯ, ಧಾರ್ಮಿಕ ಕರ್ತವ್ಯ ಇವೆಲ್ಲವುಗಳ ನಡುವೆ ಸಂಘರ್ಷ, ತಿಕ್ಕಾಟ ಬಂದೇ ಬರುತ್ತದೆ. ಅಷ್ಟೇ ಏಕೆ, ಇನ್ನೂ ಆಂತರಿಕ ಸಮಸ್ಯೆಗಳೂ ಬರಬಹುದು, ಬುದ್ಧನ ಉದಾಹರಣೆ ತೆಗೆದುಕೊಂಡರೆ, ಅವನು ಎಲ್ಲ ಹೊಣೆಗಾರಿಕೆ, ಕರ್ತವ್ಯಗಳನ್ನು ಬಿಡಬೇಕಾಗಿ ಬಂದಿತು. ಪರಮಾತ್ಮನ (ಅಥವಾ ಅಂತರಂಗದ) ಕರೆಯನ್ನು ಕೇಳಲು ಸರ್ವಸ್ವವನ್ನೇ ತ್ಯಾಗ ಮಾಡಬೇಕಾದ ಅವಶ್ಯಕತೆ ಬಂದಿತು. ಇಂಥ ಪ್ರಸಂಗದಲ್ಲಿ, ಆಂತರಿಕ ತಾಕಲಾಟದ ಪ್ರಸಂಗದಲ್ಲಿ ಬುದ್ಧನು ಹಿಂತಿರುಗಿ ತನ್ನ ಹೆಂಡತಿ, ಮಕ್ಕಳ ಬಳಿ ಹೋಗಿ ಪುನಃ ರಾಜ್ಯಭಾರ ಮಾಡಲೇಬೇಕೆಂದು ಗೀತೆ ಹೇಳುವುದಿಲ್ಲ, ರಾಮಕೃಷ್ಣ ಪರಮಹಂಸ ರಂಥವರು ಯಾವುದೋ ಒಂದು ಶಾಲೆಯಲ್ಲಿ ಮಾಸ್ತರರಾಗಿ ಚಿಕ್ಕ ಮಕ್ಕಳಿಗೆ ಪಾಠ ಹೇಳುವ ಕೆಲಸ ಮಾಡಲು ಗೀತೆ ಹೇಳುವುದಿಲ್ಲ, ವಿವೇಕಾನಂದನಂಥವರು ತಮ್ಮ ಕುಟುಂಬ ಪೋಷಣೆಗಾಗಿ ಪತ್ರಿಕೋದ್ಯಮವನ್ನೋ, ವೈದ್ಯ ವೃತ್ತಿಯನ್ನೋ, ಅವಲಂಬಿಸಿ ನಿರಾಸಕ್ತ ಕರ್ಮಯೋಗ ಮಾಡಬೇಕೆಂದು

ಗೀತೆ ಹೇಳಲಾರದು. ಗೀತೆ ಇಂಥ ನಿರಾಸಕ್ತ, ಫಲಾಪೇಕ್ಷೆ ಹಿತಕರ್ಮ ಮಾಡಲು ಆದೇಶ ಮಾಡುವುದೆಂದು ತಿಳಿಯಬಾರದು. ತನ್ನ ಕರ್ತವ್ಯ ಕರ್ಮಗಳನ್ನು ಉದಾಸೀನ ಮನಸ್ಸಿನಿಂದ "ಅನಾಸಕ್ತ ಮನಃ"ದಿಂದ ಮಾಡುತ್ತ ಬದುಕಲು ಗೀತೆ ಆದೇಶಿಸುವುದಿಲ್ಲ, ದೈವೀ ಜೀವನದ ಕರೆ ಬಂದಾಗ, ಅಂಥ ಸಾಧ್ಯತೆ ಕಂಡುಬಂದಾಗ ಎಲ್ಲಾ ರೀತಿಯ ಧರ್ಮ–ಕರ್ತವ್ಯಗಳನ್ನೂ ತ್ಯಜಿಸಿಬಿಡಲು ಹೇಳುತ್ತದೆ. ಸರ್ವ ಧರ್ಮಾನ್ ಪರಿತ್ಯಾಜ್ಯ ಪರಮಾತ್ಮನನ್ನು ಶರಣು ಹೋಗಿ "ದೈವೀ ಕರ್ತವ್ಯ"ವನ್ನು ಭಕ್ತಿಯಿಂದ ಮಾಡಲು ಆದೇಶಿಸುತ್ತದೆ. ಬುದ್ಧನ, ರಾಮಕೃಷ್ಣ ಪರಮಹಂಸರ, ವಿವೇಕಾನಂದರು ಗೀತೆಯು ನೈಷ್ಕರ್ಮ್ಯವನ್ನು ಬೋಧಿಸುವುದಿಲ್ಲ, ನೈಷ್ಕರ್ಮ್ಯಕ್ಕಿಂತ ಕರ್ಮಯೋಗವನ್ನೇ ಶ್ರೇಷ್ಠವೆಂದು ಹೇಳುವ ಗೀತೆಯು ಅಪರೂಪದ ಪ್ರಸಂಗಗಳಲ್ಲಿ ಪರಮಾತ್ಮ ಪ್ರಾಪ್ತಿಯ ವಿಷಯ ಬಂದಾಗ ಕರ್ಮ ತ್ಯಾಗವನ್ನು ಸಹ ಉಪದೇಶಿಸುತ್ತದೆ. ಕರ್ತವ್ಯ ಕರ್ಮಗಳನ್ನು ತ್ಯಾಗ ಮಾಡಿ, ಈಶ್ವರ ಸಿದ್ಧಿಯಾಗುವುದೆಂದು ಅನಿಸಿದರೆ, ಆ ರೀತಿಯ ಅಂತರಂಗದ ಕರೆ ಪ್ರಬಲವಾಗಿದ್ದರೆ ಸಮಸ್ತ ಸಂಸಾರವನ್ನು ಕೂಡ ತ್ಯಾಗ ಮಾಡಲು ಅದು ಅಡ್ಡಿಪಡಿಸುವುದಿಲ್ಲ, ಗೀತೆಯಲ್ಲಿ ಆ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ಪರಮಾತ್ಮನ ಕರೆ ಬಂದರೆ ಮುಗಿಯಿತು, ಅದರ ಮುಂದೆ ಮತ್ತಾವುದೂ ಇಲ್ಲ, ಅದು ಅನಿವಾರ್ಯ, ಅದನ್ನು ಪಾಲಿಸಲೇಬೇಕು, ಬೇರೆ ಮಾತೇ ಇಲ್ಲ, ಬೇರೆ ಏನನ್ನು ವಿಚಾರಿಸಲಾಗದು, ಎಲ್ಲವನ್ನು ಪರಿತ್ಯಾಜ್ಯ ಪರಮಾತ್ಮನ ಕರೆಯಂತೆ ನಡೆಯಲೇಬೇಕೆಂದು ಗೀತೆಯು ಸ್ಪಷ್ಟವಾಗಿ ಹೇಳುತ್ತದೆ.

ಆದರೆ ಅರ್ಜುನನ ಮುಂದಿರುವ ಸಮಸ್ಯೆ ಆ ತರಹದ್ದಲ್ಲ, ಅವನ ಸಮಸ್ಯೆ ನೈತಿಕ ಮೂಲದ್ದು, ಕ್ಷತ್ರಿಯನಾಗಿ ಅವನು ಯುದ್ಧ ಮಾಡಲೇಬೇಕು, ಅದು ಅವನ ಕರ್ತವ್ಯ, ಅದರೆ ಪಾಪ–ಪುಣ್ಯಗಳ ವಿಚಾರದಿಂದ ಅವನ ಮನಸ್ಸು ಹಿಂಜರಿಯುತ್ತಿದೆ, ಅವನು ಯುದ್ಧದಿಂದ ಪರಾಙ್ಮುಖನಾಗಲು ವಾದ ಹೂಡುತಿದ್ದಾನೆ. ಹೀಗಿರುವಾಗ ಅವನು ನಿಷ್ಕಾಮ ಮನಸ್ಸುಳ್ಳವನಾಗಿ, ಅನಾಸಕ್ತ ಮನದಿಂದ, ಅನುದ್ವಿಗ್ನನಾಗಿ ಕರ್ತವ್ಯ ಮಾಡಲು ಹೇಳಿದರೆ ಒಪ್ಪಲು ಸಾಧ್ಯವೇ? ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಅವನ ಮುಂದಿರುವ ಸಮಸ್ಯೆ ಏನೆಂದರೆ ತಾನು ಯಾವ ಕರ್ಮ ಮಾಡಬೇಕು? ಮಹಾಯುದ್ಧಕ್ಕೆ ತಾನೇ ಕಾರಣನಾಗಿ ಘೋರ ರಕ್ತಪಾತ ಮಾಡಿ ತನ್ನವರೆಲ್ಲರನ್ನು ನಾಶ ಮಾಡುವುದು ತನ್ನ ಕರ್ತವ್ಯ ಹೇಗಾದೀತು? ತನ್ನ ಜನ ತನ್ನ ರಾಷ್ಟ್ರ ಈ ರೀತಿ ಹಾಳಾಗಲು ತಾನೇ

ಕಾರಣವಾಗುವುದಿಲ್ಲವೇ? ಇದು ಅವನ ಮುಂದಿರುವ ಪ್ರಶ್ನೆ. ಕ್ಷತ್ರಿಯನಾಗಿ ನೀನು ಯುದ್ಧ ಮಾಡುವುದು ಸರಿ. ಅದು ನಿನ್ನ ಕರ್ತವ್ಯ ಎಂದು ಹೇಳಿದರೂ ಅವನದನ್ನು ಅಂಗೀಕರಿಸುವ ಸ್ಥಿತಿಯಲ್ಲಿ ಇಲ್ಲ ಇಂಥ ಘನ ಘೋರ ರಕ್ತಪಾತ ಮಾಡಿ ತನ್ನ ರಾಷ್ಟ್ರದ ಭವಿಷ್ಯಕ್ಕೆ ಕಲ್ಲು ಹಾರುವುದು ತನ್ನ ಕರ್ತವ್ಯ ಹೇಗಾದೀತು? ಎಂದೇ ಅವನು ಪ್ರಶ್ನೆ ಕೇಳುತ್ತಾನೆ, ಏನೇ ಆದರೂ ಅಡ್ಡಿಯಿಲ್ಲ, ಯಾರೇ ಸಾಯಲಿ ಏನೇ ಆಗಲಿ, ದೇಶವೇ ಹಾಳಾಗಲಿ, ಏನೇ ಪರಿಣಾಮ ಉಂಟಾಗಲಿ ಸೈನಿಕನಾಗಿ, ಯೋಧನಾಗಿ ತಾನು ಮಾತ್ರ ನಿರಾಸಕ್ತಿಯಿಂದ ಯುದ್ಧ ಮಾಡಲೇಬೇಕು ಅನ್ನುವುದು ಎಷ್ಟರ ಮಟ್ಟಿಗೆ ಯೋಗ್ಯ? ಓರ್ವ ರಾಜಕಾರಣಿ, ಒಂದು ದೇಶದ ಹಿತದ ದೃಷ್ಟಿಯಿಂದ, ಓರ್ವ ನ್ಯಾಯವಾದಿ ಅಥವಾ ನೀತಿ ಬೋಧಕನು ಹಾಗೆ ಹೇಳಬಹುದೇನೋ, ಅದು ಸರಿಯಾದ ಬೋಧನೆಯೂ ಇರಬಹುದೇನೋ, ಆದರೆ ಉದಾಮ ತತ್ವಜ್ಞಾನಿಗಳು ಧರ್ಮಶಾಸ್ತ್ರ ಪಂಡಿತರು, ದೊಡ್ಡ ದೊಡ್ಡ ಧರ್ಮ ಗ್ರಂಥಗಳು ಹಾಗೆ ಹೇಳಲಾರವು; ಅವುಗಳಿಗೆ ಸಮಸ್ಯೆಯನ್ನು ಸಮೂಲವಾಗಿ ಬಿಡಿಸುವ ದಾರಿ ಬೇಕಾಗಿದೆ. ಒಂದು ವೇಳೆ ಗೀತೆ ಕೂಡ ಇಂಥ ತೀವ್ರ ನೈತಿಕ ಮತ್ತು ಆಧ್ಯಾತ್ಮಿಕ ಸಮಸ್ಯೆ ಬಂದಾಗ, ಹೀಗೆಯೇ ಬೋಧಿಸುತ್ತದೆ ಅನ್ನುವುದಾದರೆ ಅದನ್ನು ಧರ್ಮ ಗ್ರಂಥಗಳ ಪಟ್ಟಿಯಿಂದ ಕಿತ್ತು ಹಾಕಿ ರಾಜಕೀಯ ಮತ್ತು ನೈತಿಕ ಗ್ರಂಥಾಲಯದಲ್ಲಿ ಇಡಬೇಕಾಗುವುದು, ಅದು ಆಚರಣ ಯೋಗ್ಯ ಗ್ರಂಥ ಅನಿಸದು. ಗೀತೆಯು ಉಪನಿಷತ್ತುಗಳು ಹೇಳುವ ಧಾಟಿಯಲ್ಲಿಯೇ ಸಮತೆಯನ್ನೇ ಹೇಳುತ್ತದೆ, ಆ ಸಮತೆಯು ಪಾಪ–ಪುಣ್ಯಗಳನ್ನು ಮೀರಿದ ಸಮತೆ, ಒಳ್ಳೆಯದು ಕೆಟ್ಟದ್ದನ್ನು ಮೀರಿದ ಸಮತೆ, ಅವು ಬ್ರಾಹ್ಮೀ ಸ್ಥಿತಿಯ ಮಗ್ಗಲುಗಳು, ಬ್ರಾಹ್ಮೀ ಸ್ಥಿತಿಯು ಒಳ್ಳೆಯದು–ಕೆಟ್ಟದ್ದು ಎರಡನ್ನೂ ಸಮಾನವಾಗಿ ಕಾಣುತ್ತದೆ. ಅನಾಸಕ್ತಿಯಿಂದಲ್ಲ, ಆದರೆ ಈ ಬ್ರಾಹ್ಮೀ ಸ್ಥಿತಿಯ ಅನುಸಂಧಾನವನ್ನು ಗೀತೆಯು ಶ್ರೇಷ್ಠ ಸಾಧಕನಾದವನಿಗೆ ಹೇಳುತ್ತದೆಯೇ ಹೊರತು ಸಾಮಾನ್ಯ ಸಾಂಸಾರಿಕನಿಗೆ ಹೇಳುವುದಿಲ್ಲ, ಸಾಮಾನ್ಯರು ಪಾಪ–ಪುಣ್ಯಗಳ ಬಗ್ಗೆ ಉದಾಸೀನರಾಗಿ ವರ್ತಿಸಿದಲ್ಲಿ ಸಾಮಾಜಿಕ ವ್ಯವಸ್ಥೆ ಹದಗೆಡುತ್ತದೆ. ಸಾಂಸಾರಿಕನಿಗೆ ಹಾಗೆ ಬೋಧಿಸುವುದು ಅನೇಕ ಅಪಾಯಗಳಿಗೆ ದಾರಿಯಾಗುತ್ತದೆ. ಸಾಮಾನ್ಯ ಮಾನವನು ಪಾಪ–ಪುಣ್ಯಗಳ ಭಯ ಇಟ್ಟುಕೊಳ್ಳಲೇಬೇಕು. ಸಾಮಾಜಿಕವಾಗಿ ಅಹಿತ ಮಾಡುವವನು, ಪರಮಾತ್ಮನನ್ನು ಪಡೆಯಲಾರನೆಂದು ಗೀತೆ ಹೇಳುವುದು. ಅರ್ಜುನನು ಇದನ್ನೇ ಮನದಲ್ಲಿಟ್ಟುಕೊಂಡು ಸಾಮಾನ್ಯ

ಜೀವನದ ಧರ್ಮವನ್ನು ಚೆನ್ನಾಗಿ, ನಿಸ್ವಾರ್ಥ ಮನಸ್ಸಿನಿಂದ ಮಾಡಿದರೆ ಶ್ರೇಯಸ್ಸೆಂದು ಭಾವಿಸುವುದು ತಪ್ಪಾಗುವುದು, ಅದೇ ರೀತಿ ಯುದ್ಧವು ಮಹಾಪಾಪವೆಂದು, ಹೇಯವೆಂದು, ನರಕದ ದಾರಿಯೆಂದು ತಿಳಿದು, “ತನ್ನ ಕರ್ತವ್ಯ ತಾನು ಮಾಡಬೇಕು, ನರಕವೇ ಆಗಲಿ, ಸ್ವರ್ಗವೇ ಆಗಲಿ, ತಾನು ಮಾಡಲೇಬೇಕೆಂದು” ಯುದ್ಧ ಮಾಡಿದರೂ ಸಹ ಅದೂ ತಪ್ಪೇ ಆಗುವುದು. ತನ್ನ ವಿವೇಕಕ್ಕೆ, ಪ್ರಜ್ಞೆಗೆ ಹೇಯವೆನಿಸಿದ ಕರ್ಮವು, ಕರ್ತವ್ಯವೇ ಆಗಿದ್ದರೂ, ಮಾಡಬಾರದು, ಅದು ಆತ್ಮ ದ್ರೋಹವಾಗುವುದು. ಕರ್ತವ್ಯವೆನ್ನುವುದು ಸಾಮಾಜಿಕ ಕಲ್ಪನೆ, ಅದೇನೂ ಆಧ್ಯಾತ್ಮಿಕವಲ್ಲವೆಂಬುದು ನೆನಪಿನಲ್ಲಿಡಬೇಕು. ಸಮಾಜದ ಪ್ರತಿ ತಾನು ಮಾಡುವ ಕೆಲಸವನ್ನೇ ಕರ್ತವ್ಯ ಎಂದು ಮಾನವ ಭಾವಿಸುತ್ತಾನೆ. ಇದೇ ಅರ್ಥವನ್ನೂ ತುಸು ಹಿಗ್ಗಿಸಿ, ತನ್ನ ಸ್ವಂತದ (ಅಥವಾ ಸ್ವಾರ್ಥ ನಿಮಿತ್ತದ) ಕರ್ಮ ಅಂತಲೂ ಹೇಳಬಹುದು, ಅತೀತದ ಸಲುವಾಗಿ ಸರ್ವಸ್ವವನ್ನು ತ್ಯಜಿಸುವುದು ಬುದ್ಧನಿಗೆ ಕರ್ತವ್ಯ ಅನಿಸಿತು, ಎಲ್ಲಾವನ್ನು ತ್ಯಾಗ ಮಾಡಿ ನಿರಾಹಾರನಾಗಿ ಗುಹೆಯಲ್ಲಿ ಧ್ಯಾನದಲ್ಲಿ ಕೂಡುವುದು ಸಂನ್ಯಾಸಿಗೆ ಯೋಗ್ಯ ಅನ್ನಿಸಬಹುದು. ಆದರೆ ಇದೆಲ್ಲಾ ಶಬ್ಧದ ಜಾಲವೇ ಆಗುವುದು, ಕರ್ತವ್ಯ ಎಂಬ ಶಬ್ಧವೇ ಸಾಪೇಕ್ಷವಾಗಿದೆ. ನಾವು ಯಾವ ಕೆಲಸಕ್ಕೆ ಎಷ್ಟು ಮಹತ್ವ ಕೊಡುತ್ತೇವೆ ಅನ್ನುವುದರ ಮೇಲೆ ಅದರ ಅರ್ಥ ಅವಲಂಬಿತವಾಗಿರುತ್ತದೆ. ಮಕ್ಕಳ ಪೋಷಣೆ, ಪಾಲನೆ–ವಿದ್ಯಾಭ್ಯಾಸ ಇವು ತಂದೆಯ ಕರ್ತವ್ಯ, ತನ್ನ ಕಕ್ಷಿದಾರನು ಅಪರಾಧಿ ಎಂದು ತಿಳಿದಿದ್ದರೂ ಅವನ ರಕ್ಷಣೆಗಾಗಿ ಹೋರಾಡುವುದು ವಕೀಲನ ಕರ್ತವ್ಯವಾಗುವುದು, ತನ್ನವರೋ ಬೇರೆಯವರೋ, ತನಗೇನು ಮಾಡುವುದೋ? ಮೇಲಧಿಕಾರಿಯ ಆದೇಶವಾದರೆ ಯಾರಾದರೂ ಸರಿ ಗುಂಡು ಹಾರಿಸುವುದು ತನ್ನ ಕರ್ತವ್ಯ ಎಂದು ಸೈನಿಕ ಅಪರಾಧಿಯನ್ನು ಸೆರೆಮನೆಗೆ ತಳ್ಳುವುದು, ಕೊಲೆಗಾರನನ್ನು ಗಲ್ಲಿಗೇರಿಸುವುದು ನ್ಯಾಯಧೀಶನ ಕರ್ತವ್ಯ, ಇವುಗಳನ್ನೆಲ್ಲ ನೋಡಿದರೆ ಇದೆಲ್ಲ ಸಾಮಾಜಿಕ ವ್ಯವಸ್ಥೆ ಅನ್ನುವುದು ತಿಳಿದು ಬರುವುದು. ನಿರಪೇಕ್ಷ–ನೈತಿಕ, ಧಾರ್ಮಿಕ, ಇವೆಲ್ಲವುಗಳಿಗೆ ಅಲ್ಲಿ ಬೆಲೆಯಿಲ್ಲ, ಮಮತೆ, ಪ್ರೇಮ, ವಾತ್ಸಲ್ಯಗಳಿಗೆ ಅಲ್ಲಿ ಬೆಲೆ ಇಲ್ಲ. ಆದರೆ, ಜನರ ಆಂತರಿಕ ನೋಟ ಬದಲಾಗಿ, ಸುಳ್ಳು ಹೇಳುವುದು ತಪ್ಪು, ಅಪರಾಧಿಯನ್ನು ಸುಳ್ಳು ಹೇಳಿ ರಕ್ಷಿಸಬಾರದೆಂದು ವಕೀಲ ತಿಳಿದುಕೊಂಡರೆ, ಗಲ್ಲು ಶಿಕ್ಷೆ ಅಮಾನವೀಯತೆ ಎಂದು ನ್ಯಾಯಾಧೀಶ ಭಾವಿಸಿದರೆ, ಯಾವ ಪ್ರಸಂಗದಲ್ಲೂ

ಸಹ ನರ ಹತ್ಯ ಮಹಾಪಾತಕವೆಂದು ರಣರಂಗದಲ್ಲಿ ನಿಂತಿರುವ ಯೋಧನಿಗೆ ಪ್ರತೀತಯಾದರೆ ಅವರವರ ಕರ್ತವ್ಯವನ್ನೂ ನಿರ್ಣಯ ಮಾಡುವವರು ಯಾರು? ಅವನೇ ನಿರ್ಣಯಿಸಬೇಕಲ್ಲದೇ ಬೇರೆಯವರು ನಿರ್ಣಯಿಸುವರೇ? ಅಂಥ ಪ್ರಸಂಗದಲ್ಲಿ ವ್ಯಕ್ತಿ ಹಾಗೂ ಸಮಾಜ ವಿಶಿಷ್ಟ ಸಾಪೇಕ್ಷ ಕರ್ತವ್ಯಕ್ಕಿಂತ ನೈತಿಕ ನಿಯಮ, ಧರ್ಮವೇ ಶ್ರೇಷ್ಠವಾಗದೇ? ಸಾಮಾಜಿಕ ನಿಯಮಗಳು ಸಾಮಾನ್ಯ ಜೀವನಕ್ಕೆ ಅನುಕೂಲಕರವಾಗಿರಬಹುದು, ಆದರೆ ನೈತಿಕ, ಧಾರ್ಮಿಕ, ಪ್ರೇಮದ ನಿಯಮಗಳಿಗೆ ಈ ಕರ್ತವ್ಯಗಳ ಹಂಗಿರದು ಮಾನವನ ಆಂತರಿಕ ಭಾವ ಜಾಗೃತವಾದರೆ ನೈತಿಕ ಸತ್ವಗಳೇ ಧರ್ಮದ ಆಧಾರವಾಗುವವು. ವಾಸ್ತವಿಕವಾಗಿ ಎರಡು ತೆರನಾದ ಆಚಾರದ ನಿಯಮಗಳಿವೆ, ತಮ್ಮ ತಮ್ಮ ಸ್ಥಾನದಲ್ಲಿ ಎರಡೂ ಯೋಗ್ಯವೇ ಆಗಿವೆ ಒಂದು ಬಾಹ್ಯ ಸ್ಥಿತಿ ಅಥವಾ ಸಂದರ್ಭಗಳನ್ನು ಅವಲಂಬಿಸಿದ್ದರೆ, ಇನ್ನೊಂದು ಬಾಹ್ಯ ಪರಿಸ್ಥಿತಿಗೆ ಸಂಬಂಧಿಸಿರದೇ ಕೇವಲ ಬುದ್ಧಿ ಹಾಗೂ ಅಂತಃಸಾಕ್ಷಿ ಅಥವಾ ಅಂತಃಪ್ರಜ್ಞೆಗೆ ಸಂಬಂಧಿಸಿದ್ದಾಗಿದೆ ಗೀತೆಯ ವೈಶಿಷ್ಟ್ಯವೇನೆಂದರೆ, ಅದೇ ಉಚ್ಚ ತರದ ನಿಯಮಗಳನ್ನು ಕೆಳಗಿನ ಸ್ತರಕ್ಕೆ ಅಡಿಯಾಳಾಗಿಸಬೇಕೆಂದು ಎಲ್ಲಿಯೂ ಹೇಳುವುದಿಲ್ಲ. ಮಾನವನಲ್ಲಿ ನೈತಿಕ ಪ್ರಜ್ಞೆ ಜಾಗೃತವಾದರೆ, ಅದನ್ನು ಕರ್ತವ್ಯದ ನೆಪದಲ್ಲಿ ಬಲಿಕೊಡಲು ಹತ್ತಿಕ್ಕಲು ಎಲ್ಲಿಯೂ ಹೇಳುವುದಿಲ್ಲ, ನೈತಿಕ ಪ್ರಜ್ಞೆಯನ್ನು ಸಾಮಾಜಿಕ ಮೌಲ್ಯಗಳಿಗಾಗಿ ಬಲಿಕೊಡಲು ಗೀತೆ ಹೇಳುವುದಿಲ್ಲ, ಅದು ನಮ್ಮನ್ನು ಮೇಲಿನ ಸ್ತರಕ್ಕೆ ಕರೆದೊಯ್ಯುವುದೇ ಹೊರತು ಕೆಳಗಿನ ಸ್ತರಕ್ಕಲ್ಲ. ಎರಡರ ನಡುವೆ ತಿಕ್ಕಾಟವಿರುವಾಗ, ಎರಡರ ನಡುವೆ ಗೊಂದಲವಿರುವಾಗ ಗೀತೆಯು ಅವೆರಡನ್ನು ಮೀರಿ, ವ್ಯವಹಾರಿಕವಾದುದನ್ನು, ಅದೇ ರೀತಿ ಕೇವಲ ನೈತಿಕವಾದುದನ್ನು, ಈ ಎರಡನ್ನು ಮೀರಿ ಬ್ರಾಹ್ಮೀ ಸ್ಥಿತಿಯ ಸಮತೆಗೆ ಏರಲು ಕರೆ ಕೊಡುತ್ತದೆ. ಸಾಮಾಜಿಕ ನೀತಿ, ನಿಯಮ ಕರ್ತವ್ಯ ಬೇಕು. ಆದರೆ ಅದು ಈಶ್ವರೀಯ ಕಲ್ಪನೆಗೆ ಬದ್ಧವಾಗಿರಬೇಕೆಂದು ಬೋಧಿಸುತ್ತದೆ. ಕೇವಲ ಬಾಹ್ಯ ಕರ್ಮಗಳಿಗೆ ಅಂಟಿಕೊಂಡಿರುವುದರ ಬದಲು, ಜಟಿಲವಾದ ಕರ್ಮದ ನಿಯಮಗಳಿಂದ ಮುಕ್ತವಾದ ಆತ್ಮದ ಸ್ವಾತಂತ್ರ್ಯದ ಮೂಲಕ ಪ್ರೇರಿತವಾಗುವ ಆಂತರಿಕ ನಿರ್ಣಯದ ತತ್ವಗಳಿಗೆ ಹೆಚ್ಚಿನ ಮಹತ್ವವನ್ನು ಅದು ನೀಡುತ್ತದೆ. ಬ್ರಾಹ್ಮೀ ಸ್ಥಿತಿ ಸಂಕೀರ್ಣವಾದ ಕರ್ಮಗಳ ನಿಯಮದಿಂದ ಮುಕ್ತಿ, ನಮ್ಮ ಅಂತರಂಗದಲ್ಲಿ ಹಾಗೂ ಬಾಹ್ಯದಲ್ಲಿ ಎಲ್ಲೆಲ್ಲೂ ಇರುವ ಈಶ್ವರನ ಅಂತಃ ಪ್ರೇರಣೆಯ ಮೂಲಕ

ನಡೆಯುವ ಕರ್ಮಗಳು ಇದೇ ಗೀತೆಯ ಉಪದೇಶದ ಅತ್ಯಂತ ಪ್ರಮುಖ ಅಂಶವಾಗಿದೆ. ಗೀತೆಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಒಂದೇ ಒಂದು ದಾರಿ ಇದೆ. ಯಾವುದಾದರೂ ಒಂದು ಮಹಾಗ್ರಂಥ ತೆಗೆದುಕೊಳ್ಳಿ, ಇದೊಂದೇ ದಾರಿ. ಅದರ ಸಮಗ್ರ ಸಂಪೂರ್ಣ ಅಧ್ಯಯನ, ಅದರ ವಾದ ಸರಣಿಯ ಸಮಗ್ರ ಅನುಸಂಧಾನ ಮಾಡಿ. ಆದರೆ ಇತ್ತೀಚಿನ ಭಾಷಕಾರರು ಬೇರೆಯದೇ ಆದ ದಾರಿ ಹಿಡಿದರು. ಬಂಕಿಮಚಂದ್ರ ಚಟರ್ಜಿಯವರಿಂದ ಮೊದಲು ಮಾಡಿ ಎಲ್ಲಾರೂ ಭಿನ್ನವಾದ ದಾರಿ ಹಿಡಿದರು. ಗೀತೆಯು ಕರ್ತವ್ಯ, ಕರ್ಮಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವುದೆಂದು ಹೇಳಿದವರೇ ಅವರು ಮೊದಲಿನ 3–4 ಅಧ್ಯಾಯಗಳ ಮೇಲೆ ಒತ್ತು ಕೊಟ್ಟು ಅದರಲ್ಲಿರುವ ಸಮತ್ವ, ಕರ್ತವ್ಯ ಕರ್ಮ ಎಂಬ ಹೇಳಿಕೆಗಳಿಗೆ ಮಾಡುವುದಷ್ಟೇ ನಿನ್ನ ಅಧಿಕಾರ, ಕರ್ಮಫಲದ ಮೇಲೆ ನಿನಗೆ ಅಧಿಕಾರವಿಲ್ಲ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಶು ಕದಾಚನ ಎಂಬ ಶ್ಲೋಕದ ರೀತಿಯಲ್ಲಿ ಅರ್ಥೈಸಿ, ವ್ಯಾಖ್ಯಾನ ಮಾಡಿ, ಗೀತೆಯು ಕರ್ತವ್ಯ ಕರ್ಮದ ಕೈಪಿಡಿ" ಎಂಬಂತೆ ಚಿತ್ರಣ ನೀಡಿದರು. ಈಗ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಶು ಕದಾಚನ" ಎಂಬುದೇ ಮಹಾವಾಕ್ಯವೆಂಬಂತೆ ಬಿಂಬಿತವಾಗುತ್ತ, ಗೀತೆಯ ಉಳಿದ ಅಧ್ಯಾಯಗಳ ಉನ್ನತ ತಾತ್ವಕ ಚಿಂತನೆಗೆ ಎರಡನೆ ದರ್ಜೆ ಸ್ಥಾನ ಸಿಕ್ಕಿದೆ. ಹನ್ನೊಂದನೆಯ ಅಧ್ಯಾಯದ ವಿಶ್ವರೂಪ ದರ್ಶನಕ್ಕೊಂದಿಷ್ಟು ವಿಶೇಷ ಮಹತ್ವವಿದ್ದರೂ ಗೀತೆ ಹೇಳುವ ಅನೇಕ ಪಾರಮಾರ್ಥಿಕ ವಿಚಾರಗಳಿಗೆ ಗೌಣ ಸ್ಥಾನ ದೊರತಿದೆ. ಆಧುನಿಕ ಮನೋಭಾವದವರಿಗೆ ಇದು ಸುಲಭವಾಗಿ ತೋರಿದ್ದು ಸಹಜವೇ, ಏಕೆಂದರೆ ಮನಸ್ಸಿಗೆ ತತ್ವಜ್ಞಾನದ ಸೂಕ್ಷ್ಮತೆಗಳು ವಿಶಾಲವಾದ ಆಧ್ಯಾತ್ಮಿಕ ಅನುಸಂಧಾನ ಇವೆಲ್ಲ ಸಹಜವಾಗಿ ಬೇಡದ ಸಂಗತಿಗಳೇ ಕರ್ತವ್ಯ–ಕರ್ಮ–ಕಾಯಕದ ಬೆನ್ನು ಹತ್ತಿದ ಮನಸ್ಸು, ಅರ್ಜುನನಂತೆ ಸುಲಭವಾದ ಮಾರ್ಗವನ್ನು ಹುಡುಕುವುದು ಸ್ವಾಭಾವಿಕ ಆದರೆ ಗೀತೆಯಂಥ ಮಹಾಗ್ರಂಥವನ್ನು ಅಲ್ಲಲ್ಲಿ ಕೈಯಾಡಿಸುವುದು ದೊಡ್ಡ ತಪ್ಪು. ಗೀತೆಯು ಬೋಧಿಸುವ ಸಮತ್ವವು ಅನಾಸಕ್ತಿಯಲ್ಲ ತನ್ನ ಉಪದೇಶವನ್ನೆಲ್ಲ ಕಟ್ಟಿಕೊಟ್ಟ ಮೇಲೆ ಅರ್ಜುನನಿಗೆ ನೀಡುವ ಮಹಾಸಂದೇಶವೇನೆಂದರೆ "ಏಳು! ಎದ್ದೇಳು!! ಶತ್ರುಗಳನ್ನು ಸಂಹರಿಸಿ ಸಮೃದ್ಧವಾದ ರಾಜ್ಯವನ್ನು ಭೋಗಿಸು" ಇದು ಕೇವಲ ನಿಸ್ವಾರ್ಥ, ಅನಾಸಕ್ತಿಯ ಪರೋಪಕಾರದ ಶುದ್ಧ ಸನ್ಯಾಸದ ಧ್ವನಿಯಲ್ಲ ಇದು ಆಧ್ಯಾತ್ಮಿಕ ಮುಕ್ತಿಯ ಆಧಾರವಾದ ಆಂತರಿಕ ಸ್ಥೈರ್ಯ ಮತ್ತು ವಿಶಾಲ ಪ್ರಜ್ಞೆಯ

ಸ್ಥಿತಿ. ಆಧ್ಯಾತ್ಮಿಕ ಸ್ಥಿರತೆಯ ಮೂಲಕ ನಾವು ನಮ್ಮ ನಮ್ಮ ಕೆಲಸಗಳನ್ನು ಮಾಡಬೇಕು, ಕಾರ್ಯ ಕರ್ಮವೆಂಬುದನ್ನು ಗೀತೆಯಲ್ಲಿ ಬಹಳ ವ್ಯಾಪಕ ಅರ್ಥದಲ್ಲಿ ಹೇಳಲಾಗಿದೆ. ಸಾಮಾಜಿಕ ನೈತಿಕ ಕರ್ತವ್ಯಗಳಲ್ಲದೇ ಸರ್ವಕರ್ಮಣಿ ಎಲ್ಲ ಕರ್ಮಗಳೂ ಇದರಲ್ಲಿ ಸೇರಿಕೊಳ್ಳುತ್ತವೆ. ಮಾಡಬೇಕಾದ ಕರ್ಮ ಯಾವುದು? ಇಲ್ಲಿ ವೈಯಕ್ತಿಕ ಆಯ್ಕೆ ಸಲ್ಲದು, ವೈಯಕ್ತಿಕ ಬೇಕು ಬೇಡಗಳ ಮೂಲಕ ಕರ್ತವ್ಯ ಕರ್ಮವನ್ನು ನಿರ್ಣಯಿಸುವಂತಿಲ್ಲ. ಕರ್ಮಣ್ಯೇವಾಧಿಕಾರಸ್ತೇ ಮಾಫಲೇಶು ಕದಾಚನ ಇದು ಗೀತೆಯ ಮಹಾವಾಕ್ಯವಲ್ಲ! ಕರ್ಮ ಮಾಡುವುದಷ್ಟೇ ನಮಗೆ ಸೇರಿದ್ದು, ಫಲಾಫೇಕ್ಷೆ ತಪ್ಪು ಎಂಬುದು ಗೀತೆಯ ಚರಮ ಸಂದೇಶವಲ್ಲ!! ಅದೊಂದು ಪ್ರಾರಂಭದಲ್ಲಿ ಪ್ರಾಸ್ತಾಪವಾಗುವ ವಿಚಾರ ಅಷ್ಟೇ. ಯೋಗಾಭ್ಯಾಸ ಆರಂಭ ಮಾಡಿದ ಸಾಧಕನಿಗೆ ಆರಂಭದಲ್ಲಿ ಹೇಳುವ ವಾಕ್ಯ. ಅದು ಸಾಧನೆ ಮುಂದುವರಿದಂತೆ, ಯೋಗಾಭ್ಯಾಸದ ಪಥದಲ್ಲಿ ಮುಂದೆ, ಮಾನವನೇ ಕರ್ಮದ ಕತೃ ಅಲ್ಲ, ಕರ್ಮವು ಪ್ರಕೃತಿಯ ಸ್ವಾಭಾವಿಕ ಧರ್ಮ ಎಂದು ಪ್ರಕೃತಿಯೇ ಮಾನವನ ಮೂಲಕ, ಜೀವಿಯ ಮೂಲಕ ಕರ್ಮ ಮಾಡುವುದೆಂದು ಗೀತೆ ಸ್ಪಷ್ಟವಾಗಿ ಹೇಳುತ್ತದೆ. ತ್ರಿಗುಣಾತ್ಮಕವಾದ ಪ್ರಕೃತಿಯು ಮಾನವನ ಮೂಲಕ ಕರ್ಮ ಮಾಡುವುದು, ಪ್ರಕೃತಿಯೇ ಕತೃ ಎಂದು ಸಾರಿ ಹೇಳುತ್ತದೆ. ಸಾಧಕನಾದವನು ತಾನು ಕತೃವಲ್ಲ, ಪ್ರಕೃತಿಯ ಅನುವರ್ತಿ ಆದ್ದರಿಂದ ತಾನೇ 'ಕರ್ತಾಹರಿ' ಎಂದು ಭಾವಿಸಬಾರದೆಂದು ಗೀತೆ ಮುಂದೆ ಆದೇಶಿಸುತ್ತದೆ. ಕರ್ಮದ ಅಧಿಕಾರ ಎಲ್ಲಿಯವರೆಗೆ? ನಾನು ಕರ್ಮ ಮಾಡುತ್ತೇನೆ ಎಂಬ ಭಾವ ಇರುವವರೆಗೆ. ಆ ಭಾವ ಮರೆಯಾದರೆ ಕರ್ಮಫಲ ಬಿಡಿ, ಕರ್ತೃಭಾವವೂ ಹೋಗಿ ಬಿಡುವುದಲ್ಲ. ಆಗ ವ್ಯಾವಹಾರಿಕ ಅಹಂ ಅಳಿದು ಹೋಗುವುದು ಕರ್ಮದ ಅಧಿಕಾರ ಕರ್ಮ ಫಲದ ಅಪೇಕ್ಷೆ ಎಲ್ಲಾ ಹೋಗಿ ಬಿಡುವುದು.

ಹಾಗೆಂದು ಪ್ರಕೃತಿಯೇ ಅಂತಿಮ ಎಂದೂ ಗೀತೆ ಹೇಳುವುದಿಲ್ಲ. ಬುದ್ಧಿಯ ಸಮತೆ ಮತ್ತು ಕರ್ಮಫಲ ತ್ಯಾಗಗಳು ಕೇವಲ ಸಾಧನಗಳಷ್ಟೇ, ದೈವೀ ಪ್ರಜ್ಞೆಯಲ್ಲಿ ಮನ ಪ್ರಾಣಗಳ ಮೂಲಕ ಪ್ರವೇಶಿಸುವ ದಾರಿ ಅಷ್ಟೇ. ದೈವೀ ಪ್ರಜ್ಞೆಯನ್ನು ಅರ್ಥೈಸಿಕೊಂಡು, ಅಳವಡಿಸಿಕೊಂಡು, ಅದರಲ್ಲೇ ಜೀವಿಸುವುದೇ ಪರಮ ಧ್ಯೇಯ ಮತ್ತು ಆ ದಿಶೆಯಲ್ಲಿ ಇವು ಕೇವಲ ಮಾರ್ಗಗಳು ಮಾತ್ರ ಎಂದು ಗೀತೆ ಹೇಳುತ್ತದೆ. ಎಲ್ಲಿಯವರೆಗೆ ಆ ದೈವೀ ಪ್ರಜ್ಞೆಯಲ್ಲಿ ಪ್ರವೇಶಿಸುವುದು ಸಾಧಕನಿಗೆ

ಸಾಧ್ಯವಾಗುವುದಿಲ್ಲವೋ, ಅಲ್ಲಿಯವರೆಗೆ ಅವನು ಈ ಮಾರ್ಗಗಳನ್ನು ಅಭ್ಯಾಸ ಮಾಡಬೇಕು. ಪ್ರಜ್ಞಾಪೂರ್ವಕವಾಗಿ ಅನುಷ್ಠಾನದಲ್ಲಿ ತರಬೇಕು ಎಂದು ಗೀತೆ ಹೇಳುವುದು. ಇದು ಉನ್ನತ ಪ್ರಜ್ಞೆಗೆ ಏರುವ ಮಾರ್ಗ.

**ಪರಮಾತ್ಮನೆಂದರೆ ಯಾರು?**

ತಾನೇ ಈಶ್ವರ ಎಂದು ಶ್ರೀ ಕೃಷ್ಣ ಹೇಳುತ್ತಾನಲ್ಲ, ಆ ಈಶ್ವರ ಯಾರು? ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಅವನು ಪುರುಷೋತ್ತಮ ಅಂದರೆ ಅವನು ನಿಶ್ಚಲನಾಗಿರುವ ಕರ್ತೃ ಅಲ್ಲದಿರುವ ಜೀವಾತ್ಮನಿಗಿಂತಲೂ ಭಿನ್ನ. ಅದೇ ರೀತಿ ಕರ್ಮ ಮಾಡುವ ಪ್ರಕೃತಿಗಿಂತ ಭಿನ್ನ ಅವೆರಡಕ್ಕಿಂತ ಮೇಲಿರುವವನು, ಅವುಗಳಿಗೆ ಅತೀತನಾಗಿರುವವನು. ಅವನು ವಿಶ್ವ ಅಭಿವ್ಯಕ್ತಿಯೆ ಆಧಾರ ಹಾಗೂ ಪ್ರಕೃತಿಯೆ ಪ್ರಭು, ಇಡೀ ಸೃಷ್ಟಿಗೆ ಅವನೇ ಒಡೆಯ, ಮಾಯಾವರ್ತಿಯಾಗಿರುವ ನಮ್ಮ ಹೃದಯದಲ್ಲಿ ಸ್ಥಿತನಾಗಿರುವ ಅವನೇ ಪ್ರಕೃತಿಯೆ (ಅಂದರೆ ನಮ್ಮ) ಎಲ್ಲಾ ಕರ್ಮಗಳನ್ನು ನಿಯಂತ್ರಿಸುತ್ತಾನೆ, ಅವನೇ, ಅವನೇ ಕುರು ಕ್ಷೇತ್ರದಲ್ಲಿ ಯುದ್ಧಗೈಯಲು ಬಂದಿರುವ ಸಮಸ್ತ ಯೋಧರನ್ನು ಈ ಮೊದಲೆ ಹತ ಗೈದಿದ್ದಾನೆ, ಆದರೂ ಅವರಿನ್ನೂ ಅರ್ಜುನನ ಮುಂದೆ ಯುದ್ಧ ಸನ್ನದ್ಧರಾಗಿ ನಿಂತಿದ್ದಾರೆ, ಅರ್ಜುನನು ನೆಪ ಮಾತ್ರ ನಿಮಿತ್ತ ಮಾತ್ರ ಮಹಾಯುದ್ಧದಲ್ಲಿ ಅರ್ಜುನನೂ ಸಹ ಒಂದು ಉಪಕರಣ ಮಾತ್ರನೇ ಪ್ರಕೃತಿ ಎಂಬುದು ಪುರುಷನ ಕಾರ್ಯಕಾರಿ ಶಕ್ತಿ ಸಾಧಕನು ಪ್ರಕೃತಿಯನ್ನು ಮೀರಿ ಬೆಳೆಯಬೇಕು. ಪ್ರಕೃತಿಯ ಸತ್ವರಜ ತಮಗಳೆಂಬ ತ್ರಿಗುಣಗಳನ್ನು ಮೀರಿ ಬೆಳೆಯಬೇಕು, ಅವನು ತ್ರಿಗುಣಾತೀತನಾಗಬೇಕು, ಅವನು ಪ್ರಕೃತಿಗೆ ತನ್ನ ಕರ್ಮಗಳನ್ನು ಒಪ್ಪಿಸಬೇಕಾಗಿಲ್ಲ. ಏಕೆಂದರೆ ಅವುಗಳು ಅವನವಲ್ಲ, ಅವುಗಳ ಮೇಲೆ ಅವನಿಗೆ ಅಧಿಕಾರವಿಲ್ಲ. ಬದಲಾಗಿ ಅವನು ಪುರುಷೋತ್ತಮನಲ್ಲಿ ಶರಣಾಗತಿ ಪಡೆಯಬೇಕಾಗಿದೆ. ಅಲ್ಲಿ ಅವನ ಸಮರ್ಪಣೆ ಅವಶ್ಯವಾಗಿದೆ. ತನ್ನ ಮನಸ್ಸು, ವಿಚಾರ ಮತ್ತು ತಿಳುವಳಿಕೆಗಳನ್ನು ಪುನರೂಪಿಸಿ, ಹೃದಯ ಮತ್ತು ಸಂಕಲ್ಪಗಳನ್ನೂ ಪರಮಾತ್ಮಾನಲ್ಲಿ ಇರಿಸಿ, ಆತ್ಮಜ್ಞಾನ – ಭಗವಂತನ ಬಗೆಗಿನ ಜ್ಞಾನ ವಿಶ್ವ–ಜ್ಞಾನ ಜೊತೆಗೆ ಪರಿಪೂರ್ಣವಾದ ಸಮತ್ವ ಪರಿಪೂರ್ಣ ಭಕ್ತಿ ಸಂಪೂರ್ಣ ಶರಣಾಗಲಿ, ಇವುಗಳ ಮೂಲಕ ಕರ್ಮಗಳನ್ನು ಮಾಡುತ್ತ ಭಗವಂತನಿಗೆ ಅರ್ಪಿಸಬೇಕು. ಅವನೇ ಎಲ್ಲ ಜೀವಿಗಳ ಮತ್ತು ಕರ್ಮಗಳ

ಒಡೆಯನಾಗಿದ್ದಾನೆ ಸಮಸ್ತ ಯಜ್ಞ(ಕರ್ಮ)ದ ಪ್ರಭು ಅವನೇ ಆಗಿದ್ದಾನೆ. ಪುರುಷೋತ್ತಮನ ಸಂಕಲ್ಪದ ಜೊತೆ ತನ್ನ ಸಂಕಲ್ಪವನ್ನು ಸೇರಿಸಿ, ಅವನ ಪ್ರಜ್ಞೆಯ ಜೊತೆ ತನ್ನ ಪ್ರಜ್ಞೆಯನ್ನು ಜೊತೆ ಏಕರೂಪಗೊಳಿಸಿ ಕಾರ್ಯ ಮಾಡಬೇಕು. ಅದು ಸಾಧಕನ ಕರ್ಮಗಳ ಪ್ರೇರಕ ಹಾಗೂ ಚಾಲಕ ಶಕ್ತಿಯಾಗಬೇಕು ಇದೇ ನಿಜವಾದ ಪರಿಹಾರ ಈ ಪರಿಹಾರವನ್ನೇ ದಿವ್ಯಾ ಗುರು ತನ್ನ ಶಿಷ್ಯನಿಗೆ ನೀಡುತ್ತಿದ್ದಾನೆ. ಗೀತೆಯ ಮಹಾವಾಕ್ಯ ಯಾವುದೆಂದು ನಾವು ಶೋಧಿಸುವ ಅಗತ್ಯವಿಲ್ಲ. ಚಿಂತಿಸುವ ಅಗತ್ಯವಿಲ್ಲ, ಕೊನೆಗೆ ಎಲ್ಲ ಉಪದೇಶದ ಅಂತಿಮ ಅಥವಾ ಸಾರ ರೂಪ ಘೋಷಣೇಯಲ್ಲಿ ಗೀತೆಯೇ ಹೇಳುತ್ತದೆ, ಪರಮಾತ್ಮನನ್ನು ನಿನ್ನ ಹೃದಯದಲ್ಲಿ ಸ್ಥಾಪಿಸಿಕೊಂಡು ಅವನಿಗೆ ಸಂಪೂರ್ಣವಾಗಿ ಶರಣು ಹೋಗು. ಅವನ ಕೃಪೆಯೆ ಮೂಲಕ ನೀನು ಪರಮ ಶಾಂತಿಯನ್ನು ಪಡೆಯುವಿರಿ, ಪರಮ ಪದವಿಯನ್ನು ಸಹ ಹೊಂದುವಿ. ಅತ್ಯಂತ ಗುಹ್ಯತಮವಾದ ಅತ್ಯಂತ ರಹಸ್ಯವಾದ ಯಾರಿಗೂ ನಾನು ಹೇಳದಿರುವ ಪರಮ ಜ್ಞಾನವನ್ನೂ ನಾನೀಗ ನಿನಗೆ ಕೊಟ್ಟಿದ್ದೇನೆ. ಇನ್ನೂ ರಹಸ್ಯವಾದ ಕಿವಿ ಮಾತೊಂದನ್ನು ಹೇಳುತ್ತೇನೆ ಕೇಳು. ಇದು ನನ್ನ ಪರಾವಚನ ಮನ್ಮನಾಭವ, ನನ್ನನ್ನು ಭಕ್ತಿಯಿಂದ ನೆನೆ, ನನಗೆ ಎಲ್ಲಾವನ್ನೂ ಸಮರ್ಪಿಸು, ನನಗೆ ಶರಣು ಬಾ, ನೀನು ಖಂಡಿತವಾಗಿಯೂ, ನಿಸ್ಸಂದೇಹವಾಗಿ ನನ್ನನ್ನೇ ಬಂದು ಸೇರುವಿ. ನೀನು ನನಗೆ ಅತ್ಯಂತ ಪ್ರಿಯನಾದವನು, ಹೇಳುತ್ತೇನೆ ಕೇಳು ಸರ್ವ ಧರ್ಮಗಳನ್ನು (ಕರ್ತವ್ಯ ಕರ್ಮಗಳ ಜಂಜಾಟವನ್ನೂ) ಬಿಟ್ಟು ನನ್ನನ್ನೇ–ನನ್ನನ್ನು ಮಾತ್ರ ಸಮರ್ಪಣಾ ಭಾವದಿಂದ ಭಜಿಸು. ನನಗೆ ಶರಣು ಬಾ, ನಾನೇ ನಿನ್ನನ್ನು ಎಲ್ಲ ಪಾಪಗಳಿಂದ ಮುಕ್ತನನ್ನಾಗಿ ಮಾಡುತ್ತೇನೆ, ಚಿಂತಿಸಬೇಡ. ಮಾನವನ (ಅಥವಾ ಸಾಧಕನ) ಕರ್ಮವು ಕೆಳಗಿನ ಮಾನವೀಯ ಸ್ತರದಿಂದ ದೈವೀ ಸ್ತರಕ್ಕೆ ಏರಲು, ಗೀತೆಯು ಮೂರು ಹಂತಗಳನ್ನೂ ಹೇಳುತ್ತದೆ. ಮೊದಲನೆಯದಾಗಿ, ಕರ್ಮಗಳೆಲ್ಲ ಯಜ್ಞವೆಂದು ಭಾವಿಸಿ ಎಲ್ಲ ಕಾರ್ಯಗಳಲ್ಲಿ ಸಮತೆ ಕಾಯ್ದುಕೊಳ್ಳಬೇಕು. ಪರಮ ಪುರುಷನಾದ ಈಶ್ವರನಿಗೆ ಎಲ್ಲವನ್ನು ಸಮರ್ಪಿಸಬೇಕು. ಆ ಪುರುಷೋತ್ತಮನೇ ಸರ್ವಾಂತರ್ಯಾಮಿಯಾದ ಅಭೀಪ್ಸೆಯಿಂದ ತನ್ನನ್ನು ಅರ್ಪಿಸಿಕೊಳ್ಳಬೇಕು. ಇದು ಮೊದಲನೆಯ ಹೆಜ್ಜೆ.

ಎರಡನೆಯದು, ಕೇವಲ ಬಯಕೆಯನ್ನಷ್ಟೇ ಅಲ್ಲ, ಕಾರ್ಯದ ಫಲವನ್ನು ಅರ್ಪಿಸಬೇಕು, ತಾನು ಕರ್ತೃ ಎಂಬ ಭಾವವನ್ನು ಕೂಡ ತ್ಯಾಗ ಮಾಡಬೇಕು,

ಪರಮಾತ್ಮನೇ ಸರ್ವವ್ಯಾಪಿಯಾದ ತತ್ವ. ನಿಶ್ಚಲ ಹಾಗೂ ನಿರ್ವಿಕಾರಿಯಾದ ತತ್ವ, ವಿಶ್ವ ವ್ಯಾಪಕವಾದ ಎಲ್ಲ ಕಾರ್ಯಗಳೂ ವಿಶ್ವ ಪ್ರಕೃತಿಯ ಕಾರ್ಯಗಳೇ ಆಗಿದ್ದು ಅದು ಎಲ್ಲರಲ್ಲೂ ಇದೆ. ಕ್ರಿಯಾಶೀಲವಾಗಿದೆ, ಅದು ಬದಲಾವಣೆ ಹೊಂದುವದು ಎಂಬುದನ್ನೂ ಅರಿತುಕೊಳ್ಳಬೇಕು. ಕೊನೆಯದಾಗಿ ಪರಮೋಚ್ಚ ಆತ್ಮನೆಂದರೆ ಪರಮಾತ್ಮನೇ ಪ್ರಕೃತಿವಶವಾದ ಜೀವ (ಜೀವಾತ್ಮ), ಅವನ ಅಂಶ ಪ್ರಕಟಣೆ ಅವನೇ ಸರ್ವ ಕರ್ತೃ, ಎಲ್ಲ ಕಾರ್ಯಗಳ ಕರ್ತೃ ಅವನೇ, ಅವನೇ ಎಲ್ಲ ಕೆಲಸ ಕಾರ್ಯಗಳನ್ನು ಯಜ್ಞವೆಂದು ಭಾವಿಸಿ ಅವನಿಗೆ ಅರ್ಪಣೆ ಮಾಡಬೇಕು, ನಮ್ಮ ಇಡೀ ಅಸ್ತಿತ್ವವನ್ನೇ ಅವನಿಗೆ ಸಮರ್ಪಿಸಬೇಕು, ನಮ್ಮ ಪ್ರಜ್ಞೆ ಸಂಪೂರ್ಣವಾಗಿ ಅವನ ಪ್ರಜ್ಞೆಯಲ್ಲೇ ನೆಲೆಸುವಂತಾಗಬೇಕು. ಅಂದಾಗ ಮಾತ್ರ ಅವನಂತೆ ವಿಶ್ವಾತೀತ ಸ್ಥಿತಿಯಲ್ಲಿ ನಿಲ್ಲಲು ಸಾಧ್ಯ. ಸಂಪೂರ್ಣ ಆಧ್ಯಾತ್ಮಿಕ ಸ್ವಾತಂತ್ರ್ಯದಲ್ಲಿ ಸಾಧ್ಯವಾಗುವುದು ಕಾರ್ಯ ಮಾಡಲು ಮೊದಲನೆಯ ಹೆಜ್ಜೆಯ ಕರ್ಮಯೋಗ, ನಿಸ್ವಾರ್ಥ ಮನೋಭಾವದಿಂದ ಕರ್ಮಗಳನ್ನೆಲ್ಲ ಪುರುಷೋತ್ತಮನಿಗೆ ಸಮರ್ಪಿಸಿ ಮಾಡುವ ಕಾರ್ಯ. ಇಲ್ಲಿ ಗೀತೆಯು ಕರ್ಮಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ಎರಡನೆಯದು ಜ್ಞಾನಯೋಗ, ಇದು ಆತ್ಮ ಸಾಕ್ಷಾತ್ಕಾರ, ಆತ್ಮದ ನಿಜವಾದ ಸಹಜ ಜ್ಞಾನ ಜೊತೆಗೆ ವಿಶ್ವದ ಜ್ಞಾನ ಕೂಡ ಇಲ್ಲಿ ಜ್ಞಾನದ ಮೇಲೆ ಒತ್ತು ಇದೆ, ಆದರೆ ಇಲ್ಲಿ ಕರ್ಮಗಳ ಸಮರ್ಪಣೆಯ ಅಂಶವೇನೊ ಮಾಯವಾಗುವುದಿಲ್ಲ, ಅದು ಇದ್ದೇ ಇರುತ್ತದೆ. ಜ್ಞಾನ ಯೋಗವೂ ಸಹ ಅರ್ಥ ಕರ್ಮ ಯೋಗವೇ ಆಗಿರುತ್ತದೆ. ಎರಡೂ ಒಂದಾಗಿರುತ್ತವೆ.

ಕೊನೆಯದು ಭಕ್ತಿಯೋಗ, ಇಲ್ಲಿ ಭಕ್ತಿ ಪರಮಾತ್ಮನಿಗಾಗಿ ಹಂಬಲ, ಅನ್ವೇಷಣೆ ಇರುವುದು, ಇಲ್ಲಿ ಭಕ್ತಿಗೆ, ಆರಾಧನೆಗೆ ಹೆಚ್ಚಿನ ಮಹತ್ವ ಇರುವುದು. ಹಾಗೆಂದು ಇಲ್ಲಿ ಜ್ಞಾನವೇನೊ ಗೌಣವಾಗುವುದಿಲ್ಲ, ಬದಲಾಗಿ ಅದು ಉನ್ನತೀಕೃತವಾಗುವುದು. ಅದರಲ್ಲಿ ಉತ್ಸಾಹ ತುಂಬುವುದು, ಅದೇ ರೀತಿ ಕರ್ಮ ಯೋಗವೂ ಸಹ ಅಂದರೆ ಕರ್ಮಗಳ ಸಮರ್ಪಣೆ ಕೂಡ ಮುಂದುವರಿಯುವುದು, ಹೀಗೆ ಯೋಗವು ಇಲ್ಲಿ ತ್ರಿ ಪಥಗಾಮಿನಿಯಾಗಿ ಮುಂದುವರಿಯುವುದು. ಆದರೆ ಯೋಗದುದ್ದಕ್ಕೂ ಸಾಧಕನ ಗುರಿಯಾಗಿದ್ದ ಯಜ್ಞ ಫಲವು ಕೃತಾರ್ಥವಾಗುವುದು ಪರಮಾತ್ಮನೊಡನೆ ಏಕತೆ ಹೊಂದಿ ಪರಾ ಪ್ರಕೃತಿಯ ಜೊತೆ ಒಂದಾಗುವುದು.

(ಸಶೇಷ)

ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

## "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

12

### ಅಧ್ಯಾಯ 8

### ಉಪಸಂಹಾರ

**ವಿಫಲತೆ ಎನ್ನುವದು ಅಪರಾಧವಲ್ಲ. ಆದರೆ ಕ್ಷೀಣ ಗುರಿ ಮಾತ್ರ ಅಪರಾಧ.**

* * * *

**ಉತ್ಥಾತವ್ಯ ಜಾಗೃತವ್ಯಂ ಯೋಕ್ತವ್ಯಂ ಭೂತಿಕರ್ಮಸು ।**
**ಭವಿಷ್ಯತೀತ್ಯೇವ ಮನಃ ಕೃತ್ವಾ ಸತತಮವ್ಯಥೈ**

**– ವ್ಯಾಸ ಮಹರ್ಷಿ**

ಮಹರ್ಷಿ ಅರವಿಂದ ಘೋಷರ ಚರಿತ್ರದ ಮಹತ್ವದ ಭಾಗವು ಇನ್ನು ಮುಂದೆ ಹೊರಗೆ ಬರತಕ್ಕದ್ದಿದೆ. ಭವಿಷ್ಯ ಕಾಲದ ಒಡಲೊಳಗೆ ಅದೃಶ್ಯವಾಗಿರುವ ಶ್ರೀ ಅರವಿಂದ ಯೋಗಿಗಳ ಅದ್ಭುತ ರಮ್ಯಚರಿತ್ರದ ಅನಾವರಣ ಸಮಾರಂಭವು ವೇಲಾ–ಪುರುಷನ (ವೇಳೆಯ) ಕೈಯಿಂದ ಆಗತಕ್ಕದ್ದಿದೆ. ಇದನ್ನು ಬೇಗನೇ ನೆರವೇರಿಸುವದಕ್ಕಾಗಿ ವೇಲಾ–ಪುರುಷನಿಗೆ ಆಗ್ರಹದಿಂದ ಸೂಚಿಸುತ್ತಿರುವರೂ ಏನೂ ಎನ್ನುವಂತೆ ಮಹಷಿಗಳ ಆಗಮನದ ವಿಷಯಕ್ಕೆ ಜನರು ಉತ್ಸುಕರಾಗಿದ್ದಾರೆ. ನಮ್ಮ ಚರಿತ್ರ ನಾಯಕರ ಆಯುಷ್ಯದ ಪ್ರವಾಹವು ತಿರುಗುತ್ತ ಒಮ್ಮೆ ತನ್ನ ನಿಜವಾದ ಸ್ಥಾನಕ್ಕೆ ಬಂತು. ಮೊದಲು **ರಾಜ್ಯಮಾನ್ಯ**ರಿದ್ದ ಅರವಿಂದರು ಈಗ **ಲೋಕಮಾನ್ಯ ಶ್ರೀ ಅರವಿಂದ**ರಾದರು. ಮುಂದೆ ಲೋಕಮಾನ್ಯತೆಯಲ್ಲಿಯೇ ಅವರಿಗೆ ತುಷ್ಟಿಯಾಗದೇ, ಮುಮುಕ್ಷುಗಳಾಗಿ ಸಾಧಕರಾದರು. ಈಗ ಈ ಸಾಧನಾವಸ್ಥೆಯು ಮುಗಿದು **'ಪೂರ್ಣ ಸಿದ್ಧಾವಸ್ಥೆ**ಯು ಪ್ರಾಪ್ತವಾಗಿದೆ. ಜೊತೆಗೆ ಸ್ವಾನುಭವದಿಂದ ಮನುಷ್ಯನ ಆದ್ಯ ಕರ್ತವ್ಯವು ಆತ್ಮಜ್ಞಾನವನ್ನು ಮಾಡಿಕೊಳ್ಳುವದೇ ಇರುತ್ತದೆಂದು ಹಲವು ರೀತಿಯ ಭಾಷೆಯಿಂದ ನಮ್ಮೆದುರಿಗೆ ಇಟ್ಟಿದ್ದಾರೆ.

ಮಹರ್ಷಿಗಳು ಹೇಳುವ ಮಾತುಗಳಲ್ಲಿ ಬಹುಭಾಗವು ಹಿಂದೂ ಜನರಿಗೆ ಪೂರ್ಣ ಪರಿಚಯದ್ದು ಇರುತ್ತದೆ. ವೈರಾಗ್ಯಪರ ವಿಚಾರಗಳೂ, ವೇದಾಂತದ

ಉದಾತ್ತ ತತ್ತ್ವಗಳ ಶಾಬ್ದಿಕ ಉಚ್ಚಾರವೂ ಅವರಿಗೆ ಗರ್ಭವಾಸದೊಳಗಿಂದಲೇ ಕೇಳಲಿಕ್ಕೆ ಸಿಗುತ್ತಿರುತ್ತದೆ. ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲ, ಆ ಜಗಚ್ಚಾಲಕನೇ ಎಲ್ಲವನ್ನೂ ಮಾಡಲಿಕ್ಕೆ ಸಮರ್ಥನು; ಮನುಷ್ಯನು ಆ ಸರ್ವೇಶನ ಇಚ್ಛೆಗಳನ್ನು ಪೂರ್ಣ ಮಾಡಲಿಕ್ಕೆ ನಿಮಿತ್ತ ಮಾತ್ರನಾಗಿರುವನು ಎಂದು ಮುಂತಾಗಿ ಹಿಂದುಸ್ಥಾನದ ಹಳ್ಳಿ–ಕೊಂಪೆಗಳೊಳಗಿನ ಹುಂಬರೂ ಮಾತಾಡುವರು. ಅಂದ ಬಳಿಕ ಶ್ರೀ ಅರವಿಂದ ಯೋಗಿಗಳು ಹೇಳಿದುದರಲ್ಲಿ ಇರುವ ನಾವಿನ್ಯತೆ ಏನು? ಸಾಧಾರಣವಾಗಿ ಅನೇಕರು “ನಮ್ಮ ಕೈಯಲ್ಲೇನೂ ಇಲ್ಲ, ದೇವರು ಮಾಡಿಸಿದ್ದನ್ನು ಮಾಡುತ್ತೇವೆ,” ಎಂದೆನ್ನುವರು; ಇದು ನಿಜವೂ ಹೌದು. ಆದರೆ ಈ ಜನರು ಅಜ್ಞಾನದಿಂದ ಹೀಗೆ ಅನ್ನುತ್ತಿರಬೇಕು, ಅಥವಾ ಠಕ್ಕತನದಿಂದ ವಂಚಿಸಲಿಕ್ಕೆ ಈ ಪ್ರಕಾರದ ಶಬ್ದ ಪ್ರಯೋಗಗವನ್ನು ಮಾಡುತ್ತಿರಬೇಕು. ಯಾಕೆಂದರೆ ಸ್ವಲ್ಪ ವಿಚಾರಿಸಿದರೆ, ಈ ಜನರು ಪೂರ್ಣವಾಗಿ ಈಶನ ಇಚ್ಛೆಗಳಲ್ಲಿ ವಿಲ್ಲೀನರಾಗಿರುವದಿಲ್ಲವೆಂದು ಕಂಡುಬರುವದು. ಮಹರ್ಷಿ ಅರವಿಂದರು, “ನನಗೆ ಸ್ವಂತದ ಇಚ್ಛೆಗಳಿಲ್ಲ. ನಾನು ಪರಮಾತ್ಮ ಕೈಯೊಳಗಿನ ಒಂದು ಆಯುಧವಾಗಿದ್ದು ಆತನ ಇಚ್ಛೆಗಳನ್ನು ಈಡೇರಿಸುವದರಲ್ಲಿ ನನ್ನ ಆಯುಷ್ಯದ ಉಪಯೋಗವಾಗತಕ್ಕದ್ದಿರುತ್ತದೆಂದು” ಅನ್ನುತ್ತಾರೆ. ಈ ಮಾತನ್ನು ಮಹರ್ಷಿಗಳು ಅನ್ನುವದರೊಳಗೂ, ಉಳಿದ ವಿಷಯ ಜಾಲದಲ್ಲಿ ತೊಳಲಾಡುವ ಜನ್ರು ಅನ್ನುವದರೊಳಗೂ ಬಹಳ ಅಭ್ಯಂತರವಿರುತ್ತದೆ. ವಿಶ್ವದಲ್ಲಿ ಬೆರೆತು ತದಾಕಾರವನ್ನು ಹೊಂದಲಿಕ್ಕೆ ಅಡ್ಡಬರುವ ಅಹಂಕಾರವನ್ನು ಸುಟ್ಟು ನಾಶ ಮಾಡಿ “ಸೋಹಮ್” ವೃತ್ತಿಯುಳ್ಳವರಾಗಿ ಶ್ರೀ ಅರವಿಂದ ಯೋಗಿಗಳು ಅನ್ನುವ ಮಾತಿದು. ಆದರೆ ಅದನ್ನೇ ವಿಪರೀತ ಅರ್ಥದಲ್ಲಿ ಹೀನವೃತ್ತಿಗಳ ದಾಸರಾಗಿರುವ ಜನರು ಅಜ್ಞಾನದಿಂದ ಅಥವಾ ವಂಚನೆಯಿಂದ ಉಚ್ಚರಿಸಿದರೆ ಹೇಗೆ ಯೋಗ್ಯವಾದೀತು? ಅರವಿಂದ ಯೋಗಿಗಳು ದಾಸರೂ, ನಿಮಿತ್ತ ಮಾತ್ರರು ಆಗಿರುವರು; ಮೇಲೆ ಹೇಳಿದಂಥ ಜನರು ಗುಲಾಮರೂ, ನಿಮಿತ್ತ ಕಾರಣರೂ ಆಗಿರುವರು. ಆದರೆ ಮೊದಲನೆಯವರು ಪರಮಾತ್ಮನ ಆದೇಶಗಳನ್ನು ಗ್ರಹಿಸಿ ಆಚರಿಸುವಲ್ಲಿ ತತ್ಪರರಾಗಿದ್ದರೆ, ಎರಡನೆಯ ವರ್ಗದವರು ತಮ್ಮ ಇಂದ್ರಿಯ ವಿಕಾರಗಳ ಅಪ್ಪಣೆಗಳನ್ನು ಅಮಲಿನಲ್ಲಿ ತರುವದರೊಳಗೆ ಮಗ್ನರಾಗಿರುತ್ತಾರೆ. ಯಾರ ಬುದ್ಧಿಯು ಯಾವಾಗಲೂ ತೀರ ಶುದ್ಧ ನಿರ್ಣಯವನ್ನೇ ಕೊಡುವದಿಲ್ಲವೋ, ಅಥವಾ ಯಾರ ಸ್ಫೂರ್ತಿಯು ಹಗಲೆಲ್ಲ ಪವಿತ್ರ ವಿಚಾರದ ಕಡೆಗೇ

ಇರುವದಿಲ್ಲವೋ, ಇಂತಹ ಜನರಿಗೆ, "ನನಗೆ ಈಗ ದೇವರು ಹೀಗೆ ಮಾಡಲಿಕ್ಕೆ ಬುದ್ಧಿಯನ್ನು ಕೊಟಿದ್ದಾನೆ, ನಾನು ಮಾಡುತ್ತೇನೆ" ಎಂದು ಹೇಳಲಿಕ್ಕೆ ಎಳ್ಳಷ್ಟೂ ಅಧಿಕಾರವಿಲ್ಲ. ಒಂದು ವೇಳೆ ಈ ಪ್ರಕಾರದ ಭಾಷೆಯನ್ನು ಉಪಯೋಗಿಸುತ್ತಿದ್ದರೆ ಅವರು ಅಜ್ಞಾನಿಗಳಾದರೂ ಇರಬೇಕು; ಅಥವಾ ಮೋಸಗಾರರಾದರೂ ಇರಲಿಕ್ಕೇ ಬೇಕು.

ಆದುದರಿಂದ ಯಾರಿಗೆ ಮಹರ್ಷಿಗಳ ಸಂದೇಶದಂತೆ ಪರಮೇಶನಲ್ಲಿ ತದಾಕಾರ ವೃತ್ತಿಯನ್ನು ಹೊಂದಿ ಆತನ ಇಚ್ಛೆಗಳೆ ತನ್ನ ಇಚ್ಛೆಗಳೆಂದು ಮಾಡಿಕೊಂಡು, ಸರ್ವೇಶನ ಆಜ್ಞಾನುಸಾರವವಾಗಿ ನಡೆಯುವ ಇಚ್ಛೆಯಿರುವದೋ ಅವರು ಹಿಂದೆ ಹೇಳಿದಂತೆ ಮುಂಚೆ ಆತ್ಮಶುದ್ಧಿಯನ್ನು ಮಾಡಿಕೊಳ್ಳಲಿಕ್ಕೇ ಬೇಕು. ಎಲ್ಲ ಇಂದ್ರಿಯಗಳಲ್ಲೂ ಮನಸ್ಸು ಶ್ರೇಷ್ಠವಾದದ್ದು, ಆದ್ದರಿಂದ ಮುಂಚೆ ಮನಸ್ಸಿನಿಂದಲೇ ಪ್ರಾರಂಭ ಮಾಡಬೇಕು. ಯಮ–ನಿಯಮಾದಿಗಳು ಮನಸ್ಸು ಅಂಕಿತವಾಗಬೇಕೆಂದೇ ಇರುತ್ತವೆ. ಕಾರಣ ಮುಂಚೆ ಮನಸ್ಸಿಗೆ ಕೈಹಾಕಬೇಕು. ಇದನ್ನು ಮಾಡುವ ಮುಂಚೆ ಮನಸ್ಸನ್ನು ಉಸುರುಗಟ್ಟುವ ಸಂಕುಚಿತ ವಾತಾವರಣದೊಳಗಿಂದ ಹೊರಗೆ ತೆಗೆದು ಅದಕ್ಕೆ ಸ್ವಾತಂತ್ರ್ಯದ ಶುದ್ಧ ಹವೆಯನ್ನು ಉಸುರಾಡಿಸಗೊಡಬೇಕು. ವ್ಯಕ್ತಿ ವಿಷಯಕ ಸಮಾಜ ವಿಷಯಕ ಅಥವಾ ಇತರ ಯಾವುದೇ ತರದ ಕ್ಷುಲ್ಲಕ ಕಲ್ಪನಾ ವಲಯದೊಳಗಿಂದ ಒಳ್ಳೇ ಎದೆಗಾರಿಕೆಯಿಂದ ಮೊದಲು ಹೊರಬಿದ್ದು ಹೊಸ ದೃಷ್ಟಿಯಿಂದ ಜಗತ್ತನ್ನು ನೋಡಲಿಕ್ಕೆ ಕಲಿಯಬೇಕು.

ಮಹರ್ಷಿಗಳ ಚರಿತ್ರದ ಫಲಶ್ರುತಿ ಯಾವುದು? ಅವರ ಉತ್ಕರ್ಷದ ರಹಸ್ಯವೇನು? ಧೈರ್ಯದಿಂದ ಶಾಸ್ತ್ರೋಕ್ತ ಮಾರ್ಗವನ್ನು ಸ್ವತಂತ್ರ ವಿಚಾರಪೂರ್ವಕವಾಗಿ ಅನುಸರಿಸುವದೇ ಅವರ ಚರಿತ್ರದ ರಹಸ್ಯವಾಗಿದೆ. ಹಲವರು ಉತ್ಕರ್ಷವನ್ನು ಮಾತ್ರ ಬಯಸುವರು. ಆದರೆ ಪ್ರಯತ್ನ ಮಾಡಲಿಕ್ಕೆ ಒಲ್ಲರು. ಆಯುಷ್ಯದ ಸಾಧ್ಯ–ಸಾಧನಗಳನ್ನು ನಿಶ್ಚಯಿಸದೇ **ಪ್ರವಾಹ ಪತಿತರಾಗಿ** ಐವತ್ತು ತಿರುಗಣಿಗಳಲ್ಲಿ ಸಿಕ್ಕುತ್ತ ಒದ್ದಾಡುತ್ತ ದಿನಗಳನ್ನು ಕಳೆಯುವರು. ಆಯುಷ್ಯದ ಸಾಧ್ಯವು ವಿಷಯ–ಭೋಗವೇ, ಪ್ರಜೋತ್ಪಾದನವೇ, ಧನಾರ್ಜನೆಯೇ, ಕೀರ್ತಿಯೇ, ವಿದ್ಯಾವ್ಯಾಸಂಗವೇ ಅಥವಾ ಇವೆಲ್ಲವುಗಳಿಂದ ಮತ್ತೇನಾದರೂ ಒಂದು ದೊಡ್ಡದಿದ್ದು ಅದನ್ನು ದೊರಕಿಸಿಕೊಳ್ಳುವದೇ? ಹೀಗೆ ಯಾವುದೆಂಬುದನ್ನು ಮುಂಚೆ ಸ್ಥಿರಪಡಿಸಿ, ಕಾರ್ಯಕ್ಕೆ ಹತ್ತಿದರೆ ಅದ್ಭುತ ಯಶಸ್ಸು ಸಿಕ್ಕಿತೋ ಇಲ್ಲವೋ ಎಂಬುದನ್ನು ತಿಳಿಯಲಿಕ್ಕೆ ಅನುಕೂಲವಾಗುವದು. ಮೊಟ್ಟಮೊದಲು

ಅಂತಃಶುದ್ಧಿಯನ್ನು ಮಾಡಿಕೊಂಡು ಅಥವಾ ಮಾಡಿಕೊಳ್ಳುತ್ತ ಯಾವುದೊಂದು ನಿಶ್ಚಿತ ಧ್ಯೇಯದ ಸಾಧನೆಗೆ ಪ್ರವರ್ತಿಸುವದು ಉಚಿತವು. ಧ್ಯೇಯವು ಧ್ರುವ ನಕ್ಷತ್ರದಂತೆ ಸ್ಥಿರವಾದದ್ದಿರಲಿಕ್ಕೇ ಬೇಕು. ಯಾವುದೇ ಧ್ಯೇಯದ ಸಿದ್ಧಿಗಾದರೂ ಶುದ್ಧವೂ, ಸಾತ್ವಿಕವೂ, ಪ್ರಶಾಂತವೂ ಆದ ಮನಸ್ಸಿನ ಅವಶ್ಯಕತೆ ಇರುತ್ತದೆ.

ಮೊದಲು ಆತ್ಯಂತಿಕ ಧ್ಯೇಯ ಯಾವುದೆನ್ನುವದನ್ನು ನಿಶ್ಚಯಿಸಿ, ಬಳಿಕ ಅದರ ಸಿದ್ಧಿಯವರೆಗಿನ ಮಧ್ಯದೊಳಗಿರುವ ಹಲವು ಮೆಟ್ಟುಗಳನ್ನು ಅಂದರೆ ತಾತ್ಕಾಲಿಕ ಸಾರ್ಧಯಗಳನ್ನು ಗೊತ್ತು ಮಾಡಿಕೊಳ್ಳಬೇಕು. ಈ ತಾತ್ಕಾಲಿಕ ಸಾಧ್ಯಗಳು ಪರಿಸ್ಥಿತಿಯಂತೆ ಬದಲಾಗುತ್ತಿರುತ್ತವೆ. ಇವುಗಳಿಗೆ ವಿಶೇಷವಾಗಿ ಅಂಟಿಕೊಳ್ಳದೇ ಆತ್ಯಂತಿಕ ಧ್ಯೇಯವು ಹೇಗೆ ಸಾಧ್ಯವಾದೀತೆಂಬುದರ ಕಡೆಗೆ ಸಂಪೂರ್ಣ ಚಿತ್ತವನ್ನಿಡಬೇಕು. ತಾತ್ಪೂರ್ತಿಕ ಸಾಧ್ಯಗಳು ಸಾಧನಗಳೆನ್ನುವದನ್ನು ಮರೆಯಕೂಡದು. ಆತ್ಯಂತಿಕ ಧ್ಯೇಯದ ಮಧ್ಯದೊಳಗಿನ ಕೆಲವು ಮೆಟ್ಟುಗಳೇ ಕಡೆಯವೆಂದು ತಿಳಕೊಂಡರೆ ಘಾತವಾಗುತ್ತದೆ.

ಆದುದರಿಂದ ಯಾರೇ ಆಗಲಿ, ತೀರ ಉಚ್ಚವಾದ ಹಾಗೂ ಸ್ಥಿರವಾದ ಆತ್ಯಂತಿಕ ಧ್ಯೇಯವನ್ನು ತಮ್ಮ ಎದುರಿಗೇ ಇಡಬೇಕು, ಕೆಲವು ಕ್ಷುದ್ರ ಜನರು ಅದಕ್ಕೆ ನಗಬಹುದು, ಅವರು ನಕ್ಕರೆ ನಗಲಿ. ಈ ಜಗತ್ತಿನೊಳಗೆ ಹೀಗೆ ಉಚ್ಚ ಧ್ಯೇಯದಿಂದ ಪ್ರೇರಿತರಾದವರಿಂದಲೇ ಏನಾದರೂ ಅಲ್ಪಸ್ವಲ್ಪ ಮಹತ್ಕಾರ್ಯಗಳು ಆಗಿರುತ್ತವೆ ಎನ್ನುವದು ಆ ಮಂದಮತಿಗಳಿಗೇನು ಗೊತ್ತು? ಹೆಂಡರು–ಮಕ್ಕಳ ಮೋಹದೊಳಗಿಂದ, ಲಕ್ಷ್ಮಿಯ ಮದದೊಳಗಿಂದ, ಅಧಿಕಾರದ ಗಮಜಿನೊಳಗಿಂದ ಅಥವಾ ಅಲ್ಪವಿದ್ಯೆಯ ಮಹಾಗರ್ವದೊಳಗಿಂದ ಹೊರಗೆ ಬಂದು ವಿಚಾರಿಸಲು ಅಸಮರ್ಥರಾದ ಕ್ಷುದ್ರ ಪ್ರಾಣಿಗಳ ಚೇಷ್ಟೆಗೆ ಭಯಪಟ್ಟು ಆತ್ಮನಾಶವನ್ನು ಮಾಡಿಕೊಳ್ಳುವದು ಲೇಸಾದೀತೇ? ಧ್ಯೇಯವು ದೊಡ್ಡದಿರುವದೆಂದು ಬೆದರಿ ಫಲವಿಲ್ಲ. ಪೂರ್ಣ ಮಾಡುವ ಹುಚ್ಚು ಹತ್ತಲಿ. ಈ ಹುಚ್ಚು ಕಾರ್ಯವನ್ನು ತಾನೇ ಮಾಡಿಸುವದು. ಶ್ರೀ ಅರವಿಂದ ಯೋಗಿಗಳು ತಮಗೆ ದೇವರನ್ನು ಕಾಣುವ ಹುಚ್ಚು ಹಿಡಿದಿದೆ ಎಂದು ಪತ್ನಿಗೆ ತಿಳಿಸಿದ್ದರು. ಆ ಹುಚ್ಚು ಅವರನ್ನು ಇಂದು ಮಹರ್ಷಿಗಳನ್ನಾಗಿಸಿದೆ. ಕೌಂಟಝುವೆಲ್ಲಿನನ ವಿಮಾನದ ಹುಚ್ಚು ಇಂದು ವಿಮಾನಗಳಲ್ಲಿ ಅಸ್ತಿತ್ವದಲ್ಲಿ ತಂದಿತು. ಯಾವುದೇ ಕೃತ್ಯವು ಮೂರ್ತ ಸ್ವರೂಪವನ್ನು ಧರಿಸಿ ಭೂಲೋಕದಲ್ಲಿ ಬರುವ ಮೊದಲು ಕಲ್ಪನಾ ಸೃಷ್ಟಿಯಲ್ಲಿ ಉದಿಸುವದು. ಇಂದಿನ ಜೀವಂತ ವಿಚಾರಗಳು ನಾಳಿನ ಜಗತ್ತಿನಲ್ಲಿ ಮೂರ್ತ

ಸ್ವರೂಪವನ್ನು ಹೊಂದುವವು. ಬ್ರಹ್ಮನು ಸೃಷ್ಟಿಯನ್ನು ಸೃಜಿಸುವ ಮೊದಲು ಸಂಕಲ್ಪವನ್ನು ಮಾಡಿದನು; ಬಳಿಕ ಸೃಷ್ಟಿಯಾಯಿತು ಎಂದು ನಮ್ಮ ಶಾಸ್ತ್ರಗಳೂ ಹೇಳುತ್ತಿವೆ. ಅಂದ ಮೇಲೆ ದಿವ್ಯವೂ, ಪವಿತ್ರವೂ, ಸ್ಥಿರವೂ, ಅತ್ಮೋನ್ನತಿಕರವೂ ಆದ ಅತ್ಯುದಾತ್ತ ಧ್ಯೇಯವನ್ನು ಪ್ರತಿಯೊಬ್ಬನೂ ತನ್ನೆದುರಿಗೆ ಇಟ್ಟುಕೊಂಡು ಅದರ ಸಾಧನೆಯಲ್ಲಿಯೇ ಆಯುಷ್ಯವನ್ನು ಕಳೆಯುವದು ಕರ್ತವ್ಯವಲ್ಲವೇ?

ಕರ್ಮವು ಜಡವು. ಅದಕ್ಕೆ ಉಚ್ಚ–ನೀಚತ್ವಗಳೇನೂ ಇಲ್ಲ, ಅದು ಕರ್ತೃವಿನ ಭಾವನೆಯನ್ನು ಅವಲಂಬಿಸಿದೆ. ನೀರಿಗೆ ಬಣ್ಣವಿರುವದಿಲ್ಲ. ಹಾಕಿದ ಬಣ್ಣವೇ ನೀರಿನದು. ಕೃಷ್ಣನು ರಾಜಸೂಯ ಯಾಗದಲ್ಲಿ ಮುಸುರೆಯನ್ನು ಬಳಿದನೆಂದೂ, ಯುದ್ಧದಲ್ಲಿ ಸಾರಥಿಯಾಗಿದ್ದನೆಂದೂ ಯಾರೂ ದೂಷಿಸುವದಿಲ್ಲ. ರಾಮನು ಗೊಲ್ಲತಿಯ ಎಂಜಲದ ಬೋರೆಹಣ್ಣುಗಳನ್ನೂ ತಿಂದನೆಂದು ಯಾರೂ ನಿಂದಿಸಿಲ್ಲ. ನಿಂದೆ ಅಥವಾ ದೂ಼ಷಣೆಯು ಆ ಕರ್ಮವನ್ನು ಹೀನ ಭಾವನೆಯಿಂದ ಮಾಡಿದರೆ ಮಾತ್ರ ಬರುತ್ತದೆ. ಆದುದರಿಂದ ಪ್ರತಿಯೊಬ್ಬರೂ ತಮ್ಮಲ್ಲಿರುವ ಯೋಗ್ಯತೆಯಂತೆ ಅನುಕೂಲವಿರುವ ಪರಿಸ್ಥಿತಿಯಂತೆ ಆತ್ಯಂತಿಕ ಧ್ಯೇಯದ ಸಾಧನೆಗೆ ಯತ್ನಿಸುವಾಗ, ನಿಂದಕರನ್ನು ಲಕ್ಷಿಸದೇ ತಮಗೆ ಸಾರ್ಥಯವಿರುವ ಮಾರ್ಗದಿಂದ ಹೋಗಲಿಕ್ಕೆ ಅಡ್ಡಿಯಿಲ್ಲ. ಸರ್ವೇಶ್ವರನನ್ನು ತಮ್ಮ ಕರ್ಮಮಯ ಪುಷ್ಪಗಳಿಂದ ಆರಾಧಿಸುವ ಅಧಿಕಾರವು ಪ್ರತಿಯೊಬ್ಬರಿಗೂ ಇರುತ್ತದೆ. ಪರಮಾತ್ಮನಿಗೆ ಗುಲಾಬಿ ಹೂವಿನಂತೆಯೇ ಮಲ್ಲಿಗೆಯ ಅಥವಾ ಚೆಂಡು ಹೂವೂ ಸೇರುತ್ತದೆ. ಅದನ್ನು ಏರಿಸುವವನ ಭಕ್ತಿಯ ಮೇಲೆ ಎಲ್ಲವೂ ಅವಲಂಬಿಸಿದೆ. ಕಾವ್ಯಶಕ್ತಿ ಇದ್ದವನು ಕವಿತ್ವದಿಂದಲೂ, ಚಿತ್ರಲೇಖನು ಕುಶಲ ಚಿತ್ರಕಲೆಯಿಂದಲೂ, ಗಾಯಕನು ಗಾಯನದಿಂದಲೂ, ಮಾತುಗಾರನು ವಕ್ತೃತ್ವದಿಂದಲೂ ಹೀಗೆ ಯಾವ ಶಕ್ತಿಯೇ ಇರಲಿ, ತದ್ವಾರವಾಗಿ ಪರಮಾತ್ಮನ ಸೇವೆಯನು ಮಾಡಲಿಕ್ಕೆ ಬರುತ್ತದೆ. ಆದರೆ ದೇವದತ್ತ ಶಕ್ತಿಗಳ ದುರುಪಯೋಗವನ್ನು ಮಾಡಿಕೊಳ್ಳಕೂಡದು. ಸ್ವಂತದ ಪ್ರತಿಷ್ಠೆಯನ್ನು ಬೆಳೆಸಲಿಕ್ಕೆ ಇಲ್ಲವೆ ಪರಪೀಡನೆಯ ಸಲುವಾಗಿ ಬಳಸಿದರೆ, ಅಥವಾ ಇತರ ಕ್ಷುದ್ರ ರೀತಿಯಲ್ಲಿ ಆ ಶಕ್ತಿಯ ಉಪಯೋಗವನ್ನು ಮಾಡಿಕೊಂಡರೆ ಅದು ಪಾಪವಾಗಿರುತ್ತದೆ. ಏನನ್ನೇ ಮಾಡಿದರೂ ಪರಮೇಶ್ವರನಿಗೇ ಮುಟ್ಟಲೆಂಬ ಬುದ್ಧಿಯಿಂದ ಆರಂಭಿಸತಕ್ಕದ್ದು. ಹೆಂಡರು–ಮಕ್ಕಳ ಹೊಟ್ಟೆಗೆ ಹಾಕಲಿ, ಕಬೀರನಂತೆ ಸಂತಸಜ್ಜನರ ಸಲುವಾಗಿ ತುಡುಗು ಮಾಡಲಿ, ದಿಲೀಪನಂತೆ ಆಕಳಿನ ಸಲುವಾಗಿ ಆತ್ಮಾರ್ಪಣ ಮಾಡಲಿ, ಏನು ಮಾಡಿದರೂ ಅದರ

ಮೂಲಭೂತ ಕಲ್ಪನೆಯು, “ಇದು ಸರ್ವೇಶ್ವರನ ಸೇವೆಯೆಂದೇ” ಇರತಕ್ಕದ್ದು. ಆದರೆ ಇದಕ್ಕೆ ವಿಪರೀತವಾಗಿ ಎಲ್ಲಿ ವೈಯಕ್ತಿಕ ಅಥವಾ ಸಣ್ಣಪುಟ್ಟ ಸಮಾಜದ ಇಲ್ಲವೇ ಜಾತಿಯ ಹಿತಕ್ಕೆಂಬ ಭಾವನೆಯಿಂದ ಎಂಥ ಸಾಹಸವನ್ನು ಮಾಡಿದರೂ ಅದು ನಿರರ್ಥಕವೇ ಆಗಿರುತ್ತದೆ, ನಿಂದ್ಯವೂ ಮತ್ತು ಪಾಪಕರವೂ ಆಗಿರುತ್ತದೆ.

ಶ್ರೀ ಅರವಿಂದ ಮಹರ್ಷಿಗಳ ಈ ಸಂದೇಶವನ್ನು ಗ್ರಹಿಸಿ ಪಚನ ಮಾಡಿಕೊಂಡು ಅದನ್ನು ಕೃತಿಯಲ್ಲಿ ತರಲಿಕ್ಕೆ ಬಂಧುಗಳೇ ಸಿದ್ಧರಿರುವಿರೇನು? ಏಳಿರಿ. ನಿದ್ರೆ ಸಾಕು. ಸ್ವಾರ್ಥದ ಬಡಿದಾಟಗಳನ್ನು ಸುಟ್ಟುಬಿಡುವ ಮಹರ್ಷಿ ಅರವಿಂದ ಘೋಷರ ಈ ಸಂದೇಶ ಗ್ರಹಣ ಮಾಡಿ ಕಾರ್ಯಕ್ಕೆ ತೊಡಗಿದರೆ, ಆಗ ಯಾವ ಜಾತಿಯ ಅಥವಾ ಪಂಥದ ಪ್ರಶ್ನೆಗಳೂ ಅಡ್ಡ ಬರುವದಿಲ್ಲ. ಯಾಕೆಂದರೆ ಇದು ಅಷ್ಟು ಉದಾತ್ತವಾಗಿದೆ. ಇದು ದೇವರ ಆದೇಶವಾಗಿದೆ. ಇದು ಮಾನವ ಕುಟುಂಬದ ಹಿತದ ಬೀಜಮಂತ್ರವಾಗಿದೆ. ಸ್ವಾರ್ಥ ಸಾಧಕರ ಬೆನ್ನು ಹತ್ತುವದು ಸಾಕು. ಮಹರ್ಷಿಗಳ ಕಣ್ಣೆದುರಿಗೇ ಒಂದೇ ಜಾತಿಯ ಹಿತವಿಲ್ಲ; ಒಂದೇ ಸಮಾಜದ ಹಿತವಿಲ್ಲ; ಒಂದೇ ಮಾನವ ವಂಶದ ಹಿತವಿಲ್ಲ; ಒಂದೇ ಜಗತ್ತಿನ ಹಿತವಿಲ್ಲ. ಇಲ್ಲಿ ಇಡೀ ವಿಶ್ವದ ಹಿತವೇ ಅವರ ಸಾಧ್ಯವಾಗಿದೆ. ಪರಮೇಶ್ವರನ ಆಜ್ಞೆಗಳನ್ನು ಜರುಗಿಸಲಿಕ್ಕೆ ನಿಮಿತ್ತ ಮಾತ್ರರಾಗುವದೇ ಅವರ ಧ್ಯೇಯವಾಗಿದೆ. ಪರಮಾತ್ಮನಿಗೆ ಎಲ್ಲರೂ ಒಂದೇ. ಹಿಂದೂಗಳೂ ಅಷ್ಟೇ; ಮುಸಲ್ಮಾನರೂ ಅಷ್ಟೇ; ಯುರೋಪಿಯನ್ನರೂ ಅಷ್ಟೇ; ಎಲ್ಲರೂ ಮುನುಷ್ಯರು. ತದಿತರ ಪ್ರಾಣ್ಯುದ್ಭಿಜಾದಿ ಕೋಟಿಗಳೂ ಅಷ್ಟೇ. ಎಲ್ಲರ ಹಾಗೂ ಎಲ್ಲವುಗಳ ಕಲ್ಯಾಣವೇ ಪರಮೇಶ್ವರನ ಉದ್ದೇಶವಾಗಿದೆ.

ಈ ಸಂದೇಶವನ್ನು ಅಮಾನ್ಯ ಮಾಡುವದೆಂದರೆ ದೇವರನ್ನೇ ಅಮಾನ್ಯ ಮಾಡಿದಂತೆ. ಆತ್ಮಶುದ್ಧಿಯನ್ನು ಮಾಡಿಕೊಂಡು ಸತ್ಕ್ರಿಯ ಕುಸುಮಗಳಿಂದ ಜಗಚ್ಚಾಲಕನ್ನು ಆರಾಧಿಸುವದಕ್ಕೆ ಅಸಮ್ಮತಿಯನ್ನು ತೋರಿಸುವದೆಂದರೆ, ಅದು ಸ್ವಂತದ ಘಾತವಾಗಿರುತ್ತದಲ್ಲದೇ, ಸಮಾಜದ ಅನಹಿತವು, ದೇಶದ ದುರ್ದೈವವಾಗಿರುತ್ತದೆ. ಮಾನವ ಕುಟುಂಬಕ್ಕೇ ಅಪಮಾನಕರವಾಗುತ್ತದೆ. ಒಟ್ಟಿನಲ್ಲಿ ಪರಮೇಶ್ವರನ ಕುರಿತು ಅವಜ್ಞೆಯಾಗುತ್ತದೆ.

**ಏಳಿರಿ! ಎಚ್ಚರಾಗಿರಿ!! ಮುಂದೆ ಸಾಗಿರಿ!!!**

**– ಮಂಗಲಂ –**

**ಟಿಪ್ಪಣಿ:** "ಪ್ರವಾಹ ಪತಿತರು"

ಶಂ.ಬಾ. ಜೋಶಿಯವರು ಈ ವಿಷಯದ ಕುರಿತು 'ಪ್ರವಾಹ ಪತಿತರ ಕರ್ಮ, ಹಿಂದೂ ಎಂಬ ಧರ್ಮ" ಎನ್ನುವ ಗ್ರಂಥವೊಂದನ್ನು ರಚಿಸಿದ್ದಾರೆ. ಅದರಲ್ಲಿ ಈ ವಿಷಯದ ಸುದೀರ್ಘ ವಿವರಣೆಗಳನ್ನು ಕಾಣಬಹುದು.

ಕನ್ನಡದಲ್ಲಿ ಪ್ರಪ್ರಥಮವಾಗಿ ಶ್ರೀ ಅರವಿಂದರನ್ನು ಕುರಿತು ಪ್ರಕಾಶನ–ಗೊಂಡಿರುವ ಅಪರೂಪದ ದಾಖಲೆ ಇದು. ಹನ್ನೆರಡು ಕಂತುಗಳಲ್ಲಿ ಆ ಕೃತಿಯನ್ನು ಇಲ್ಲಿ, ಓದುಗರಿಗೆ ಪರಿಚಯಿಸಲು ಪ್ರಯತ್ನಿಸಲಾಗಿದೆ. ಶ್ರೀ ಅರವಿಂದರು ಇನ್ನೂ 'ಸಾವಿತ್ರಿ', 'ದಿವ್ಯ ಜೀವನ'ದ ರಚನಾ ಹಂತದಲ್ಲಿರುವಾಗಲೇ, ಅವರ ಬಗೆಗೆ ದೇಶದಾದ್ಯಂತ ಇದ್ದ ಆರಾಧನಾ ಮನೋಭಾವವನ್ನೂ ಹಾಗೂ ಶ್ರೀ ಅರವಿಂದರು 'ಯುಗಪುರುಷ' ಎನ್ನುವದನ್ನು ನೂರು ವರ್ಷದ ಹಿಂದೆಯೇ ಭಾರತ ಸಮ್ಮತಿಸಿರುವದನ್ನು ಇಲ್ಲಿ ಕಾಣಬಹುದು. ಶ್ರೀ ಅರವಿಂದರನ್ನು ಅರ್ಥೈಸಿಕೊಳ್ಳಲು ಈ ಪುಸ್ತಕವು ಒಂದು ಉತ್ತಮ ಅವಕಾಶವನ್ನೂ ಒದಗಿಸುತ್ತಿದೆ. [ಸಂ]

# "ಶ್ರೀ ಅರವಿಂದರು–150"

## ಸಾಧಕರ ಪರಿಚಯ – 2

## ಪೂರ್ಣಯೋಗದ ಮಹಾಪಥಿಕ ಮಧುರಚೆನ್ನರು

**2**

**– ಡಾ॥ ಎಸ್.ಕೆ. ಕೊಪ್ಪಾ, ಇಂಡಿ (ವಿಜಯಪುರ)**

ಸಂಶಯ ಪ್ರವೃತ್ತಿಯನ್ನು ಹೋಗಲಾಡಿಸಲು ಶ್ರೀ ಅರವಿಂದರು ಸೂಚಿಸುವ ಸತ್ಸಂಗ, ಶಾಸ್ತ್ರ ವ್ಯಾಸಂಗ, ವಿಶ್ವಚಾಲಕತ್ವದ ಮೇಲೆ ಹೊರೆ ಹಾಕಿ ಮುಂದುವರೆಯುವ ಮಾರ್ಗೋಪಾಯಗಳು, ಕತ್ತಲೆಯಲ್ಲಿ ತಡಕಾಡುತ್ತಿರುವವನಿಗೆ ಕೈದೀಪ ಸಿಕ್ಕಂತಾಯಿತು. ಇಂಗ್ಲೀಷ ಬಾರದ ಮಧುರಚೆನ್ನರು ಮೊದಮೊದಲಿಗೆ ಶ್ರೀ ಅರವಿಂದರ ಅನುವಾದದ ಗ್ರಂಥಗಳನ್ನು ಓದಿದರು. ಅವರಿಗಾಗ 33 ವರ್ಷ! ಮೂಲ ಗ್ರಂಥಗಳ ವಿಚಾರಗಳು ಅನುವಾದಗಳಲ್ಲಿ ಎಷ್ಟರಮಟ್ಟಿಗೆ ಸಮಪರ್ಕವಾಗಿದೆ? ಎನ್ನುವ ಸಂಶಯ ಉಂಟಾಗಿ, ಪರಿಶ್ರಮ ಪಟ್ಟು ಮೂಲ ಗ್ರಂಥಗಳನ್ನೇ ಓದಲು ಪ್ರಾರಂಭಿಸಿದರು. ಅನುವಾದ ಗ್ರಂಥಗಳಿಗಿಂತ ಭಿನ್ನವಾದ ವಿಚಾರಗಳನ್ನು ಅವರು ಅಲ್ಲಿ ಕಂಡುಕೊಂಡರು. ಹೀಗಾಗಿ ಮೂಲ ಗ್ರಂಥಗಳನ್ನು ಓದುವದರ ಸಲುವಾಗಿಯೇ ಹಲವು ಭಾಷೆಗಳನ್ನೂ ಕಲಿತರು. ಶ್ರೀ ಅರವಿಂದರ ದರ್ಶನವನ್ನು ತಿಳಿದುಕೊಳ್ಳಲು ಪೂರ್ವಭಾವಿಯಾಗಿ ಕೆಲವು ಗ್ರಂಥಗಳನ್ನು ಶ್ರದ್ಧೆಯಿಂದ ಪಾರಾಯಣ ಮಾಡಿದರು. ಒಂದೆರಡು ಗ್ರಂಥಗಳನ್ನು ಅರ್ಥಪೂರ್ಣವಾಗಿ ಅನುವಾದಿಸತೊಡಗಿದರು. ಅವರ ಮಟ್ಟಿಗೆ ಇದು ಒಂದು ಸಾಧನೆಯೇ ಆಗಿತ್ತು. ಶ್ರೀ ಅರವಿಂದರ 'ಯೋಗದ ಸಾಧನೆ', 'ದ ಮದರ್', 'ಯೋಗ ಮತ್ತು ಅದರ ಉದ್ದೇಶ' ಮೊದಲಾದ ಮೂಲ ಗ್ರಂಥಗಳು ಮಧುರಚೆನ್ನರ ಶ್ರದ್ಧೆಯನ್ನು ಹೆಚ್ಚಿಸಿ ಬುದ್ಧಿ, ಭಾವಕ್ಕೆ ಹೊಸ ಬೆಳಕನ್ನು ನೀಡಿದವು. ಅದರಿಂದ ಶ್ರೀ ಅರವಿಂದರ ದರ್ಶನಾಕಾಂಕ್ಷೆಯು ದಿನದಿಂದ ದಿನಕ್ಕೆ ತೀವ್ರತರವಾಗಿ ಹೆಚ್ಚತೊಡಗಿತು.

ಇನ್ನೊಂದೆಡೆ, ಹಲಸಂಗಿಯಲ್ಲಿ ಗೆಳೆಯರೆಲ್ಲಾ ಸೇರಿ **"ಶಾರದಾ ವಾಚನಾಲಯ"**ವನ್ನು 1922 ರಲ್ಲಿ ಸ್ಥಾಪಿಸಿದರು. ಅದು ಹಳ್ಳಿಯ ಜನತೆಯಲ್ಲಿ ಸಾಹಿತ್ಯದ ಸದಭಿರುಚಿಯನ್ನು ಮೂಡಿಸಲು ಸಹಾಯಕವಾಯಿತು. ಅವರು

ಹೊರಡಿಸಿದ **“ಮೊಗ್ಗು”** ಕೈಬರಹ ಪತ್ರಿಕೆಯು, ಎಲ್ಲ ಗೆಳೆಯರ ಸೃಜನಶಕ್ತಿಗೆ ನೀರೆರೆಯಿತು. ಅಂಧಶ್ರದ್ಧೆಯ ವಿರೋಧಿಗಳಾದ ಗೆಳೆಯರು ಹುಟ್ಟುಹಬ್ಬ–ಉತ್ಸವ, ಬಯಲಾಟ, ಜನಪದ ಹಾಡುಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ಇದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯಾಂದೋಲನದ ಗಾಳಿ ಹಲಸಂಗಿ ಗೆಳೆಯರನ್ನೂ ತಾಕಿತು. 1924 ರಲ್ಲಿ ರಾಷ್ಟ್ರೀಯ ಮಹಾಸಭೆಯು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆಯಿತು. ಆ ಸಭೆಗೆ ಮಧುರಚೆನ್ನರೊಂದಿಗೆ ಗೆಳೆಯರೆಲ್ಲಾ ಭಾಗವಹಿಸಿದ್ದರು.

ಪ್ರಾಚೀನ ಸಾಹಿತ್ಯದ ಅಧ್ಯಯನದೊಂದಿಗೆ ಸ್ವಪ್ರಯತ್ನದಿಂದ ಶಿಲಾ ಲಿಪಿಗಳನ್ನು ಓದಿದ ಮಧುರಚೆನ್ನರು 1924 ರ ಸಮಯಕ್ಕೇ ಕನ್ನಡ **‘ಪ್ರಾಚೀನ ಲಿಪಿ ಬೋಧಿನಿ’** ಎನ್ನುವ ಪುಸ್ತಕವನ್ನೂ ಬರೆದರು. ಆ ಕಾಲದ ವಿದ್ವಾಂಸರಾದ ಆರ್. ನರಸಿಂಹಾಚಾರ್, ಶಂ.ಬಾ. ಜೋಶಿ, ಫ.ಗು. ಹಳಕಟ್ಟಿ, ಚೆನ್ನಕೇಶವ ಐಯ್ಯಂಗಾರ್, ಶಿ.ಚೆ. ನಂದಿಮಠ ಮೊದಲಾದವರ ಸಂಪರ್ಕ ಹೊಂದಿದ್ದರು. ವಿವಧ ವಿಷಯಗಳಿಗೆ ಸಂಬಂಧಿಸಿದ ಸುಮಾರು 73 ಲೇಖನಗಳನ್ನು **‘ಮಧುರಚೆನ್ನರ ಲೇಖನಗಳು’** ಹೆಸರಿನಲ್ಲಿ ಗುರುಲಿಂಗ ಕಾಪಸೆಯವರು ಸಂಪಾದಿಸಿ ಕೊಟ್ಟಿದ್ದಾರೆ. ಅಲ್ಲೆಲ್ಲ ಅವರ ಸಾಂಸ್ಕೃತಿಕ ಕಾಳಜಿ, ಸಾಹಿತ್ಯ ಮತ್ತು ಇತಿಹಾಸದ ಮೇಲೆ ಬೆಳಕು ಚೆಲ್ಲುವ ಕುತೂಹಲ, ಸತ್ಯವನ್ನು ಗುರುತಿಸುವ ವಿಚಾರಪರತೆ ಎದ್ದು ಕಾಣುತ್ತದೆ. ಸತ್ಯದ ಭಕ್ತರಾದ ಅವರು ಬರವಣಿಗೆಯಲ್ಲಿಯೂ ಸಾಹಿತ್ಯ ಸಂಶೋಧಕರಾದರೆ, ಬದುಕಿನಲ್ಲಿ ಆತ್ಮಸಂಶೋಧಕರಾಗಿದ್ದಾರೆ.

ಸಾಧಕ ಜೀವನವನ್ನು ಮುಂದುವರೆಸಿದ ಮಧುರಚೆನ್ನರಿಗೆ ಮನೋನಿಗ್ರಹ ಮುಖ್ಯವೆನಿಸಿತು. ಅದಕ್ಕಾಗಿ ವಿವೇಕಾನಂದರು ಮತ್ತು ಶ್ರೀ ಅರವಿಂದರ ವಿಚಾರಗಳಿಗೆ ಮಾರು ಹೋದರು. ಆ ಕುರಿತು ಚಿಂತನೆ ನಡೆಸಿದ ಅವರಿಗೆ **ಶ್ರೀ ಅರವಿಂದರ ‘ವಿಚಾರ ನಿಸ್ತರಂಗೀಕರಣ’ ಪದ್ಧತಿಯು** ಬಹುವಾಗಿ ಆಕರ್ಷಿಸಿತು. ಈ ಧ್ಯಾನ ಸಾಧನೆಗಾಗಿ ಹಲವಾರು ಗ್ರಂಥಗಳನ್ನು ಓದಿದರು. ಅವುಗಳಲ್ಲಿ **ಸ್ಪೆನ್ಸರನ “ಆಜ್ಞೇಯ ಮೀಮಾಂಸೆ”,** ಜಾರ್ಜ ರಸೆಲ್(ಏಇ) ಅವರ **“ದರ್ಶನ ದೀಪಿಕೆ” (ದ ಕ್ಯಾಂಡಲ್ ಆಫ್ ವಿಜನ್)** ಪ್ರಮುಖ ಗ್ರಂಥಗಳಾಗಿವೆ. ಹೀಗೆ ತಮ್ಮ ಸಾಧನೆಯ ಏರಿಳಿತಗಳನ್ನು ಅನುಭವಿಸುತ್ತಲೇ ಅವರಿಗೆ 25 ಸಂವತ್ಸರಗಳು ಸಂದವು. 26 ನೇ ವರ್ಷಕ್ಕೆ ದೀರ್ಘಕಾಲೀನ ರೋಗ ಬಾಧಿಸಿತು. ಗೆಳೆಯರೆಲ್ಲಾ ಸೇರಿ ಅವರನ್ನು ಬಾಗಲಕೋಟೆಯ ಬುರ್ಲಿ ಗೋಪಾಲಾಚಾರ್ಯರ ಆರೋಗ್ಯಧಾಮಕ್ಕೆ

ಕರೆತಂದರು. ಅಲ್ಲಿ ಅವರು ದೇವನಿರುವ ಪರಿಯನು ಕಂಡುಕೊಂಡರು. ಅದನ್ನ ಮಧುರಚೆನ್ನರು ತಮ್ಮ **"ನನ್ನ ನಲ್ಲ"** ಕವಿತೆಯಲ್ಲಿ ಹೀಗೆ ತೊಡಿಕೊಂಡಿದ್ದಾರೆ;

**"ಈ ಸುದಿನ ಕಂಡಿದ್ದೆ ಬಾಗಿಲಿಲ್ಲದ ಕೋಟೆ, ಇಂದು ಬಾಗಿಲುಕೋಟೆಯಾಯಿತಲ್ಲ"**
**ಈಸೀಸಿ ದಣಿದಣಿದು ಕೊನೆಗೆ ದಂಡೆಯ ಕಂಡೆ, ಇಂತು ದೇವನ ರಾಜ್ಯ ಲಭಿಸಿತಲ್ಲ"**

ಎನ್ನುವ ಮಧುರಚೆನ್ನರು, **"ಹಿಂದೆ ಕತ್ತಲೆಯಲ್ಲಿ ಕಂಗೆಟ್ಟು ಕೊರಗಿದೆನು। ಇಂದೊಳಗು ಹೊರಗು ಬೆಳಗಾಯಿತಲ್ಲ"** ಎಂದು ಹೇಳುವಲ್ಲಿ, ಇದುವರೆಗೆ ಅವರಿಗೆ ದೇವನಿರುವಿಕೆಯ ಬಗೆಗೆ ಸಂಶಯವು ನಿವಾರಣೆಯಾಯಿತು. **'ಪ್ರಗಾಢ ಸ್ಪರ್ಶ'**ವು ಆವರಿಸಿತು. ಇದನ್ನೇ **'ವಿಶ್ವಪ್ರಜ್ಞೆ', 'ಬ್ರಹ್ಮ ಸಂಪಸ್ಪರ್ಶ' (ಕಾಸ್ಮಿಕ್ ಕಾನ್ಸಿಯಸ್‌ನೆಸ್)** ಎಂದು ಕರೆಯಲಾಗಿದೆ. ಮಧುರಚೆನ್ನರ ಆಧ್ಯಾತ್ಮ ಸಾಧನೆಯ ಆತ್ಮಕಥನಗಳಾದ **"ಪೂರ್ವ ರಂಗ", "ಕಾಳ ರಾತ್ರಿ", ಮತ್ತು "ಬೆಳಗು", 'ಆತ್ಮ ಸಂಶೋಧನೆ'**ಗಳು ಇಂತಹ ಹಿನ್ನೆಲೆಯಲ್ಲಿ ಮೂಡಿಬಂದಿವೆ. ನಂತರದಲ್ಲಿ ಬಂದ ಅನುಭಾವ ಕಾವ್ಯ **"ನನ್ನ ನಲ್ಲ"**ವು ಆತ್ಮಕಥನದ ಪಡಿನೆಳಲೇ ಆಗಿದೆ. ಸರಿಸುಮಾರು ಇದೇ ಕಾಲಕ್ಕೆ ಅವರು ವಿಶ್ವದ ಅನುಭಾವಿಗಳ ಸಾಧನೆಯನ್ನು ತಿಳಿದುಕೊಳ್ಳಲು ಅಧ್ಯಯನ ನಿರತರಾದರು. ಶ್ರೀ ರಾಮಕೃಷ್ಣ ಪರಮಹಂಸರ **'ಭಕ್ತಿ ಮಾರ್ಗ'**ಕ್ಕಿಂತ ಶ್ರೀ ಅರವಿಂದರ "ಪೂರ್ಣ ಯೋಗ"ದ ಮಾರ್ಗವು ಅವರನ್ನು ಹೆಚ್ಚು ಆಕರ್ಷಿಸಿತು. ಶ್ರೀ ಅರವಿಂದರ ದರ್ಶನ ಪಡೆಯುವ ಹಂಬಲವೂ ಅವರಲ್ಲಿ ದಿನೇ ದಿನೇ ಹೆಚ್ಚುತ್ತ ಸಾಗಿತು.

ಶ್ರೀ ಅರವಿಂದರ ದರ್ಶನವನ್ನು ಕೋರಿ 1933 ರಲ್ಲಿ ಮಧುರಚೆನ್ನರು ಒಂದು ಪತ್ರವನ್ನು ಬರೆಯುತ್ತಾರೆ. ಆದರೆ ಅದಕ್ಕೆ ಯಾವುದೇ ರೀತಿಯ ಉತ್ತರ ಬರುವದಿಲ್ಲ. 'ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು' ಎಂದು ಅವರೇ ಬರೆದಿರುವಂತೆ, ಅವರ ಬಯಕೆಯೂ ಈಡೇರುವ ಕಾಲವು ಕೂಡಿ ಬಂದಿತು. 1938 ರ ಅಸ್ಟ 15 ರಂದು ದರ್ಶನಕ್ಕೆ ಅನುಮತಿ ದೊರೆತಿತ್ತು. ಆಗ ಆವರಿಗಾದ ಆನಂದ ಅಪರಿಮಿತ. ಮೊದಲ ದರ್ಶನ ಪಡೆಯುವಾಗಿನ ಅನುಭವವನ್ನು ಅವರ ಮಾತಿನಲ್ಲಿಯೇ ನೋಡಬೇಕು, "ಸಂದರ್ಶನದ ದಿನ ಹೂಮಾಲೆಯನ್ನು ತೆಗೆದುಕೊಂಡು ಸಾಲಿನಲ್ಲಿ ನಿಂತು, ಶ್ರೀ ಅರವಿಂದರ ಕೋಣೆಗೆ ಸಾಗಿದೆನು. ಸಾಲಿನಲ್ಲಿ ಮುಂದೆ ಮುಂದೆ ಸಾಗುತ್ತಿದ್ದಾಗ, ನನ್ನ ಮನಸ್ಸು ನನ್ನ ಅಲ್ಪತೆ, ಅನರ್ಹತೆಗಳನ್ನು ಬಗೆದು ನನ್ನನ್ನು ನಿರ್ವಿಣ್ಣನನ್ನಾಗಿಸಿತ್ತು. ಆದರೂ ಅವರನ್ನು

ಕಾಣಲು ಹೂಮಾಲೆ ಹಿಡಿದು ಸಾಲಿನಲ್ಲಿ ಕಾಯುತ್ತಿದ್ದೆ. ಆಶ್ರಮವನ್ನಾಗಲೀ ಅಥವಾ ಆಶ್ರಮವಾಸಿಗಳನ್ನಾಗಲಿ ನೋಡಲೂ ಅಸಮರ್ಥನಾಗಿದ್ದೆನು. ಆದರೆ ಶ್ರೀ ಅರವಿಂದರ ಹತ್ತಿರ ಹೊದಾಗ, ಗಟ್ಟಿ ಜೀವ ಮಾಡಿ ಕಣ್ತೆರೆದು ನೋಡಿದೆನು. ಆಹಾ! ಭಗವಾನ್ ಶ್ರೀ ಅರವಿಂದರು! ಅಲ್ಲಿಯೇ ಅವರ ಬಲಬದಿಗೆ ಜಗಜ್ಜನನಿ!! ಶ್ರೀ ಭಗವಾನ ಅರವಿಂದರ ಹಾಗೂ ಶ್ರೀಮಾತೆಯವರ ದಿವ್ಯ ದರ್ಶನವೆಂದರೆ, ಪ್ರತ್ಯಕ್ಷ ಶಿವ–ಪಾರ್ವತಿಯರ ದರ್ಶದಂತೆಯೇ ನನಗೆ ಸ್ಪಷ್ಟವಾಗಿ ಅನಿಸಿತು".

ಪ್ರಥಮ ದರ್ಶನದ ನಂತರದಲ್ಲಿ ಮಧುರಚೆನ್ನರು ತಮ್ಮನ್ನು ಸಂಪೂರ್ಣವಾಗಿ ಶ್ರೀಮಾತಾರವಿಂದರಿಗೆ ಸಮರ್ಪಿಸಿಕೊಂಡರು. ಅವರಿಬ್ಬರ ದರ್ಶನದಿಂದ ಮಧುರಚೆನ್ನರ ಬುದ್ಧಿಯೂ ನೂರುಪಟ್ಟು ಹೆಚ್ಚಿತು. ದರ್ಶನಕ್ಕಿಂತ ಮೊದಲು, ಶ್ರೀ ಅರವಿಂದರ 50–60 ಪುಟಗಳ ಲೇಖನಗಳನ್ನು ತಿಳಿದುಕೊಳ್ಳಲು 15 ವರ್ಷಗಳೇ ಹಿಡಿದಿದ್ದವು, ಆದರೆ ಅವರ ದರ್ಶನದ ನಂತರದಲ್ಲಿ ಎರಡೇ ವರ್ಷಗಳ ಅವಧಿಯಲ್ಲಿ ಶ್ರೀ ಅರವಿಂದರ ಸಾವಿರಾರು ಪುಟಗಳ ಮೂರು ಗ್ರಂಥಗಳನ್ನು ಅರಿತುಕೊಳ್ಳಲು ಕೇವಲ ಎರಡೇ ವರ್ಷದಲ್ಲಿ ಸಾಧ್ಯವಾಯಿತು ಎಂದು ತಮ್ಮ "ಆತ್ಮ ಶೋಧನೆ"ಯಲ್ಲಿ ಬರೆದಿದ್ದಾರೆ. ಶ್ರೀಮಾತೆಯವರ ಗ್ರಂಥಗಳನ್ನು ಮೂಲಭಾಷೆಯಲ್ಲಿಯೇ ಓದಬೇಕೆಂಬ ಹಂಬಲದಿಂದ ಫ್ರೆಂಚ್ ಭಾಷೆಯನ್ನೂ ಕಲಿತರು. ಅಂದಿನ ಕಾಲದಲ್ಲಿ ಪಾಂಡೀಚೇರಿಗೆ – ಆಶ್ರಮಕ್ಕೆ ಹೋಗಿ ಬರುವದು ಅಷ್ಟೊಂದು ಸುಲಭ ಸಾಧ್ಯವಿರಲಿಲ್ಲ. ಆದರೂ ಮಧುರಚೆನ್ನರು ವರ್ಷದಲ್ಲಿ ಕನಿಷ್ಠ ಮೂರು ಬಾರಿಯಾದರೂ ಪಾಂಡಿಚೇರಿಗೆ ಹೋಗಿ ಬರತೊಡಗಿದರು. ಜೊತೆಗೆ ತಮ್ಮ ಗೆಳೆಯರ ದೃಷ್ಟಿಯನ್ನೂ ಆ ಕಡೆಗೆ ಹೊರಳಿಸಿದರು. ಇದರಿಂದ ಪಾಂಡಿಚೇರಿಗೆ ಹೋಗಿ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯತೊಡಗಿತು. ಹೀಗಾಗಿ **ಗೆಳೆಯರ ಗುಂಪು** ಸದ್ದಿಲ್ಲದೇ **ಶ್ರೀ ಅರವಿಂದ ಮಂಡಳ**ವಾಗಿ ಮಾರ್ಪಟ್ಟಿತು. ಶ್ರೀ ಅರವಿಂದ ಮಂಡಳವಾದ ನಂತರ ವಿಜಾಪೂರ ಜಿಲ್ಲೆಯಾದ್ಯಂತ ಹಬ್ಬಿತು.

ವಿಜಯಪುರ ಜಿಲ್ಲೆಯ 8–10 ತಾಲೂಕುಗಳಲ್ಲಿ ಶ್ರೀ ಅರವಿಂದ ಮಂಡಳವು ಕಾರ್ಯರೂಪಕ್ಕೆ ಬಂದವು. ಅಲ್ಲಿನ ನೂರಾರು ಜನರು ಶ್ರೀಮಾತಾರವಿಂದರ ತತ್ತ್ವ–ಸಿದ್ಧಾಂತಗಳಿಗೆ ಮಾರುಹೋಗಿ ಮಧುರಚೆನ್ನರೊಡನೆ ಪಾಂಡಿಚೇರಿಗೆ ಹೋಗಿ ಬಂದರು. ಅವರು ಹೋದ ಊರುಗಳಲ್ಲಿ, ಮನೆಮನೆಗಳಲ್ಲಿ ಶ್ರೀ ಅರವಿಂದ ಪ್ರಕಾಶ ಬೆಳಗತೊಡಗಿತು. ಶ್ರೀ ಅರವಿಂದರ ಯೋಗಧ್ವನಿಯು

ಹಳ್ಳಿಹಳ್ಳಿಗೂ ತಲುಪಿತು. ಮಧುರಚೆನ್ನರ ಗೆಳೆತನದ ವ್ಯಾಪ್ತಿ ತುಂಬ ವಿಸ್ತಾರದ್ದು. ಗುರುಲಿಂಗ ಕಾಪಸೆಯವರು ಹೇಳುವಂತೆ ಅದನ್ನು ಗುರುತಿಸುವದು ಕಷ್ಟದ ಕೆಲಸ. ಅದನ್ನು ನಿಲುಕಿಸಲು ಹತ್ತಿರ ಹತ್ತಿರ ಹೋದಂತೆ ಕ್ಷಿತಿಜದಂತೆ ಮತ್ತೂ ಮತ್ತೂ ವಿಸ್ತಾರವಾಗುತ್ತ ಹೋಗುತ್ತದೆ. ಹಲಸಂಗಿ ಅದರ ಸುತ್ತಮುತ್ತಲಿನ ಹಳ್ಳಿ–ಪಟ್ಟಣ, ಧಾರವಾಡ, ಅದರ ಅಗಲಕ್ಕೆ ಹಬ್ಬಿದ ಪ್ರದೇಶ, ಪಾಂಡಿಚೇರಿ ಬಿಂದುವಿನಿಂದ ಹೊರಟ ತ್ರಿಜ್ಯಗಳಾಗಿವೆ. ಅವುಗಳ ಅಂಚುಗಳಾಗಿವೆ. ಒಂದರಿಂದ ಒಂದು ಬೆಳೆಯುತ್ತಲೇ ಬಂದವು. ಇಂತಹ ವಿಶೇಷ ವ್ಯಕ್ತಿತ್ವವನ್ನು ಹೊಂದಿದ್ದ ಮಧುರಚೆನ್ನರು 1953 ರಲ್ಲಿ – ಅವರು 50 ನೇ ವರ್ಷದಲ್ಲಿ – ದೇಹತ್ಯಾಗ ಮಾಡಿದ್ದಾರೆ. ತಮ್ಮ ಆಧ್ಯಾತ್ಮಿಕ ಸಾಧನೆಯಿಂದ "ಪೂರ್ಣ ಯೋಗ"ದ ಪಥದಲ್ಲಿ ಸಾಗಿ, ಏನೇನು ಸಾಧಿಸಬೇಕಾಗಿತ್ತೋ ಎಲ್ಲವನ್ನೂ ಸಾಧಿಸಿದ್ದಾರೆ.

ತಮ್ಮ ಆಧ್ಯಾತ್ಮ ಸಾಧನೆಯ ಇತಿವೃತ್ತವನ್ನು 1949 ರಲ್ಲಿ ಬರೆದು ಮುಗಿಸಿದ ಮಧುರಚೆನ್ನರು 1953 ಅಗಸ್ಟ 15 ರವರೆಗೆ ನಮ್ಮ ಮಧ್ಯದಲ್ಲಿ ಮಾರ್ಗದರ್ಶಿಯಾಗಿ ಬೆಳಗಿದರು. ಅವರು ದೈಹಿಕವಾಗಿ ಈಗ ನಮ್ಮ ಮಧ್ಯದಲ್ಲಿ ಇರಲಿಕ್ಕಿಲ್ಲ. ಆದರೆ ಅವರು ಬರೆದ ಗ್ರಂಥಗಳು, ಲೇಖನಗಳು ನಮ್ಮ ಮುಂದಿವೆ. ಅವರ ಪ್ರೀತಿಯ ಅನುಶಾಸನ ಎಂದೆಂದೂ ಮರೆಯದಂತಿದೆ;

**"ದೇವ ಲೀಲೆಯೊ ಕಾಣೆ ಕರ್ಮ ಜಾಲವೊ ಕಾಣೆ**
**ಅದು ನಮ್ಮ ಬುದ್ಧಿಯಾಚೆಗಿನ ಮಾತು**
**ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು**
**ಭವದಲ್ಲಿ ಕಾಣೆ ಮನಗಂಡ ಮಾತು"**

*****

**ಗ್ರಂಥ ಋಣ:**

1. ಮಧುರಚೆನ್ನರ ಸ್ಮೃತಿಗಳು – ಸಿಂಪಿ ಲಿಂಗಣ್ಣ
2. ಮಧುರಚೆನ್ನ; ಜೀವನ ಹಾಗೂ ಕೃತಿಗಳ ಸಮೀಕ್ಷೆ/ಮಧುರಚೆನ್ನರ ಲೇಖನಗಳು – ಸಂ. ಗುರುಲಿಂಗ ಕಾಪಸೆ
3. ಮಧುರಚೆನ್ನರ ಆತ್ಮಶೋಧ/ಮಧುರಚೆನ್ನ – ಬದುಕು–ಬರಹ–ಚಿಂತನೆ – ಸಂ. ಗುರುಲಿಂಗ ಕಾಪಸೆ

4. ಮಧುರಚೆನ್ನರ ದರ್ಶನ – ಸಂ. ಡಾ॥ ಎಸ್.ಕೆ. ಕೊಪ್ಪಾ ಮತ್ತು ಡಾ॥ ಎಂ.ಎಸ್. ಮದಭಾವಿ

---

**ಟಿಪ್ಪಣಿ:**

ಮಧುರಚೆನ್ನರ ಸಾವು ಮತ್ತು ಬೇಂದ್ರೆ ಪ್ರತಿಕ್ರಿಯೆ; ಮಧುರಚೆನ್ನರು 1953 ರಲ್ಲಿ ತಮ್ಮ ಐವತ್ತನೇ ವಯಸ್ಸಿನಲ್ಲಿ ಇದ್ದಾಗ ತೀರಿ ಹೋದದ್ದು ಒಂದು ಕನ್ನಡ ಸಾಹಿತ್ಯದ ದುರಂತವೇ ಸರಿ. ಈ ವೇಳೆಗೆ ಬೇಂದ್ರೆಯವರು ತಮ್ಮ ಅಧ್ಯಾಪಕ ವೃತ್ತಿಯಲ್ಲಿ ಇದ್ದುಕೊಂಡು ಸೊಲ್ಲಾಪೂರದಲ್ಲಿ ವಾಸವಾಗಿದ್ದರು. ಜೀವದ ಗೆಳೆಯನನ್ನು ಕಳೆದುಕೊಂಡ ಬೇಂದ್ರೆಯವರು ಕೂಡಲೇ ಹಲಸಂಗಿಗೆ ಆಗಮಿಸಿ ಮಧುರಚೆನ್ನರ ಅಂತ್ಯಕ್ರಿಯೆ ನಡೆಯುವ ತನಕ ಅಲ್ಲಿಯೇ ಉಳಿದರು. ಮಧುರಚೆನ್ನರ ಅಂತ್ಯಕ್ರಿಯೆಗೆ ಬಂದಿದ್ದ ನೂರಾರು ಅಭಿಮಾನಿಗಳು, ಗೆಳೆಯರು ಬೇಂದ್ರೆಯವರ ನೇತೃತ್ವದಲ್ಲಿ ಶ್ರದ್ಧಾಂಜಲಿ ಸಭೆಯೊಂದನ್ನು ನಡೆಸಿದರು. ಅತ್ಯಂತ ಭಾವುಕರಾದ ಬೇಂದ್ರೆಯವರು ಅಗಲಿದ ಗೆಳೆಯನ ಬಗ್ಗೆ ಏನು ಮಾತನಾಡಬಹುದು ಎಂಬ ಕುತೂಹಲ ಎಲ್ಲರಲ್ಲೂ ಇತ್ತು. ಬೇಂದ್ರೆ ಮಧುರಚೆನ್ನರ ಬಗ್ಗೆ ಆಡಿದ ನಾಲ್ಕೇ–ನಾಲ್ಕು ಮಾತುಗಳು ಎಲ್ಲರಲ್ಲೂ ರೋಮಾಂಚನ ಮೂಡಿಸಿದವು. ಬೇಂದ್ರೆಯವರ ಮಾತು ಹೀಗಿತ್ತು, "ಯಾಕ ಯಾಕಾಂತ ಎಲ್ಲರೂ ಮೋರೆ ಸಪ್ಪಗ ಮಾಡಕಂಡ್ ಕುಂತೀರಿ? ನಾವು ಇವತ್ತು ಚೆನ್ನಪ್ಪನ ಹೂತಿಲ್ಲ, ಬಿತ್ತೇವಿ. ಭೂಮ್ಯಾಗ ಚೆನ್ನಪ್ಪ ಬೆಳೀ ಆಗಿ ಬೆಳೀತಾನ. ಬೆಳಿಯೊಳಗಿನ ಕಾಳು ಒಂದಿದ್ದು ಎರಡಾಗಿ, ಎರಡು ನಾಕಾಗಿ ನಾಡೆಲ್ಲ ತುಂಬ್ತದ, ನಾ ಹಂಗ ಭಾವಿಸಿಕೊಂಡೇನಿ. ನೀವೂ ಹಂಗನ ತಿಳ್ಕೋರಿ, ಆಗ ಮನಸು ಹಗುರ ಆಗ್ತದ".

ಬೇಂದ್ರೆಯವರು ಅಂದು ಆಡಿದ ಮಾತು ಇವತ್ತಿಗೂ ನಿಜವಾಗಿದೆ. 1943–44 ರಲ್ಲಿ ಮಧುರಚೆನ್ನರು ಮತ್ತು ಗೆಳೆಯರು ಚಡಚಣ, ಹಲಸಂಗಿ, ಅಥರ್ಗ, ಸಾಲೋಟಗಿ ಮುಂತಾದ ಗ್ರಾಮಗಳಲ್ಲಿ ಸ್ಥಾಪಿಸಿದ ಶ್ರೀ ಅರವಿಂದ ಭಜನಾ ಮಂಡಳಿಗಳು ಇಂದಿಗೂ ಕೂಡಾ ಕಾರ್ಯ ನಿರ್ವಹಿಸುತ್ತಾ ಹಲಸಂಗಿ ಗೆಳೆಯರ ನೆನಪನ್ನು ಜೀವಂತವಾಗಿರಿಸಿವೆ. [ಇದು 2009 ರಲ್ಲಿ "ಕೆಂಡ ಸಂಪಿಗೆ"ಯಲ್ಲಿ ಪ್ರಕಟವಾಗಿರುವ ಲೇಖನದ ಸಾಲುಗಳು] (ಸಂ)

## ಶ್ರೀ ಅರವಿಂದರ ಕವನ

# ಗಂಧ–ಬಂಧವದು ಛಂದ–ಸೌಗಂಧದಾನಂದ ನಂದದಲ್ಲಿ..

ನಿರ್ಗುಣದ ಚೈತ್ಯ ತಾನೊಂದು ಹೀಗೆ ಪರಿವರ್ತಗೊಂಡು ಆಗ
ಚೈತನ್ಯ ರೂಹು ಸಾಕಾರ ಸಗುಣದಲಿ ಮಿಡಿವ ಆತ್ಮವೀಗ
(ಸಾವಿತ್ರಿ; 2–14–291)

ಸಂವೇಗಗೊಂಡ ರಾಗದಾವೇಗದಾ ಅಗ್ನಿ–ಜ್ವಾಲೆಯೊಂದು
ಜೀವಾಂತರಾಳಗಳಲೀಗ ಪ್ರಜ್ವಲನದಲ್ಲಿ ಇಂದು
ಮಾಧುರ್ಯದುಂಬಿ ಕೋಮಲದ ಸ್ಪರ್ಶವದು ನಿರತ ನಿತ್ಯದೊಳಗು
ಸರ್ವ ಹೃದಯಗಳ ಸಮ್ಮಿಲಗೊಳಿಸೆ ಸಂಪರ್ಕ ಸಂಘ–ಬೆಳಗು

ಸಾವಿರದ ತಾವಿನೆಡೆಯಲ್ಲಿ ತೇಜದಾಕಾಶ ದ್ರವ್ಯದಲ್ಲಿ
ನಿರ್ಮಾಯ ಘನದ ತಲ್ಲೀಯದಲ್ಲಿ ಅಮರತ್ವ ಪ್ರೇಮದಲ್ಲಿ
ಅಮೃತತ್ವ ತುಂಬಿ ಅವಕಾಶವಾದ ಶಾಶ್ವತದ ತಾಣದಲ್ಲಿ
ಅರ್ಚನೆಯ ಸ್ಪಂದದೇಕೈಕ ಶುಭ್ರತೋಷವದು ಅದಿತಿಯಲ್ಲಿ
(ಸಾವಿತ್ರಿ; 2–24–291)

ಗಂಧ–ಬಂಧವದು ಛಂಧ–ಸೌಗಂಧದಾನಂದ ನಂದದಲ್ಲಿ
ಅದರೊಡನೆ ಮಿಳಿತು ಆನಂದವೊಂದು ಸಾನಂದ ಪಯಣದಲ್ಲಿ
ಸೌರಭವು ಮಧುರ ಮಧುಮಯದ ಪಾರದರ್ಶಕದ ಪರದೆಯಲ್ಲಿ
ಮಾಧುರ್ಯದಿಂದ ಮುದಹಸಿತ ಪುಷ್ಪಸಂಕುಲದ ಮಮತೆಯಲ್ಲಿ

ಕಲರವದ ಸಲಿ ಸಂಹೂತಿಯಲ್ಲಿ ವರ್ಣಾಂಕ ಪರದೆಯಲ್ಲಿ
ಸಂಲಗ್ನವಾಗಿ ಜೊತೆಯಲ್ಲಿ ಸುರಭಿಪರಿಮಳದ ರೂಪದಲ್ಲಿ
ದೇವಲೋಕದಾ ವ್ಯೋಮಭೂಮವನು ಭೂಧಾಮಕಿಳಿಸಿದಂತೆ
ಪ್ರತಿಗೊಳಿಸಿದಂತೆ ಅಚ್ಚೊತ್ತಿತೀಗ ಸಮತೆಯನು ಹರಡಿದಂತೆ
(ಸಾವಿತ್ರಿ; 2–12–293)

ಆ ದಿವ್ಯ–ಭೂಮ–ಚಿನ್ಮಯದ–ಜನ್ಮ ಉದ್ಭವಿಸಿ ಅರಳಿತಿಲ್ಲಿ
ಸಂಹತದಿ ಸ್ಥಿತದ ಚಿತ್–ಶಕ್ತಿಬೀಜ ಸ್ಫುರಣೆಯಲಿ ಪ್ರಕಟವಿಲ್ಲಿ

ಅನಂತಾನಂತದತ್ತ ವಿಕಸನದಿ ಪರಿಪೂರ್ಣ ಹಂತವಿಂದು
ಆ ಸಾಂತಕಿದ್ದ ಮಂದ ತೆವಳುವಿಕೆ ತಾನಿಲ್ಲಿ ಅಂತ್ಯಗೊಂಡು
(ಸಾವಿತ್ರಿ; 2–1–298)

---

**ಟಿಪ್ಪಣಿ:** ಸಂಹೂತಿ ಎಂದರೆ ವರ್ಣಗಳು(ಬಣ್ಣಗಳು) ಕಾಣುವದಕ್ಕೆ, ಪ್ರಕೃತಿಯಲ್ಲಿರುವ ಬೆಳಕಿನ ವಕ್ರೀಭವನದ ವಿಶೇಷ ಗುಣವಾಗಿದೆ. ಋತವು ಅವತರಣಗೊಂಡು ಭೂಧಾಮಕಿಳಿದಾಗ 'ದ್ಯಾವಾ–ಪೃಥಿವೀ' ಆಗುವದನ್ನು ಪ್ರಕಟಗೊಳಿಸುವ ದೃಷ್ಟಾಂತವಿದು.

**ಅನುವಾದ: ಪುಟ್ಟು ಕುಲಕರ್ಣಿ**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

1) ದಿನಾಂಕ 13ನೇ ನವಂಬರ್ 2021 ಶನಿವಾರ ಸಂಜೆ 4:00 ರಿಂದ 5:30 ಗಂಟೆಯ ವರೆಗೆ ಪ್ರೊ. ಆರ್.ಕೆ. ಕುಲಕರ್ಣಿ, ವಿಜಯಪುರ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "ಶ್ರೀ ಅರವಿಂದರ ಕಾವ್ಯಾನುವಾದಗಳು" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರುಬಂಧುಗಳು ಮತ್ತು ಶ್ರೀಮಾತಾರವಿಂದ ಭಕ್ತರು ಭಾಗವಹಿಸಿದ್ದರು.

2) ದಿನಾಂಕ 17ನೇ ನವಂಬರ್ ಬುಧವಾರದಂದು "ಶ್ರೀಮಾತೆಯವರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7:00 ಗಂಟೆಯಿಂದ 7:30ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5:00 ರಿಂದ 6:30 ಗಂಟೆಯ ವರೆಗೆ ಡಾ॥ ರ.ವಿ. ಜಹಗೀರ್‌ದಾರ್ ಇವರು "ಯೋಗದ ಮೂಲಾಂಶಗಳು: ಶ್ರೀಮಾತೆ ಅವರ ಉಪದೇಶ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಅನೇಕರು ಭಾಗವಹಿಸಿದ್ದರು.

3) ದಿನಾಂಕ 24ನೇ ನವಂಬರ್ 2021ರ ಬುಧವಾರ "ಶ್ರೀ ಅರವಿಂದರ ಸಿದ್ಧಿ" ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7:00 ಗಂಟೆಯಿಂದ 7:30ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5:00 ರಿಂದ 6:30 ಗಂಟೆಯ ವರೆಗೆ ಶ್ರೀ ರಾಜೀವ್ ನಾಡಿಗ್ ಇವರು "Sparkling Life Divine in Us" ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಅನೇಕರು ಭಾಗವಹಿಸಿದ್ದರು.


ಫೋಟೋ ಚಿತ್ರ ಪ್ರದರ್ಶನ "On Realisation" ವಿಷಯವಾಗಿ ದಿನಾಂಕ 24ನೇ ನವಂಬರ್‌ರಿಂದ 24ನೇ ಡಿಸೆಂಬರ್ 2021 ರವರೆಗೂ ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದೆ.

4) ದಿನಾಂಕ 27ನೇ ನವಂಬರ್ 2021 ಶನಿವಾರ ಸಂಜೆ 4:00 ರಿಂದ 5:30 ಗಂಟೆಯ ವರೆಗೆ ಡಾ॥ ಆನಂದ ರೆಡ್ಡಿ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "Levels of Godheads in Savitri" ಎಂಬ ವಿಷಯವಾಗಿ ಜೂಮ್ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ಅನಂತತೆಯತ್ತ ರಭಸದಲಿ ಅವನು ತನ್ನಾತ್ಮ ಮೂಲವಿರಿಸಿ
ತನ್ನ ಜೀವನಕೆ ನಿತ್ಯತ್ವ ನೆಲೆಯ ಆಧಾರವನ್ನು ಬಯಸಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 34)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಉಪಾಸನೆಗಾಗಿ ಉಪಾಸಕಗೀಗ ಉನ್ನತಿಯ ಮೆಟ್ಟಿಲಿಂದು
ಶರಣೆಂದು ಬಾಗಿ ನಿಂದಿರುವ ಶಕ್ತಿಮಹತಿಯಾ ಗತಿಯ ಕಂಡು
ಬಲು ನಿಕಟನವನು ದೇವಾಭಿಮಾನ–ಆನಂದಘನದ ಜೊತೆಗೆ
ಅವನಾತ್ಮ ಪ್ರೇಮದಾಧಿಕ್ಯ–ಸ್ಪಂದ ಸತತದಲಿ ದೊರೆವ ಒಸಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 3 ಪುಟ 12)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.